ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಭಾರತ ಮಹಿಳಾ ತಂಡದ ಮಧ್ಯಮ ವೇಗದ ಬೌಲರ್ ಅರುಂಧತಿ ರೆಡ್ಡಿ ಅವರು ಐಸಿಸಿ ಫೆಬ್ರುವರಿ ತಿಂಗಳ ಆಟಗಾರ್ತಿ ಗೌರವಕ್ಕೆ ಪಾತ್ರರಾಗಿದ್ದಾರೆ.

24 ಮಾರ್ಚ್ 2026 ಮಂಗಳವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 13 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ವಿದೇಶವಾಸಿಗೆ ಆರು ವರುಷ, ಚರ್ಚಾವಾಸಿಗೆ ಒಂದು ನಿಮಿಷ...! » 2

ಅರಣ್ಯ ಇಲಾಖೆ ವಿರುದ್ಧ ರೈತರ ಆಕ್ರೋಶ » 3

ಗ್ರಾಹಕರ ಹಕ್ಕುಗಳ ಬಗ್ಗೆ ಅರಿವು ಹೊಂದುವುದು ಜವಾಬ್ದಾರಿ » 4

2028ಕ್ಕೆ ರೇವಣ್ಣ ಶಕ್ತಿ ಪ್ರದರ್ಶನದ ಶಪಥ

ದ್ವೇಷ ರಾಜಕಾರಣಕ್ಕೆ ಉಳಿಗಾಲವಿಲ್ಲ | ಸರ್ಕಾರದ ವಿರುದ್ಧ ತೀಕ್ಷ್ಣ ವಾಗ್ದಾಳಿ

• ಪ್ರಜೋದಯ ವರದಿ

ಬೆಂಗಳೂರು: ವಿಧಾನಸಭೆ ಅಧಿವೇಶನದಲ್ಲಿ ಸೋಮವಾರ ರೋಷಾವೇಷದ ಭಾಷಣ ಮಾಡಿದ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು 2028ಕ್ಕೆ ಶಕ್ತಿ ಪ್ರದರ್ಶನದ ಶಪಥ ಮಾಡಿದರು.

ದೇವೇಗೌಡರ ಕುಟುಂಬ ಪಾಪದ ಕೆಲಸ ಮಾಡಿಲ್ಲ. ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ನಮ್ಮ ಶಕ್ತಿ ತೋರಿಸುತ್ತೇವೆಂದು ಗುಡುಗಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಾಜಕೀಯ ದ್ವೇಷ ಹೆಚ್ಚಾಗಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರನ್ನು ಉಲ್ಲೇಖಿಸಿದ ಅವರು, ರೇವಣ್ಣ ಮುಗಿದೇ ಹೋದ ಅಂದ್ಕೊಂಡಿದ್ದಾರೆ. ನೀವು ಉಪಮುಖ್ಯಮಂತ್ರಿ ಆಗಿದ್ದಾಗ ನಾನು ಮಂತ್ರಿ ಆಗಿದ್ದೆ. ಆವಾಗ ನನ್ನ ರಾಜಕೀಯ ಜೀವನ ಮುಗಿಸಬೇಕೆಂದು ದೆಹಲಿಯಲ್ಲಿ ಏನು ನಡೀತು ಎಂದು ಗೊತ್ತಿದೆ. ನಾನು ಯಾವುದಕ್ಕೂ ತಲೆ ಕೆಡಿಸಿಕೊಳ್ಳುವುದಿಲ್ಲ. 2028ಕ್ಕೆ ನೋಡೋಣ. ಅಲ್ಲಿವರೆಗೆ ಇದ್ದು ಚಾಲೆಂಜ್ ಮಾಡ್ತೀನಿ ಎಂದು ಅಸಮಾಧಾನ ಹೊರಹಾಕಿದರು.

ಯಾವ ಆಧಾರದ ಮೇಲೆ ಎಫ್ಐಆರ್

ವಿರೋಧ ಪಕ್ಷವನ್ನು ದಮನ ಮಾಡುವ ಕೆಲಸ ನಡೆಯುತ್ತಿದೆ. ಪರಮೇಶ್ವರ್ ಇಲ್ಲೇ ಕೂತವ್ರೇ, ನನ್ನನ್ನು ಬೆಂಗಳೂರಿಗೆ ಕರೆದುಕೊಂಡು ಬಂದು ಎಫ್ಐಆರ್ ಹಾಕಿಸಿದ್ರಲ್ಲ, ಆವಾಗ ನನ್ನ ಯಾವುದಾದರೂ ಒಂದು ಫೋಟೋ ಇತ್ತಾ. ನಾನು ಮಾತಾಡಿರುವ ಯಾವುದಾದರೂ ಕ್ಯಾಸೆಟ್ ಇತ್ತಾ. ಮುಂದಿನ ಸರ್ಕಾರಗಳು ಯಾವ ಯಾವ ರೀತಿ ಆಡಳಿತ ಮಾಡ್ಬೇಕು ಎಂಬು ದನ್ನು ನೀವು ತೋರಿಸಿಕೊಡುತ್ತಿದ್ದೀರಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪರಮೇಶ್ವರ್ ಅವರು ಇಕ್ಕಟ್ಟಿನಲ್ಲಿರುವಾಗ ನಾನ್ಯಾಕೆ ಅವರ ಬಗ್ಗೆ ದೂರಲಿ. ಯಾರು ಯಾರು ಏನೆಂದು ನನಗೆ ಗೊತ್ತಿದೆ. ನಾನು ಆರು ಬಾರಿ ಶಾಸಕನಾಗಿ ಮೂವತ್ತು ವರ್ಷಗಳಿಂದ ರಾಜಕೀಯದಲ್ಲಿ ಇದ್ದೇನೆ. ನಾನು ಯಾವತ್ತು ಲೂಟಿ ಮಾಡಿದ್ದೇನೆ. ಹಿಂದೆ ಹಲವು ಇಲಾಖೆಗಳ ಮಂತ್ರಿ ಆಗಿದ್ದೆ. ಆದರೂ ನನ್ನ ಮೇಲೆ ಸಿಓಡಿ ಸೇರಿ ಎಲ್ಲ ತನಿಖೆ ಮಾಡಿಸಿದ್ದಾರೆ. ಹೈಕೋರ್ಟ್, ಲೋಕಾಯುಕ್ತ ತನಿಖೆ ಏನಾಯಿತು ಎಂದು ವಾಗ್ದಾಳಿ ನಡೆಸಿದರು.

ಹೇಗಾದರೂ ಮಾಡಿ ರೇವಣ್ಣನನ್ನು ಮುಗಿಸಬೇಕೆಂಬ ಪ್ರಯತ್ನ ನಡೆದಿದೆ. ಆದರೆ ನನ್ನನ್ನು ಮುಗಿಸೋದು ಜನರು. ನನ್ನ ಮೇಲೆ ಇನ್ನೂ ಹತ್ತು ಕೇಸ್ ಹಾಕಲಿ. ಅದನ್ನು ಎದುರಿಸಲು

» ನಾಲ್ಕನೇ ಪುಟದಲ್ಲಿ

> **ಕೆ.ಎನ್.ರಾಜಣ್ಣ ನೇರ ನಡೆ-ನುಡಿಯ ಮನುಷ್ಯ. ಆ ಕಾರಣಕ್ಕಾಗಿ ಅವರನ್ನು ಮಂತ್ರಿ ಸ್ಥಾನದಿಂದ ಕಿತ್ತು ಹಾಕಿದರು. ನಮ್ಮ ಜಿಲ್ಲೆಯಲ್ಲಿ ಮಂತ್ರಿಯಾಗಿ ಒಳ್ಳೆಯ ಕೆಲಸ ಮಾಡಿದ್ದರು. ಆದರೆ ಅವರ ಗೌರವವನ್ನು ಕಾಂಗ್ರೆಸ್ ನಾಶ ಮಾಡಿತು.**
> **-ಹೆಚ್.ಡಿ.ರೇವಣ್ಣ, ಮಾಜಿ ಸಚಿವ**

11 ಎಕರೆ ಜಮೀನು ಇದ್ದರೂ ಮನೆ ನಿರ್ಮಿಸುತ್ತಿಲ್ಲ

ಅರಕಲಗೂಡು ಶಾಸಕ ಎ.ಮಂಜು ಅವರು ಮಾತನಾಡಿ, ನಿವೇಶನ ರಹಿತರಿಗೆ ಮನೆ ನಿರ್ಮಿಸಿ ಕೊಡಬೇಕೆಂಬ ಉದ್ದೇಶದಿಂದ ದಶಕಗಳ ಹಿಂದೆಯೇ 11 ಎಕರೆ 1 ಗುಂಟೆ ಜಮೀನು ಮೀಸಲಿಡಲಾಗಿದೆ. ಅರ್ಜಿ ನಮೂನೆ 53ರ ಅಡಿ ಅರ್ಜಿ ಸಲ್ಲಿಸಿ ರೈತರ ಮನವೊಲಿಸಿ ಆ ಜಾಗವನ್ನು ಉಳಿಸಿಕೊಳ್ಳಲಾಗಿದೆ. ಸರ್ಕಾರ ಜಿ+3 ಮಾದರಿಯಲ್ಲಿ ಮನೆ ನಿರ್ಮಿಸಿಕೊಟ್ಟರೆ ಬಡವರಿಗೆ ಅನುಕೂಲವಾಗುತ್ತದೆಂದರು.

2013-14ರ ಪ್ರಕಾರ ಪಟ್ಟಣದಲ್ಲಿ 143 ವಸತಿ ರಹಿತರು, 1310 ನಿವೇಶನ ರಹಿತರು ಇದ್ದಾರೆ. ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಚೆಲ್ಲೂರುಪೇಟೆ, ಮಾಚಗೌಡನಹಳ್ಳಿಯಲ್ಲಿ 220 ಮನೆಗಳ ನಿರ್ಮಿಸಲಾಗಿದೆ. ಪಟ್ಟಣದಲ್ಲಿ ಮನೆ ಹಾಗು ನಿವೇಶನ ರಹಿತರ ಸಂಖ್ಯೆ ಹೆಚ್ಚಿದ್ದು ಪರಿಹಾರ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು.

2 ತಿಂಗಳಲ್ಲಿ ಸಕಲೇಶಪುರಕ್ಕೆ ಕೇಂದ್ರ ಅರಣ್ಯ ಅಧಿಕಾರಿಗಳ ತಂಡ

• ಪ್ರಜೋದಯ ವರದಿ

ಹಾಸನ: ಮಲೆನಾಡು ಭಾಗದಲ್ಲಿ ಹೆಚ್ಚಿರುವ ಕಾಡಾನೆಗಳ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಅರಣ್ಯ ಇಲಾಖೆ ಅಧಿಕಾರಿ ಗಳು ಮುಂದಿನ 2 ತಿಂಗಳಲ್ಲಿ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಆಲಿಸುವ ಭರವಸೆ ನೀಡಿದ್ದಾರೆಂದು ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಕಾಡಾನೆ ಹಾವಳಿ ಹಾಗು ಸರ್ಫೇಸಿ ಕಾಯ್ದೆಯಿಂದ ಆಗುತ್ತಿರುವ ಅನಾನುಕೂಲಗಳ ಕುರಿತು ಚರ್ಚಿಸಲು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಕಾಫಿ ಬೆಳೆಗಾರರ ಸಂಘದ ನಿಯೋಗ ಮಾ. 16ರಂದು ದೆಹಲಿ ಪ್ರವಾಸ ಕೈಗೊಂಡಿತ್ತು. ವಾಣಿಜ್ಯ ಸಚಿವ ಪಿಯೂಷ್ ಗೋಯೆಲ್ ಅವರನ್ನು ಭೇಟಿಯಾಗಿ ಸರ್ಫೇಸಿ ಕಾಯ್ದೆಯ ಸಾಧಕ-ಬಾಧಕಗಳ ಕುರಿತು ಮಾತುಕತೆ ನಡೆಸಲಾಗಿದೆ. ನಂತರ ಅರಣ್ಯ ಸಚಿವ ಭೂಪೇಂದ್ರ ಯಾದವ್ ಅವರನ್ನು ಭೇಟಿಯಾಗಲು ಸಮಯ ನಿಗದಿಯಾಗಿತ್ತಾದರೂ ಪಂಚರಾಜ್ಯ ಚುನಾವಣೆ ಘೋಷಣೆ ಯಾದ್ದರಿಂದ ಅವರು ಸಿಗಲಿಲ್ಲ.

ಅಧಿಕಾರಿಗಳು ನಮ್ಮ ಅಹವಾಲುಗಳನ್ನು ಅತ್ಯಂತ ಕಾಳಜಿಯಿಂದ ಕೇಳಿಸಿಕೊಂಡಿದ್ದಾರೆಂದರು.

ಆನೆಕಾರಿಡಾರ್ ನಿರ್ಮಾಣವೊಂದೇ ಕಾಡಾನೆ ಹಾಗು ಮಾನವ ಸಂಘರ್ಷ ತಡೆಗೆ ಶಾಶ್ವತ ಪರಿಹಾರವೆಂದು ಅಧಿಕಾರಿಗಳಿಗೆ ಮನವರಿಕೆ ಮಾಡಿಕೊಡಲಾಯಿತು. ಆದರೆ, ರಾಜ್ಯದ ಅರಣ್ಯ ಇಲಾಖೆ ಅಧಿಕಾರಿಗಳು ಕೇಂದ್ರಕ್ಕೆ ಸಮರ್ಪಕ ಮಾಹಿತಿ ನೀಡುವಲ್ಲಿ ವಿಫಲರಾಗಿದ್ದಾರೆ. ಮಲೆನಾಡು ಜನರ ಸಮಸ್ಯೆಗೆ ಪರಿಹಾರ ಸಿಗಬೇಕೆಂದರೆ ರಾಜ್ಯ ಸರ್ಕಾರವೂ ಆ ನಿಟ್ಟಿನಲ್ಲಿ ಯೋಚಿಸ ಬೇಕಾಗುತ್ತದೆಂದರು.

ಕಾಫಿ ಬೆಳೆಗಾರರ ಸಂಘದ ಅಧ್ಯಕ್ಷ ಮೋಹನ್‌ಕುಮಾರ್ ಅವರು ಮಾತನಾಡಿ, ಸರ್ಫೇಸಿ ಕಾಯ್ದೆ ಸಂಬಂಧ ಕಾನೂನು ಹೋರಾಟದ ಅಗತ್ಯವಿದ್ದು, ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಸಚಿವರ ಸಹಕಾರ ಮತ್ತು ಸಹಾಯವನ್ನು ಕೋರಲಾಗಿದೆ. ಅದಕ್ಕೆ ಸಚಿವರಿಂದ ಸಕಾರಾತ್ಮಕ ಸ್ಪಂದನೆ ದೊರೆತಿದೆ ಎಂದರು.

ಕಾಫಿ ಬೆಳೆಗಾರರ ಸಂಘದ ಉಪಾಧ್ಯಕ್ಷ ಬಿ.ಎಂ.ನಾಗರಾಜ್ ಅವರು ಮಾತನಾಡಿ, ಒಂದು ತಿಂಗಳ ಅಂತರದಲ್ಲಿ ಕೇಂದ್ರದ ಅಧಿಕಾರಿಗಳು ಸಕಲೇಶಪುರಕ್ಕೆ ಆಗಮಿಸಿ ಮಾಹಿತಿ ಕಲೆ ಹಾಕಿ, ರಾಜ್ಯ ಸರ್ಕಾರಕ್ಕೆ ಮಾರ್ಗದರ್ಶನ ನೀಡುವುದಾಗಿ ಹೇಳಿದ್ದಾರೆ. ಅದು ಆಗಲಿದೆ ಎಂಬ ವಿಶ್ವಾಸವಿದೆ. ಆನೆ ಕಾರಿಡಾರ್, ಕ್ಯಾಂಪಾ ಫಂಡ್ ಬಳಕೆ, ಕಾಡಾನೆ ರಿಲೀಫ್ ಸೆಂಟರ್ ಬಗ್ಗೆ ಚರ್ಚೆ ಮಾಡಿದ್ದೇವೆ. ಇದಕ್ಕೆ ಸ್ಪಂದನೆ ಸಿಗುವ ವಿಶ್ವಾಸವಿದೆ. ಕಾಡಾನೆ ಸಮಸ್ಯೆ ಮುಕ್ತಿ ಸಿಗಲೇಬೇಕೆಂಬುದು ನಮ್ಮ ಉದ್ದೇಶ ಮತ್ತು ಪ್ರಯತ್ನವಾಗಿದೆ ಎಂದು ಹೇಳಿದರು.

ಕಾಫಿ ಬೆಳೆಗಾರರ ಸಂಘದ ಅದ್ದೂರಿ ಕುಮಾರ್, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಎಸ್.ದ್ಯಾವೇಗೌಡ, ಕಾಂತರಾಜ್ ಇದ್ದರು.

ಆಸ್ತಿಗಾಗಿ ಮಹಿಳೆ ಮೇಲೆ ಹಲ್ಲೆ: ತನಿಖೆಗೆ ಆಗ್ರಹ

• ಪ್ರಜೋದಯ ವರದಿ

ಹಾಸನ: ನಮಗೆ ಸೇರಿದ 20 ಗುಂಟೆ ಜಾಗವನ್ನು ಕಬಳಿಸುವ ಉದ್ದೇಶದಿಂದ ಹಲ್ಲೆ ನಡೆಸುತ್ತಿದ್ದು, ಪೊಲೀಸರು ಪ್ರಕರಣದ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಾನೂನು ಶಿಕ್ಷೆ ವಿಧಿಸಬೇಕೆಂದು ಅರಕಲಗೂಡು ತಾಲ್ಲೂಕು ತೇಜೂರು ಗ್ರಾಮದ ಪೂರ್ಣಿಮಾ ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಗ್ರಾಮದ ಸರ್ವೆ ನಂ.55 ರಲ್ಲಿ 1 ಎಕರೆ 29 ಗುಂಟೆ ಜಮೀನು ನಮ್ಮ ತಂದೆಯ ಹೆಸರಿನಲ್ಲಿದೆ. 1959 ರಲ್ಲಿ ತಾತನ ಹೆಸರಿಗೆ ಕ್ರಯ ಆಗಿದ್ದ ಭೂಮಿ ನಂತರ ನಮ್ಮ ತಂದೆಗೆ ವರ್ಗವಾಗಿದೆ. ಕಳೆದ 70 ವರ್ಷಗಳಿಂದ ನಮ್ಮ ಕುಟುಂಬವೇ ಅನುಭವದಲ್ಲಿದೆ. ಈ ಸಂಬಂಧ ಖಾತೆ, ಮ್ಯೂಟೇಶನ್, ಋಣಭಾರ ಪ್ರಮಾಣ ಪತ್ರ, ಪರಿವರ್ತನಾ ವರದಿ ಎಲ್ಲವೂ ನಮ್ಮ ಬಳಿ ಇವೆ. ಆದರೆ, ಕೈ ಬರಹದ ಪಹಣಿಯಲ್ಲಿ 20 ಗುಂಟೆ ಜಾಗ ಕಡಿಮೆಯಾಗಿದೆ. ಅದನ್ನೇ ಅಸ್ತ್ರವಾಗಿ ಬಳಸಿಕೊಳ್ಳುತ್ತಿರುವ ರಾಮೇಗೌಡ ಹಾಗು ಅವರ ಸೊಸೆಯಂದಿರುವ ವಿನಾಕಾರಣ ಹಲ್ಲೆ ಮಾಡುತ್ತಿದ್ದಾರೆ. ನಮ್ಮ ತಂದೆ ಪಾರ್ಶ್ವವಾಯು ಸಮಸ್ಯೆಯಿಂದ

ಹಾಸಿಗೆ ಹಿಡಿದಿದ್ದು, ಪ್ರಶ್ನಿಸುವವರು ಯಾರೂ ಇಲ್ಲವೆಂದು ಹಲ್ಲೆ ಮಾಡುತ್ತಿದ್ದಾರೆ. ಗ್ರಾಮದಲ್ಲಿ ನಮ್ಮ ತಾಯಿ ಜಯಲಕ್ಷ್ಮಮ್ಮ ಒಬ್ಬರೇ ಇರುತ್ತಾರೆ. ಜಮೀನಿನಲ್ಲಿ ಹಾಕಿದ್ದ ತೆಂಗಿನ ಸಸಿಗಳನ್ನು ನಾಶಪಡಿಸಿದ್ದಾರೆ. ಜಮೀನು ವ್ಯಾಜ್ಯ ಬಗೆಹರಿಸಲು ಬಂದ ಗ್ರಾಮದ ಚಂದ್ರು ಎಂಬುವವರ ಮೇಲೂ ಹಲ್ಲೆ ನಡೆಸಿದ್ದಾರೆಂದು ಆರೋಪಿಸಿದರು.

ಪಹಣಿ ಕೈ ಬರಹದಲ್ಲಿ ಆಗಿರುವ ಲೋಪವನ್ನೇ ಮುಂದಿಟ್ಟುಕೊಂಡು ನಮ್ಮ ಜಮೀನಿನ ಮೇಲೆ ದೃಷ್ಟಿ ನೆಟ್ಟಿದ್ದಾರೆ. ಈ ಸಂಬಂಧ ನಾವು ತಹಶೀಲ್ದಾರ್ ಕಚೇರಿಗೆ ಅರ್ಜಿ ಸಲ್ಲಿಸಿದಾಗ ಉಪವಿಭಾಗಾಧಿಕಾರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ಹೇಳಿದರು. ಸಕಲೇಶಪುರ ಪ್ರಭಾರ ಉಪವಿಭಾಗಾಧಿಕಾರಿ ಮಂಜುನಾಥ್ ಅವರನ್ನು ಭೇಟಿ ಮಾಡಿದಾಗ ದಾಖಲೆಗಳ ಪರಿಶೀಲಿಸಿ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ. ಆದರೆ, ಅಂತಿಮ ತೀರ್ಪು ಬರುವವರೆಗೆ ಎದುರುದಾರರು ಸುಮ್ಮನಿರುತ್ತಿಲ್ಲ. ಪೊಲೀಸರು ಸಹ ಅವರ ವಿರುದ್ಧ ಕ್ರಮ ಜರುಗಿಸುತ್ತಿಲ್ಲವೆಂದು ಬೇಸರ ವ್ಯಕ್ತಪಡಿಸಿದರು.

ಗ್ರಾಮದ ಚಂದ್ರು ಅವರು ಮಾತನಾಡಿ, ಜಮೀನು ವ್ಯಾಜ್ಯದ ಕುರಿತು ರಾಜಿ ಮಾಡಲು ಅವರೇ ಕರೆದಿದ್ದರು. ಮಾನವೀಯತೆ ದೃಷ್ಟಿಯಿಂದ ಹೋದರೆ ರಾಮೇಗೌಡರ ಸೊಸೆಯಂದಿರು ಹಾಗು ಮಕ್ಕಳು ನನ್ನ ಮೇಲೆ ಹಲ್ಲೆ ನಡೆಸಿದರು. ಸಮಸ್ಯೆ ಬಗೆಹರಿಸಲು ಹೋದವರನ್ನೇ ದೋಷಿ ಗಳಂತೆ ಕಂಡರೆ ಹೇಗೆಂದು ಪ್ರಶ್ನಿಸಿದರು.

ನೊಂದವರಿಗೆ ನ್ಯಾಯ ಸಿಗಬೇಕು. ತಮ್ಮದಲ್ಲದ 20 ಗುಂಟೆ ಜಮೀನಿಗಾಗಿ ಜಯಲಕ್ಷ್ಮಮ್ಮ ಅವರನ್ನು ಮನಬಂದಂತೆ ಹೊಡೆದಿದ್ದಾರೆ. ಆದರೆ, ಪೊಲೀಸರು ಅವರ ವಿರುದ್ಧ ಯಾವ ಕ್ರಮ ಜರುಗಿಸಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಜಯಲಕ್ಷ್ಮಿ, ರವಿ, ಪಾರ್ವತಿ ಇದ್ದರು.

7 ಸಾವಿರ ರೂ.ಗಾಗಿ ಯುವಕನ ಕೊಲೆ, ಶವ ದಹನ

ಕಾಡಯ್ಯನಕೊಪ್ಪಲು ವರುಣ್ ಹತ್ಯೆ ಪ್ರಕರಣ | ಪೊಲೀಸ್ ವರಿಷ್ಠಾಧಿಕಾರಿ ಮಾಹಿತಿ

• ಪ್ರಜೋದಯ ವರದಿ

ಹಾಸನ: ಅರಸೀಕೆರೆ ತಾಲ್ಲೂಕಿನ ಕಾಡಯ್ಯನಕೊಪ್ಪಲು ಗ್ರಾಮದ ವರುಣ್(22) ಕೊಲೆ ಪ್ರಕರಣಕ್ಕೆ ಸ್ನೇಹಿತನಿಂದ ಪಡೆದಿದ್ದ 7 ಸಾವಿರ ರೂಪಾಯಿ ಕಾರಣವೆಂಬ ಸ್ಫೋಟಕ ಸತ್ಯ ಬಯಲಾಗಿದೆ.

ಈ ಕುರಿತು ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಅವರು, ಹಾಸನದ ಶಶಾಂಕ್ ಎಂಬಾತ ಪ್ರಮುಖ ಆರೋಪಿಯಾಗಿದ್ದು, ಆತನ ಎಂಟು ಸ್ನೇಹಿತರು ಮಾ.12ರ ರಾತ್ರಿ ವರುಣ್ ಮೇಲೆ ಹಲ್ಲೆ ನಡೆಸಿ ಕೊಲೆಗೈದು ನಂತರ ಜೇನುಕಲ್ ಸಿದ್ದೇಶ್ವರಸ್ವಾಮಿ ಬೆಟ್ಟದ ಸಮೀಪ ಶವ ಸುಟ್ಟು ಹಾಕಿದ್ದಾರೆ. ಮೃತ ವರುಣ್‌ಗೆ ಶಶಾಂಕ್ ಎರಡು ತಿಂಗಳ ಹಿಂದೆ 7 ಸಾವಿರ ರೂ. ಕೊಟ್ಟಿದ್ದ. ಅದು ಯಾವ ಕಾರಣಕ್ಕೆ ಕೊಟ್ಟಿದ್ದ ಎಂಬುದು ತನಿಖೆ ಬಳಿಕ ಗೊತ್ತಾಗಲಿದೆ. ವಿಜಯ್ ನಾಯಕ್, ಉಮರ್, ಸತೀಶ್, ಚೇತನ್ ದಾಸರಕೊಪ್ಪಲು, ಮನು

ಎಂಬುವರನ್ನು ಬಂಧಿಸಲಾಗಿದೆ ಎಂದರು.

ಸಾಕ್ಷ್ಯ ನಾಶಕ್ಕೆ ಯತ್ನ

ಮಾ.10ರಂದು ವರುಣ್ ಬೈಕ್ ರಿಪೇರಿ ಮಾಡಿಸಿಕೊಂಡು ಬರುತ್ತೇನೆಂದು ಗಂಡಸಿಗೆ ಸ್ನೇಹಿತ ಲೋಹಿತ್ ಜೊತೆಗೆ ಬಂದಿದ್ದ. ಅಲ್ಲಿಗೆ ಸ್ನೇಹಿತರೊಂದಿಗೆ ಬಂದ ಶಶಾಂಕ್ ವರುಣ್, ಲೋಹಿತ್‌ನನ್ನು ಕರೆದುಕೊಂಡು ಬರುತ್ತಾರೆ. ಮಾತಿಗೆ ಮಾತು ಬೆಳೆದು ಜಗಳ ವಿಕೋಪಕ್ಕೆ ತಿರುಗುತ್ತಿದ್ದಂತೆ ಲೋಹಿತ್ ಅಲ್ಲಿಂದ ಎಸ್ಕೇಪ್ ಆಗಿ ವರುಣ್ ಸಿಕ್ಕಿಬಿದ್ದಿದ್ದ ಎಂದರು.

ವರುಣ್ ಮನೆಗೆ ಬಾರದೆ ಇದ್ದರಿಂದ ಅವರ ತಾಯಿ ಗಂಡಸಿ ಠಾಣೆಯಲ್ಲಿ ಮಾ.12ರಂದು ನಾಪತ್ತೆ ಪ್ರಕರಣ ದಾಖಲಿಸಿದ್ದರು. ಅಷ್ಟರಲ್ಲಾ ಗಲೇ ಅವನ ಕೊಲೆ ನಡೆದಿತ್ತು. ಕೊಲೆಗೂ ಮೊದಲು ಮನಸೋ ಇಚ್ಛೆ ಥಳಿಸಿದ್ದಾರೆಂಬ ಮಾಹಿತಿ ಮೊಬೈಲ್ ಕಾಲ್ ಲಿಸ್ಟ್, ರೆಕಾರ್ಡ್ ಇತ್ಯಾದಿ ಮೂಲಗಳಿಂದ ತಿಳಿದು ಬಂದಿದೆ. ಅದಾದ 2 ದಿನಗಳ ಅಂತರದಲ್ಲಿ ಮಾ.13-14ರ ನಡುವೆ ವರುಣ್ ಮೃತದೇಹವನ್ನು ಗುರುತು ಸಿಗದ ಹಾಗೆ ಶ್ರೀ ಜೇನುಕಲ್ ಸಿದ್ದೇಶ್ವರ ಸ್ವಾಮಿ ಬೆಟ್ಟದ ಪಕ್ಕ ಸುಟ್ಟು ಹಾಕಿದ್ದಾರೆ. ನಾಪತ್ತೆ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಆ ನಿಟ್ಟಿನಲ್ಲಿ ತನಿಖೆ ಕೈಗೊಂಡಿದ್ದರೆ ಹೊರತು ಕೊಲೆಯ ಸುಳಿವು ಆಗ ತಿಳಿಯಲಿಲ್ಲವೆಂದು ವಿವರಿಸಿದರು.

ಸಾಕ್ಷಿದಾರ ಲೋಹಿತ್ ಅವರ ಹೇಳಿಕೆ ಆಧರಿಸಿ » ನಾಲ್ಕನೇ ಪುಟದಲ್ಲಿ

ಮೂರು ತಿಂಗಳಲ್ಲಿ 43 ಪ್ರಕರಣ ದಾಖಲು

ಜಿಲ್ಲೆಯಲ್ಲಿ ಮಾದಕ ವಸ್ತುಗಳಾದ ಗಾಂಜಾ, ಡ್ರಗ್ಸ್ ಪ್ರಕರಣಗಳು ಹೆಚ್ಚುತ್ತಿವೆ. ಕಳೆದ ಮೂರು ತಿಂಗಳಲ್ಲಿ 20 ಪೆಡ್ಲರ್, 23 ಮಾದಕ ವಸ್ತು ಸೇವನೆ ಸೇರಿ 43 ಪ್ರಕರಣ ದಾಖಲಿಸಲಾಗಿದೆ. ಪೆಡ್ಲರ್ ಕೇಸಲ್ಲಿ 40, ಮತ್ತು ಬರುವ ಪದಾರ್ಥ ಸೇವನೆ ಪ್ರಕರಣದಲ್ಲಿ 33 ಸೇರಿ 73 ಮಂದಿಯನ್ನು ಬಂಧಿಸಲಾಗಿದೆ. ಈ ಅವಧಿಯಲ್ಲಿ 17.22 ಕೆ.ಜಿ. ಗಾಂಜಾ ವಶಪಡಿಸಿಕೊಳ್ಳಲಾಗಿದೆ. 13.81 ಲಕ್ಷ ರೂ. ಮೌಲ್ಯದ ಅಮಲು ಪದಾರ್ಥ ವಶಪಡಿಸಿಕೊಳ್ಳಲಾಗಿದೆ. ಮೂವರ ವಿರುದ್ಧ ಕೊಕೋ ಕಾಯ್ದೆ ವಿಧಿಸಲು ದಕ್ಷಿಣ ವಲಯ ಐಪಿಜಿ ಅವರ ಅನುಮತಿ ಕೋರಲಾಗಿದೆ ಎಂದು ತಿಳಿಸಿದರು.

> **ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಅಬಕಾರಿ, ಗಾಂಜಾ, ಗ್ಯಾಂಬ್ಲಿಂಗ್, ಮರಳು ದಂಧೆ ವಿರುದ್ಧ ನಿರಂತರ ದಾಳಿ ನಡೆಸಲಾಗುತ್ತಿದೆ. ಈ ಸಂಬಂಧ ಎಲ್ಲಾ ಠಾಣೆಗಳಿಗೆ ಸೂಚಿಸಲಾಗಿದೆ. ಶಾಂತಿ-ಸುವ್ಯವಸ್ಥೆಗೆ ಧಕ್ಕೆ ತರುವ ಸಂಶಯದ ಹಿನ್ನಲೆಯಲ್ಲಿ 8 ಜನರ ಮೇಲೆ ಗೂಂಡಾ ಕಾಯ್ದೆ ದಾಖಲಿಸಲು ಜಿಲ್ಲಾಧಿಕಾರಿಗೆ ಪತ್ರ ಬರೆಯಲಾಗಿದೆ.**
> **-ಶುಭಾನ್ವಿತಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ**

29 ಸಾವಿರ ರೂ. ಮೌಲ್ಯದ ವಸ್ತು ಕಳವು

• ಪ್ರಜೋದಯ ವರದಿ

ಹಾಸನ: ರಾತ್ರೋ ರಾತ್ರಿ ಕಚೇರಿ ಕಚೇರಿಗೆ ನುಗ್ಗಿರುವ ಕಳ್ಳರು 29 ಸಾವಿರ ರೂ. ಮೌಲ್ಯದ ವಸ್ತುಗಳ ಕದ್ದಿರುವ ಘಟನೆ ಕೈಗಾರಿಕಾ ಪ್ರದೇಶದಲ್ಲಿರುವ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಕೇಂದ್ರದಲ್ಲಿ ನಡೆದಿದೆ.

ಮಾ.21ರ ಬೆಳಗಿನ ಜಾವ ಕಿಡಿಗೇಡಿಗಳು ಕೇಂದ್ರದ ಅಡುಗೆ ಕೋಣೆಯ ಬೀಗ ಮುರಿದು ನಲ್ಲಿ ಹಾಗು ಇತರೆ ವಸ್ತುಗಳನ್ನು ಕಳವು ಮಾಡಿದ್ದಾರೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

2014ರಿಂದಲೇ ಮೋದಿ ಜೊತೆ ಪರೋಕ್ಷ ಮೈತ್ರಿ: ದೇವೇಗೌಡ

• ಪ್ರಜೋದಯ ವರದಿ

ನವದೆಹಲಿ: ಮೋದಿ ಅಧಿಕಾರಕ್ಕೆ ಬಂದರೆ ಲೋಕಸಭೆ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ ಎಂದು ಹೇಳಿದ್ದೆ. ಬಿಜೆಪಿ ಗೆದ್ದ ನಂತರ ನಾನು ನಿಜವಾಗಿಯೂ ಸಂಸದ ಸ್ಥಾನಕ್ಕೆ ರಾಜೀನಾಮೆ ಕೊಡಲು ಮುಂದಾದೆ. ಆದರೆ, ಹಾಗೆ ಮಾಡಬೇಡಿ ಎಂದು ಮೋದಿ ತಡೆದರು. ಅವರ ನಡವಳಿಕೆಯಿಂದ ಪ್ರಭಾವಿತನಾದೆ. 2014ರಿಂದಲೇ ಪರೋಕ್ಷವಾಗಿ ಮೈತ್ರಿ ಶುರುವಾಯಿತು ಎಂದು ರಾಜ್ಯಸಭಾ ಸದಸ್ಯ ಹೆಚ್.ಡಿ.ದೇವೇಗೌಡ ಹೇಳಿದರು.

ನಮ್ಮ ಜೊತೆ ಪ್ರೀತಿ ಹೊಂದಿದ್ದರು, ಮೋದಿ ಅವರ ಜೊತೆ ಮದುವೆಯಾದರು ಎಂದು ತಮ್ಮ ಬಗ್ಗೆ ಟೀಕೆ ಮಾಡಿದ್ದ ರಾಜ್ಯಸಭೆ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ತಿರುಗೇಟು ನೀಡಿದರು.

ನಾನು ಸದನದಲ್ಲಿ ಇಲ್ಲದಿದ್ದ ಸಂದರ್ಭದಲ್ಲಿ

ಖರ್ಗೆ ಈ ವಿಷಯ ಪ್ರಸ್ತಾಪಿಸಿದ್ದಾರೆ. ಅವರಿಗೆ ಅವರ ಪಕ್ಷಕ್ಕೆ ದ್ರೋಹ ಬಗೆದಿದ್ದೇನೆ ಎಂದು ಅರ್ಥ ಬರುವ ರೀತಿಯಲ್ಲಿ ಮಾತನಾಡಿದ್ದಾರೆ. ಆದರೆ, ನಿಜವಾಗಿಯೂ ಕಾಂಗ್ರೆಸ್ ಪಕ್ಷದಿಂದ ದ್ರೋಹ ಆಗಿರುವುದು ನಮಗೆ. ಕಾಂಗ್ರೆಸ್ ಪಕ್ಷವು ನಮ್ಮ ಪಕ್ಷಕ್ಕೆ ಒಂದಲ್ಲ, ಎರಡಲ್ಲ, ಅನೇಕ ಬಾರಿ ದ್ರೋಹ ಮಾಡಿದೆ. ಅದರ ಬಗ್ಗೆ ನಾನು ಸಾಕ್ಷಿ ಸಹಿತವಾಗಿ ಮಾತನಾಡಬಲ್ಲೆ. ಅದೆಲ್ಲವನ್ನೂ ಮರೆಮಾಚಲು ಖರ್ಗೆ ನನ್ನ ವಿಷಯ ಎಳೆದು ತಂದಿದ್ದಾರೆಂದು ಹೇಳಿದರು.

ನಿಜಲಿಂಗಪ್ಪ, ದೇವರಾಜ ಅರಸು, ಬಂಗಾರಪ್ಪ ಅವರಿಗೆ ಏನಾಯಿತು ಎಂಬುದು ಖರ್ಗೆ ಅವರಿಗೂ ಗೊತ್ತಿದೆ. ಅವರು ಹೇಗೆ ಅಧಿಕಾರ ಕಳೆದುಕೊಂಡರು ಎಂಬುದನ್ನು ಖರ್ಗೆ ಹೇಳ ಬೇಕಾಗುತ್ತದೆ. ಅವರೆಲ್ಲರೂ ಅಧಿಕಾರ ಕಳೆದುಕೊಂಡಿದ್ದಕ್ಕೆ ನಾವು ಸಾಕ್ಷಿಗಳಾಗಿದ್ದೆವು ಎಂದು ಟೀಕಾಪ್ರಹಾರ ನಡೆಸಿದರು.

1962ರಲ್ಲಿ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಲು ಉದ್ದೇಶಿಸಿದ್ದೆ. ಕಾಂಗ್ರೆಸ್ ಪಕ್ಷ ನನಗೆ ಟಿಕೆಟ್ ಕೊಡುವುದಾಗಿ ಹೇಳಿತ್ತು. ನೀಲಂ ಸಂಜೀವರೆಡ್ಡಿ ಎಐಸಿಸಿ ಅಧ್ಯಕ್ಷರಾಗಿದ್ದರು. ಆದರೆ, ನನಗೆ ಕಾಂಗ್ರೆಸ್ ಟಿಕೆಟ್ ನಿರಾಕರಿಸಿತ್ತು. ನನ್ನ ರಾಜಕೀಯದ ಅಂತ್ಯಕಾಲದಲ್ಲಿ ನಾನಿದ್ದೇನೆ. ಇನ್ನೊಂದು ತಿಂಗಳಲ್ಲಿ ರಾಜ್ಯಸಭಾ ಸದಸ್ಯತ್ವ ಮುಗಿಯುತ್ತದೆ. ಹೀಗಾಗಿ, ನಾನು ಖರ್ಗೆ ಪ್ರಶ್ನೆಗೆ ಉತ್ತರ ಕೊಡಬೇಕಿದೆ ಎಂದರು.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಕ್ಕೆ ಜಿಲ್ಲಾಧಿಕಾರಿ ಭೇಟಿ

• ಪ್ರಜೋದಯ ವರದಿ

ಹಾಸನ: ನಗರದ ವಾಣಿ ವಿಲಾಸ ಬಾಲಕಿಯರ ಸರ್ಕಾರಿ ಪ್ರೌಢ ಶಾಲೆಯಲ್ಲಿರುವ ಪರೀಕ್ಷಾ ಕೇಂದ್ರಕ್ಕೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸೋಮವಾರ ಭೇಟಿ ನೀಡಿ ವಿದ್ಯಾರ್ಥಿ ಗಳೊಂದಿಗೆ ಮಾತುಕತೆ ನಡೆಸಿದರು.

ಈ ವೇಳೆ ಮಾತನಾಡಿದ ಅವರು, ಜಿಲ್ಲಾದ್ಯಂತ ಶಾಂತಿಯುತವಾಗಿ ಪರೀಕ್ಷೆ ನಡೆಯುತ್ತಿದೆ. ಸೂಕ್ತ ವ್ಯವಸ್ಥೆಯನ್ನು ಮಾಡಲಾಗಿದೆ. ವಿದ್ಯಾರ್ಥಿಗಳಲ್ಲಿ ಆರೋಗ್ಯದ ಸಮಸ್ಯೆ ಉಂಟಾದಲ್ಲಿ ತುರ್ತು ಚಿಕಿತ್ಸಾ ಉಪಕರಣದೊಂದಿಗೆ ಆರೋಗ್ಯ ಇಲಾಖೆಯಿಂದ ಸಿಬ್ಬಂದಿ ನಿಯೋಜಿಸ ಲಾಗಿದೆ ಎಂದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗು ಶಿಕ್ಷಣ ಇಲಾಖೆಯಿಂದ ವಿದ್ಯಾರ್ಥಿಗಳು ಕೈಗೊಳ್ಳಬೇಕಾದ ಸಿದ್ಧತೆಗಳ ಬಗ್ಗೆ ಪರೀಕ್ಷೆಯನ್ನು ಎದುರಿಸುವ ಬಗ್ಗೆ ಕಾರ್ಯಾಗಾರ ಏರ್ಪಡಿಸಲಾಗಿದೆ. ವಿದ್ಯಾರ್ಥಿಗಳಿಗೆ ಯಾವುದೇ ಗೊಂದಲವಾಗದಂತೆ ಜಿಲ್ಲಾ ಹಾಗು ತಾಲ್ಲೂಕು ಮಟ್ಟದಲ್ಲಿ

ಸಹಾಯವಾಣಿ ತೆರೆಯಲಾಗಿದೆ ಎಂದು ತಿಳಿಸಿದರು.

ಈ ಬಾರಿ ಫಲಿತಾಂಶದಲ್ಲಿ ಜಿಲ್ಲೆಯು ರಾಜ್ಯಕ್ಕೆ ಮೊದಲ ಸ್ಥಾನ ಪಡೆಯುವ ನಿರೀಕ್ಷೆಯಿದೆ. ಪೂರ್ವ ಭಾವಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದಿದೆ. ಪರೀಕ್ಷೆ ಬರೆಯುವ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗಬೇಕು. ಯಾವುದೇ ವಿದ್ಯಾರ್ಥಿಯು ಸಹ ಅನುತ್ತೀರ್ಣರಾಗಬಾರದು, ಅದರಿಂದ ಮಕ್ಕಳು ಖಿನ್ನತೆಗೆ ಒಳಗಾಗುವ ಸಾಧ್ಯತೆಗಳಿವೆ ಎಂದರು.

ಕಲ್ಲು ಗಣಿಗಾರಿಕೆ ಸ್ಥಗಿತಕ್ಕೆ ಆಗ್ರಹಿಸಿ ಅನಿರ್ದಿಷ್ಟಾವಧಿ ಧರಣಿ

• ಪ್ರಜೋದಯ ವರದಿ

ಹಾಸನ: ಅರಕಲಗೂಡು ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿ ಅರಸಿಕಟ್ಟೆ ಗ್ರಾಮದ ನೆಹರು ನಗರ ಸಮೀಪ ನಡೆಯುತ್ತಿರುವ ಕಲ್ಲು ಗಣಿಗಾರಿಕೆ ಸ್ಥಗಿತಗೊಳಿಸಬೇಕೆಂದು ಆಗ್ರಹಿಸಿ ಸೋಮವಾರದಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ಆರಂಭಿಸಲಾಗಿದೆ.

ಅರಕಲಗೂಡು ಕಾವಲು ಸಮಿತಿ ಅಧ್ಯಕ್ಷ ವಿಜಯಕುಮಾರ್ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ನೆಹರು ನಗರ ಸರ್ಕಾರಿ ಶಾಲಾ ಮಕ್ಕಳು ಭಾಗವಹಿಸಿದ್ದಾರೆ.

ಗ್ರಾಮದ ಸರ್ವೆ ನಂ.116ರಲ್ಲಿ ಕಲ್ಲು ಗಣಿಗಾರಿಕೆ ನಡೆಯುತ್ತಿದ್ದು ಅದರಿಂದ ಭಾರೀ ಸಮಸ್ಯೆ ಯಾಗುತ್ತಿದೆ. ಶಾಲೆ ಪಕ್ಕದಲ್ಲೇ ಇರುವುದರಿಂದ ವಿಪರೀತ ಧೂಳಿನಿಂದ ಮಕ್ಕಳು ಶಾಲೆಗೆ ಹೋಗಲು ಆಗುತ್ತಿಲ್ಲ. ಕಲ್ಲು ಬಂಡೆ ಬ್ಲಾಸ್ಟಿಂಗ್‌ನಿಂದ ಜೋರು ಶಬ್ದ ಕೇಳಿ ಸುತ್ತಿದೆ. ಕಲ್ಲು ಪುಡಿಗಳು ಅಕ್ಕಪಕ್ಕದ ಜಮೀನಿಗೆ ಬಿದ್ದು ವ್ಯವಸಾಯಕ್ಕೆ ತೊಂದರೆಯಾಗುತ್ತಿದೆ. ಅಂತರ್ಜಲ ಮಟ್ಟವು ಕುಸಿದಿದೆ ಎಂದು ಪ್ರತಿಭಟನಾಕಾರರು ಹೇಳಿದರು.

ಗಣಿಗಾರಿಕೆ ನಿಲ್ಲಿಸುವಂತೆ ಹಲವು ತಿಂಗಳಿಂದ ಆಗ್ರಹಿಸಿದರೂ ಪ್ರಯೋಜನವಾಗಿಲ್ಲ. ಶಾಸಕ ಎ.ಮಂಜು, ತಹಶೀಲ್ದಾರ್ ನೇತೃತ್ವದಲ್ಲಿ ಸಭೆ ನಡೆಸಿದರೂ ಪ್ರಯೋಜನವಾಗಿಲ್ಲ. ಕಲ್ಲು ಗಣಿಗಾರಿಕೆ ಸ್ಥಗಿತಗೊಳಿಸುವ ವರೆಗೂ ಹೋರಾಟದಿಂದ ಹಿಂದೆ ಸರಿಯುವುದಿಲ್ಲ, ಮಕ್ಕಳ ಶೈಕ್ಷಣಿಕ ಭವಿಷ್ಯದ ದೃಷ್ಟಿಯಿಂದ ಜಿಲ್ಲಾಡಳಿತ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಜಿಲ್ಲೆಯಲ್ಲಿದ್ದಾರೆ 1,310 ರೋಗಿಗಳು | ಇಂದು ವಿಶ್ವ ಕ್ಷಯ ರೋಗ ಜಾಗೃತಿ ದಿನ

ಸಂಪೂರ್ಣ ಕ್ಷಯ ರೋಗ ಮುಕ್ತವಾಗದ ಜಿಲ್ಲೆ

- ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

ಹಾಸನ: ಜಿಲ್ಲೆಯಲ್ಲಿ 1,310 ಕ್ಷಯ ರೋಗಿಗಳು ಕಂಡು ಬಂದಿದ್ದು, ಮುಂದಿನ ವರ್ಷಕ್ಕೆ ಅದರ ಪ್ರಮಾಣ ಕಡಿಮೆ ಮಾಡುವ ಉದ್ದೇಶದಿಂದ ಹಲವು ಪರಿಣಾಮಕಾರಿ ಕಾರ್ಯಕ್ರಮಗಳನ್ನು ಆರೋಗ್ಯ ಇಲಾಖೆ ಹಾಕಿಕೊಂಡಿದೆ.

2025ನೇ ಸಾಲಿನಲ್ಲಿ ಕಂಡು ಬಂದಿರುವ 1,310 ರೋಗಿಗಳಲ್ಲಿ 929 ಪುರುಷ, 381 ಮಹಿಳೆಯರು, 23 ಮಕ್ಕಳಿದ್ದಾರೆ. ಅವರಲ್ಲಿ 63 ಜನರಿಗೆ ಕ್ಷಯ ರೋಗದೊಂದಿಗೆ ಹೆಚ್‌ಐವಿ, 245 ಜನರಿಗೆ ಮಧುಮೇಹ ಹಾಗು 48 ಜನರು ಬಹು ಔಷಧ ನಿರೋಧಕ ಸಮಸ್ಯೆಯಿಂದ ಬಳಲುತ್ತಿದ್ದಾರೆ. 2024ರಲ್ಲಿ 1,377 ಕ್ಷಯ ರೋಗಿಗಳು ಪತ್ತೆಯಾಗಿದ್ದರು. ಅದರಲ್ಲಿ ಶೇ.89 ಅಂದರೆ 1,227 ರೋಗಿಗಳು ಗುಣಮುಖರಾಗಿದ್ದಾರೆ.

ಒಂದು ಲಕ್ಷಕ್ಕೆ 3 ಸಾವಿರ ಪರೀಕ್ಷೆ ಗುರಿ

ಸಂಪೂರ್ಣ ಕ್ಷಯ ರೋಗ ನಿರ್ಮೂಲನೆಗಾಗಿ ಸರ್ಕಾರಗಳು ಹತ್ತು ಹಲವು ಯೋಜನೆ ಹಾಕಿಕೊಂಡಿದ್ದರೂ ಗುರಿ ತಲುಪಲು ಸಾಧ್ಯವಾಗುತ್ತಿಲ್ಲ. 2025ನೇ ಸಾಲಿನಲ್ಲಿ ಜಿಲ್ಲೆಗೆ ಒಂದು ವರ್ಷಕ್ಕೆ 1 ಲಕ್ಷ ಜನಸಂಖ್ಯೆಗೆ 3 ಸಾವಿರ ಅಂದರೆ ವಾರ್ಷಿಕ 50,400 ಸಂಭಾವ್ಯ ಕ್ಷಯ ರೋಗಿಗಳನ್ನು ಪರೀಕ್ಷಿಸುವ ಗುರಿ ಹಾಕಿಕೊಳ್ಳಲಾಗಿತ್ತು. ಅದರಂತೆ ವಾರ್ಷಿಕ 57,231 ಜನರನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಖಾಸಗಿ ವಲಯದಲ್ಲಿ ವಾರ್ಷಿಕ 350 ಕ್ಷಯ ರೋಗಿಗಳ ಪತ್ತೆ ಗುರಿ ನೀಡಿದ್ದು, ಒಟ್ಟು 317 (ಶೇ. 91) ಗುರಿ ಸಾಧಿಸಲಾಗಿದೆ.

ರೋಗಿಗಳಿಗೆ ಸರ್ಕಾರದ ನೆರವು

ಕ್ಷಯ ರೋಗದಿಂದ ಬಳಲುವವರಿಗೆ ನೆರವಾಗಲೆಂದು ಕೇಂದ್ರ ಸರ್ಕಾರ ನಿಕ್ಷಯ್ ಪೋಷಣ್ ಯೋಜನೆ ಜಾರಿಗೊಳಿಸಿದ್ದು, ಪ್ರತಿ ತಿಂಗಳು ತಲಾ 1 ಸಾವಿರ ರೂ. ವಿತರಿಸಲಾಗುತ್ತದೆ. ಚಿಕಿತ್ಸೆ ಅವಧಿಯಲ್ಲಿ 6 ರಿಂದ 20 ಸಾವಿರ ರೂ. ವರೆಗೆ ವೆಚ್ಚ ದೊರೆಯಲಿದೆ. ಸೇವಾ ಸಿಂಧು ಮೂಲಕ ಅರ್ಜಿ ಸಲ್ಲಿಸಿ ರೋಗಿಗಳು ಈ ಯೋಜನೆಯ ಸೌಲಭ್ಯ ಪಡೆಯಬಹುದಾಗಿದೆ. ಜಿಲ್ಲೆಯ ಶೇ.96 ರಷ್ಟು ರೋಗಿಗಳು ಈ ಸೌಲಭ್ಯ ಪಡೆಯುತ್ತಿದ್ದಾರೆ.



ಕ್ಷಯ ಮುಕ್ತ ಗ್ರಾ.ಪಂ.ಗೆ ಪುರಸ್ಕಾರ

ಕ್ಷಯ ರೋಗ ಮುಕ್ತ ಗ್ರಾಮ ನಿರ್ಮಾಣದಲ್ಲಿ ಸಮುದಾಯ ಪಾಲ್ಗೊಳ್ಳುವಿಕೆಗೆ ಸರ್ಕಾರ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ. ರೋಗ ತಡೆಗಟ್ಟುವಲ್ಲಿ ಆರೋಗ್ಯಕರ ಸ್ಪರ್ಧೆ ಹೆಚ್ಚಿಸುವ ಸಂಬಂಧ ಗ್ರಾಮ ಪಂಚಾಯಿತಿಗಳನ್ನು ಗುರುತಿಸಿ ಪುರಸ್ಕರಿಸಲಾಗುತ್ತಿದೆ. 2023ನೇ ಸಾಲಿನಲ್ಲಿ 6 ಮತ್ತು 2024ರಲ್ಲಿ 29, 2025ನೇ ಸಾಲಿನಲ್ಲಿ 65 ಗ್ರಾಮ ಪಂಚಾಯಿತಿಗಳನ್ನು ಕ್ಷಯ ಮುಕ್ತವೆಂದು ಗುರುತಿಸಲಾಗಿದೆ.

> **ಸರ್ಕಾರದ ನಿರ್ದೇಶನದಂತೆ ಜಿಲ್ಲೆಯಲ್ಲಿ ಕ್ಷಯ ರೋಗ ಪರೀಕ್ಷೆ ನಡೆಸಲಾಗುತ್ತಿದೆ. ಕಳೆದ ವರ್ಷ ರೋಗದಿಂದ ಗುಣಮುಖರಾದವರ ಸಂಖ್ಯೆ ಹೆಚ್ಚಿದೆ. ನಮ್ಮ ಇಲಾಖೆ ರೋಗ ನಿಯಂತ್ರಣಕ್ಕೆ ಶಕ್ತಿಮೀರಿ ಕೆಲಸ ಮಾಡುತ್ತಿದೆ. 64 ಗ್ರಾ.ಪಂ.ಗಳನ್ನು ಕ್ಷಯ ರೋಗ ಮುಕ್ತ ಎಂದು ಘೋಷಿಸಲಾಗಿದೆ.**
> **-ಡಾ|| ಎನ್.ಡಿ.ವಿಜಯ್, ಜಿಲ್ಲಾ ಕ್ಷಯ ರೋಗ ನಿಯಂತ್ರಣಾಧಿಕಾರಿ**

ಜಿಲ್ಲೆಯಲ್ಲಿ 9 ಚಿಕಿತ್ಸಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ. 2026ನೇ ಸಾಲಿನಲ್ಲಿ 36 ನಿಗದಿತ ಮೈಕ್ರೋಸ್ಕೋಪಿಕ್ ಕಫ ಪರೀಕ್ಷಾ ಕೇಂದ್ರ ಹಾಗು ಪರೀಕ್ಷೆಗೆ ಬಳಸುವ 28 ಅತ್ಯಾಧುನಿಕ **Molecular Testing** ಪ್ರಯೋಗಾಲಯ ತೆರೆಯಲಾಗಿದೆ. ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚನ್ನರಾಯಪಟ್ಟಣ, ಅರಸೀಕೆರೆ, ಹೊಳೆನರಸೀಪುರ, ಆಲೂರು, ಅರಕಲಗೂಡು, ಬೇಲೂರು, ಸಕಲೇಶಪುರ ಸಾರ್ವಜನಿಕ ಆಸ್ಪತ್ರೆ ಹಾಗು ಮೊಸಳೆಹೊಸಹಳ್ಳಿ, ಶಾಂತಿಗ್ರಾಮ, ಕೋಣನೂರು, ಹಳ್ಳಿ ಮೈಸೂರು, ಪಡುವಲಹಿಪ್ಪೆ, ದೊಡ್ಡ ಕುಂಚೇವು, ಉದಯಪುರ, ನುಗ್ಗೇಹಳ್ಳಿ, ಶ್ರವಣಬೆಳಗೊಳ, ಹಿರಿಸಾವೆ, ಗಂಡಸಿ, ಜೆ.ಸಿ.ಪುರ, ಹಳೇಬೀಡು, ಅರೇಹಳ್ಳಿ ಸಮುದಾಯ ಆರೋಗ್ಯ ಕೇಂದ್ರ ಮತ್ತು ಕಣಕಟ್ಟೆ, ಜಾವಗಲ್, ರಾಮನಾಥಪುರ, ಬಾಣಾವರ, ಹಾಸನದ ಕೃಷ್ಣ ಆಸ್ಪತ್ರೆ ಹಾಗು ಯಸಳೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ BA-04 ಅತ್ಯಾಧುನಿಕ ಯಂತ್ರಗಳ ಮೂಲಕ ಪರೀಕ್ಷೆ ನಡೆಸಲಾಗುತ್ತಿದೆ.

ಕ್ಷಯ ರೋಗಕ್ಕೆ ಕಾರಣಗಳು

- ಸೋಂಕಿತ ವ್ಯಕ್ತಿಯಿಂದ ಗಾಳಿ ಮೂಲಕ ಪ್ರಸರಣ
- ರೋಗ ನಿರೋಧಕ ಶಕ್ತಿ ಕುಂಠಿತ
- ಪೌಷ್ಟಿಕಾಂಶ ಆಹಾರ ಕೊರತೆ
- ಧೂಮಪಾನ, ಮದ್ಯಪಾನ
- ಬಡತನ, ಆರೋಗ್ಯ ಸೇವೆ ಕೊರತೆ

"ಇತ್ತೀಚೆಗೆ ಕೆಲವು ಚರ್ಚೆಗಳನ್ನು ನೀವು ನೋಡಬೇಕು, ಚರ್ಚೆಯ ವಿಷಯವೇ ಒಂದು, ಚರ್ಚೆ ಸಾಗುವುದೇ ಇನ್ನೊಂದು ದಿಕ್ಕಿನಲ್ಲಿ. ಗಂಟೆಗಟ್ಟಲೆ ನಡೆಯುವ ಚರ್ಚೆಯ ನಂತರ ಫಲಿತಾಂಶ ಏನು ಎಂದರೆ, ದೊಡ್ಡ ಸೊನ್ನೆ. ಚರ್ಚೆಯ ಕೊನೆಯಲ್ಲಿ ಯಾವುದೇ ನಿರ್ಣಯವಾಗದಿದ್ದರೂ, ಚರ್ಚೆಯಲ್ಲಿ ಭಾಗವಹಿಸಿದವರೆಲ್ಲ ನಾವೇ ಗೆದ್ದೆವು ಎಂದು ತಮ್ಮ ಬೆನ್ನನ್ನು ತಾವೇ ತಟ್ಟಿ ಕೊಂಡು ಸಮಾಧಾನಪಟ್ಟುಕೊಳ್ಳುತ್ತಾರೆ.

ವಿದೇಶವಾಸಿಗೆ ಆರು ವರುಷ, ಚರ್ಚಾವಾಸಿಗೆ ಒಂದು ನಿಮಿಷ...!

ವಿದೇಶವಾಸಿ

ಕೆಲವರು ಚರ್ಚೆಯಲ್ಲಿ ಭಾಗವಹಿಸುವುದು ತಮ್ಮ ಆತ್ಮರತಿಗಾಗಿ. ಇನ್ನು ಕೆಲವರಿಗೆ, ತಾವೂ ಈ ಸಮಾಜದಲ್ಲಿ ಇದ್ದೇವೆ, ಇನ್ನೂ ಬದುಕಿದ್ದೇವೆ, ಪ್ರಸ್ತುತರಾಗಿದ್ದೇವೆ ಎಂದು ತೋರಿಸಿ ಕೊಳ್ಳುವುದಕ್ಕಾಗಿ. ಅದೂ ಅವರಿಗೆ ನೆನಪಾದಾಗ ಮಾತ್ರ. ಅವರು ಕರೆದಾಗ, ಅವರು ಕೊಟ್ಟ ವಿಷಯದ ಕುರಿತು, ಚರ್ಚಿಸಬೇಕು ಅಥವಾ ಅಭಿಪ್ರಾಯ ಹೇಳಬೇಕು. ಅದೂ ಅವರಿಗೆ ಸಮಾಧಾನವಾಗುವಂತೆ! ಕತ್ತೆ ಬಾಲ, ಕುದುರೆ ಜುಟ್ಟು.

ಚರ್ಚೆ, ಚರ್ಚೆ ಚರ್ಚೆ... ಎಲ್ಲಿ ನೋಡಿದರೂ ಚರ್ಚೆ. ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್ತು, ಸುದ್ದಿ ವಾಹಿನಿಗಳು, ಅಂಗಡಿ-ಮುಂಗಟ್ಟು, ಊರು ಬಾಗಿಲಿನಲ್ಲಿರುವ ಅಶ್ವತ್ಥಮರದ ಕಟ್ಟೆ, ಎಲ್ಲ ಕಡೆಯೂ ಚರ್ಚೆಯೋ ಚರ್ಚೆ. ಫಲಿತಾಂಶ, ಪರಿಣಾಮ ಏನು? ಲೋಕಸಭೆಯಾಗಲಿ, ರಾಜ್ಯಸಭೆಯಗಲಿ, ವಿಧಾನಸಭೆ ಅಥವಾ ವಿಧಾನಪರಿಷತ್ತಿನ ಆಗಲಿ, ಅಷ್ಟೆಲ್ಲ ಯಾಕೆ? ಯಾವುದೇ ಸಂಘ-ಸಂಸ್ಥೆಯಲ್ಲಿ ನಡೆಯುವ ಚರ್ಚೆಯೇ ಆದರೂ ಕೊನೆಗೆ ನಿರ್ಣಯವಾಗುವುದು ಸಂಖ್ಯಾಬಲದ ಮೇಲೆಯೇ. ಒಂದು ವಿಷಯ ಮಂಡಿಸಿ ಅದರ ಮೇಲೆ ಒಂದು ಗಂಟೆ ಚರ್ಚೆ ನಡೆದರೂ ಅಷ್ಟೇ, ಒಂದು ವರ್ಷ ಚರ್ಚೆ ನಡೆದರೂ ಅಷ್ಟೇ, ಬಹುತೇಕ ಚರ್ಚೆಗಳಲ್ಲಿ ನಿರ್ಣಾಯಕರುಗಳೇ ಇಲ್ಲ, ಸಂಖ್ಯಾಬಲವೇ ನಿರ್ಣಾಯಕ.

ಇತ್ತೀಚೆಗೆ ಕೆಲವು ಚರ್ಚೆಗಳನ್ನು ನೀವು ನೋಡಬೇಕು, ಚರ್ಚೆಯ ವಿಷಯವೇ ಒಂದು, ಚರ್ಚೆ ಸಾಗುವುದೇ ಇನ್ನೊಂದು ದಿಕ್ಕಿನಲ್ಲಿ. ಗಂಟೆಗಟ್ಟಲೆ ನಡೆಯುವ ಚರ್ಚೆಯ ನಂತರ ಫಲಿತಾಂಶ ಏನು ಎಂದರೆ, ದೊಡ್ಡ ಸೊನ್ನೆ. ಚರ್ಚೆಯ ಕೊನೆಯಲ್ಲಿ ಯಾವುದೇ ನಿರ್ಣಯವಾಗದಿದ್ದರೂ, ಚರ್ಚೆಯಲ್ಲಿ ಭಾಗವಹಿಸಿದವರೆಲ್ಲ ನಾವೇ ಗೆದ್ದೆವು ಎಂದು ತಮ್ಮ ಬೆನ್ನನ್ನು ತಾವೇ ತಟ್ಟಿ ಕೊಂಡು ಸಮಾಧಾನಪಟ್ಟುಕೊಳ್ಳುತ್ತಾರೆ.

ಅದೆಷ್ಟೋ ಬಾರಿ ಚರ್ಚೆಯ ನಂತರ, ಆ ಒಂದು ವಿಷಯಕ್ಕೆ ಅಷ್ಟೆಲ್ಲ ಚರ್ಚೆಯ ಅಗತ್ಯವಿತ್ತೇ ಎಂಬ ಪ್ರಶ್ನೆ ಮೂಡುತ್ತದೆ. ಯಾವುದೋ ಒಂದು ಕಾನೂನು ತಿದ್ದುಪಡಿಗೆ ಸದನದ ಒಳಗೆ ಚರ್ಚೆ, ಆ ಕುರಿತಾಗಿ ಬೆಳಗಿಂದ ರಾತ್ರಿಯವರೆಗೆ ಸುದ್ದಿವಾಹಿನಿಯಲ್ಲಿ ಚರ್ಚೆ, ಅದೇ ವಿಷಯದ ಕುರಿತಾಗಿ, ಕೀಳುಭಾಷೆಯಲ್ಲಿ ಸಾಮಾಜಿಕ ಜಾಲತಾಣದಲ್ಲಿ ಒಂದು ವಾರ ಚರ್ಚೆ.

ಚರ್ಚೆಯ ಹೆಸರಿನಲ್ಲಿ ಬೈಗಳು. ಇದಕ್ಕೆಲ್ಲ ಏನಾದರೂ ಅರ್ಥವಿದೆಯೇ? ಯಾವ ಪ್ರಯೋಜನ ಇಲ್ಲದಿದ್ದರೂ ಈ ರೀತಿಯ ಚರ್ಚೆ ಸಾಕಷ್ಟು ಜನರ ಅಹಂಕಾರವನ್ನಂತೂ ತೃಪ್ತಿ ಪಡಿಸುತ್ತದೆ. ಇವರೆಲ್ಲ ಚರ್ಚಾಸುರರು ಅಥವಾ ಚರ್ಚೆಯಲ್ಲಿಯೇ ಬದುಕು ಕಳೆಯುವ ಚರ್ಚಾವಾಸಿಗಳು.

ಕೆಲವರು ಚರ್ಚೆಯಲ್ಲಿ ಭಾಗವಹಿಸುವುದು ತಮ್ಮ ಆತ್ಮರತಿಗಾಗಿ. ಇನ್ನು ಕೆಲವರಿಗೆ, ತಾವೂ ಈ ಸಮಾಜದಲ್ಲಿ ಇದ್ದೇವೆ, ಇನ್ನೂ ಬದುಕಿದ್ದೇವೆ, ಪ್ರಸ್ತುತರಾಗಿದ್ದೇವೆ ಎಂದು ತೋರಿಸಿ ಕೊಳ್ಳುವುದಕ್ಕಾಗಿ. ಅದೂ ಅವರಿಗೆ ನೆನಪಾದಾಗ ಮಾತ್ರ. ಅವರು ಕರೆದಾಗ, ಅವರು ಕೊಟ್ಟ ವಿಷಯದ ಕುರಿತು, ಚರ್ಚಿಸಬೇಕು ಅಥವಾ ಅಭಿಪ್ರಾಯ ಹೇಳಬೇಕು. ಅದೂ ಅವರಿಗೆ ಸಮಾಧಾನವಾಗುವಂತೆ!

ಕತ್ತೆ ಬಾಲ, ಕುದುರೆ ಜುಟ್ಟು. ಇತ್ತೀಚೆಗೆ ಫೇಸ್‌ಬುಕ್, ಯೂಟ್ಯೂಬ್‌ನಂಥ ಸೋಷಿಯಲ್ ಮೀಡಿಯಾದ ಹಾವಳಿ ಹೆಚ್ಚಾದ ನಂತರವಂತೂ ಇದು ಅತಿರೇಕಕ್ಕೆ ಹೋಗಿದೆ. ಸಾಲದು ಎಂಬಂತೆ ಈ ಚಾಳಿ ವಾಟ್ಸಾಪ್ ಗ್ರೂಪ್‌ಗಳಿಗೂ ಪಸರಿಸಿದ್ದು, ಅನವಶ್ಯಕ ಚರ್ಚೆಗಳಿಂದಾಗಿ ಗ್ರೂಪ್‌ಗಳೂ ಅಸ್ತಿತ್ವ ಕಳೆದುಕೊಂಡಿವೆ. ಒಬ್ಬರೋ-ಇಬ್ಬರೋ ಕಾಂಜಿ-ಪೀಂಜಿ ಕೊತ್ವಾಲರಿಂದಾಗಿ ಒಳ್ಳೊಳ್ಳೆ ಗ್ರೂಪ್‌ಗಳೂ ಹಳ್ಳ ಹಿಡಿದ ಉದಾಹರಣೆಗಳಿವೆ.

ಹಾಗಾದರೆ ಚರ್ಚೆ ನಡೆಯಲೇಬಾರದೇ? ಯಾವುದೇ ಒಂದು ವಿಷಯದ ಕುರಿತಾಗಿ ಪರ-ವಿರೋಧಗಳು ಇರಲೇಬಾರದೇ? ಖಂಡಿತ ಬೇಕು. ಈ ಜಗತ್ತು ಇಷ್ಟು ಮುಂದುವರಿದಿರುವುದಕ್ಕೆ ಕಾರಣಗಳಲ್ಲಿ ಚರ್ಚೆಯೂ ಒಂದು. ಸಿದ್ಧಾಂತ, ಅವಶ್ಯಕತೆ, ಅನ್ವೇಷಣೆ, ಪ್ರಯೋಗ, ಫಲಿತಾಂಶ, ಬಳಕೆ, ತರ್ಕ, ತರ್ಕದ ಒಂದು ಭಾಗವಾಗಿ ಚರ್ಚೆ, ಇವೆಲ್ಲವುಗಳಿಂದ ಜಗತ್ತು ಇಂದು ಈ ಮಟ್ಟಕ್ಕೆ ಬಂದು ನಿಂತಿದೆ.

ಆದರೆ ಇವೆಲ್ಲ ಒಂದಕ್ಕೊಂದು ಪೂರಕವಾಗಿದ್ದರೆ ಮಾತ್ರ ಅದಕ್ಕೊಂದು ಬೆಲೆ, ಒಂದು ನೆಲೆ. ಅದಕ್ಕೊಂದು ಗಾಂಭೀರ್ಯ, ಘನತೆ. ಹೇಗೆ, ಏಕೆ ಎಂದು ಹೇಳುತ್ತೇನೆ. ಅದಕ್ಕೂ ಮೊದಲು, ವಿದೇಶವಾಸಿ ಅಂಕಣ ಬರೆಯಲು ಆರಂಭಿಸಿ ಆರು ವರ್ಷಗಳಾದವು. ಈ ನಡುವೆ ಏನಿಲ್ಲವೆಂದರೂ ಐವತ್ತು ಬೇರೆ ಬೇರೆ ವಿಷಯಗಳ ಕುರಿತಾಗಿ ಬರೆಯುವಂತೆ ಜನರು ಸೂಚಿಸಿದ್ದಾರೆ.

ಅವರ ಪ್ರೀತಿ, ವಿಶ್ವಾಸಕ್ಕೆ ಋಣಿ. ಆದರೆ, ನನಗೆ ಸ್ವಲ್ಪವೂ ಗೊತ್ತಿಲ್ಲದ ವಿಷಯದ ಬಗ್ಗೆ ನಾನು ಬರೆಯಲು ಸಾಧ್ಯವಿಲ್ಲ ಎಂಬುದನ್ನು ನಾನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ. ಅಷ್ಟಕ್ಕೂ ಭೂಮಿಯ ಮೇಲಿರುವ ಪ್ರತಿಯೊಬ್ಬನಿಗೂ ಪ್ರತಿಯೊಂದು ವಿಷಯವೂ ತಿಳಿದಿರಬೇಕೆಂದೇನೂ ಇಲ್ಲ.

ಅಂಕಣ ಎಂದರೆ ಪತ್ರಿಕೆಯಲ್ಲಿ ಒಬ್ಬ ಬರಹಗಾರನಿಗೆ ನಿಯತವಾಗಿ ಸಿಗುವ ಜಾಗ. ಅಂಕಣ ಎಂಬ ಪದಕ್ಕೆ ಎರಡು ಕಂಬಗಳ ನಡುವಿನ ಸ್ಥಳ ಎಂಬ ಅರ್ಥವೂ ಇದೆ. ನನ್ನ ಪಾಲಿಗೆ ಅಂಕಣ ಎಂದರೆ ಅದು ನನ್ನ ಮನೆಯ ಅಂಗಳದಂತೆ. ನನ್ನ ಮನೆಯ ಅಂಗಳವನ್ನು ನಾನು ಎಷ್ಟು ಶುದ್ಧವಾಗಿ ಇಟ್ಟುಕೊಳ್ಳುತ್ತೇನೆಯೋ, ಅಂಕಣವನ್ನೂ ಅಷ್ಟೇ ಶುದ್ಧವಾಗಿ ಇಟ್ಟುಕೊಳ್ಳಬೇಕು.

ಮನೆಯಂಗಳದಲ್ಲಿ ಯಾವ ಗಿಡವಿರಬೇಕು, ಎಷ್ಟಿರಬೇಕು, ಎಲ್ಲಿರಬೇಕು ಎಂದು ನಿರ್ಣಯಿಸಬೇಕಾದವನು ನಾನು. ಯಾರದ್ದೋ ಒತ್ತಾಯಕ್ಕೆ, ಯಾವುದನ್ನೋ ತಂದು ನಮ್ಮ ಮನೆಯ ಅಂಗಳದಲ್ಲಿ ನೆಡುವುದಿಲ್ಲ, ನೆಡಲೂಬಾರದು ಅಲ್ಲವೇ? ಹಾಗೆಯೇ ಯಾರೋ ಹೇಳಿದರು ಎಂದು ಯಾವುದೋ ವಿಷಯವನ್ನು ಸ್ವಲ್ಪವೂ ತಿಳಿಯದೇ, ಮನಸ್ಸಿಲ್ಲದೇ



ಬರೆಯಲೂಬಾರದು.

ಹಾಗೆಯೇ, ಒಳ್ಳೆಯ ವಿಷಯ ಸಿಕ್ಕರೆ ಬಿಡಲೂಬಾರದು. ಅದರೊಂದಿಗೆ, ಅಂಕಣಕ್ಕೆ ಸಂಬಂಧಿಸಿದಂತೆ ನನ್ನದೇ ಆದ ಒಂದಷ್ಟು ನಿಯಮಗಳನ್ನು ನನಗೆ ನಾನೇ ವಿಧಿಸಿ ಕೊಂಡಿದ್ದೇನೆ. ಇಲ್ಲಿಯವರೆಗೂ ಆ ಚೌಕಟ್ಟಿನ ಪರಿಧಿಯನ್ನು ಮೀರದೆಯೇ ತ್ರಿಶತಕದ ಹೊಸ್ತಿಲಲ್ಲಿದ್ದೇನೆ.

ಅಂಕಣ ಬರಹಗಳು ಅಂಕಣಕಾರನ ಅನಿಸಿಕೆ ಅಥವಾ ಅಭಿಪ್ರಾಯವಾಗಿರುತ್ತವೆ. ಅದಕ್ಕೆ ಪ್ರತಿಯಾಗಿ ಓದುಗರೂ ತಮ್ಮ ಅಭಿಪ್ರಾಯ ತಿಳಿಸುತ್ತಾರೆ, ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾರೆ, ಇನ್ನೂ ಹೆಚ್ಚಿನ ಮಾಹಿತಿ ನೀಡುತ್ತಾರೆ, ಕೆಲವು ಪ್ರಶ್ನೆ ಉದ್ಭವಿಸಿದರೆ ಅದನ್ನೂ ಕೇಳುತ್ತಾರೆ.

ಅದು ಸಹಜ. ಒಂದು ಮಿತಿಯ ಒಳಗಿದ್ದರೆ, ಭಾಷೆ ಸಾಧುವಾಗಿದ್ದರೆ, ಪ್ರಾಮಾಣಿಕ ಕಳಕಳಿಯಿಂದ ಯಾರು ಏನೇ ಕೇಳಿದರೂ, ತಿಳಿದುಕೊಳ್ಳಬೇಕೆಂದಿದ್ದರೂ ಒಳ್ಳೆಯದೇ, ಅದಕ್ಕೆ ಸ್ವಾಗತ. ಸಾಧ್ಯವಾದಷ್ಟೂ ನಾನು ಪ್ರತಿಕ್ರಿಯಿಸುತ್ತೇನೆ. ಆದರೆ ಕೆಲವೊಮ್ಮೆ ಕಾರಣಾಂತರದಿಂದ ಪ್ರತಿಕ್ರಿಯೆ ನೀಡಲು ಸಾಧ್ಯವಾಗುವುದಿಲ್ಲ.

ಅದಕ್ಕಾಗಿ ವಿಷಾದವೂ ಇದೆ. ಇನ್ನು ಕೆಲವೊಮ್ಮೆ ಬೇಕೆಂದೇ ಉತ್ತರಿಸದೇ ಇದ್ದದ್ದೂ ಇದೆ. ನನ್ನ ಅಭಿಪ್ರಾಯವನ್ನು ಹೇಳಲು ನಾನು ಹೇಗೆ ಮುಕ್ತನೋ, ಹಾಗೆಯೇ ಉಳಿದವರೂ ಅವರ ಅಭಿಪ್ರಾಯ ಹೇಳಲು ಮುಕ್ತರು ಎಂದು ನಂಬಿದವ ನಾನು. ಹಾಗಾಗಿ ಅಂಥವರ ಕುರಿತಾಗಿ ಯಾವ ದ್ವೇಷವಾಗಲಿ, ಬೇಸರವಾಗಲಿ ಇಲ್ಲ.

ನಾನು ಅಂತಲ್ಲ ಯಾರೂ ಇಟ್ಟುಕೊಳ್ಳಬಾರದು. ಅಸಭ್ಯ ಭಾಷೆ ಬಳಸಿದರೆ, ವಿತಂಡ ವಾದಕ್ಕಿಳಿದರೆ, ಅನವಶ್ಯಕ ಚರ್ಚೆಗೆ ಎಳೆದರೆ, ಹೆಚ್ಚಾಗಿ ಉತ್ತರಿಸುವುದಿಲ್ಲ, ಪ್ರತಿಕ್ರಿಯಿಸುವುದೂ ಇಲ್ಲ. ಏಕೆಂದರೆ ಅಂಥವರನ್ನು ಸಮಾಧಾನಪಡಿಸಲು ಬ್ರಹ್ಮನಿಂದಲ್ಲ, ಯಾವ ಸಾಮಾಜಿಕ ಜಾಲತಾಣದ ಮಾಲೀಕನಿಂದಲೂ ಸಾಧ್ಯವಿಲ್ಲ! ಅಂಥವರಲ್ಲಿ ನೂರಕ್ಕೆ ತೊಂಬತ್ತೊಂಬತ್ತು ಜನ ತಮ್ಮ ಇರುವಿಕೆ ತೋರಿಸಲು ಮತ್ತು ತಮ್ಮೊಳಗಿನ ಅಹಂಕಾರವನ್ನು ತೃಪ್ತಿಪಡಿಸಲು ಹಾತೊರೆಯುತ್ತಿರುವವರು. ಯಾವುದೇ ರೀತಿಯ ಸಮಜಾಯಿಷಿ ನೀಡಿದರೂ ಅವರು ಒಪ್ಪುವುದಿಲ್ಲ. ಕಾರಣ, ಅಂಥವರು ತಮಗೆ ತಿಳಿದಿದ್ದೇ ನಿಜ, ತಾವು ಹೇಳಿದ್ದೇ ಸರಿ, ಯಾವ ಕಾರಣಕ್ಕೂ ತಾವು ಸೋಲಬಾರದು ಎಂದೇ ಇರುವವರು. ಅಂಥವರಿಗೆ ನಾನು ಬಳಸುವ ಸೂತ್ರ ಒಂದೇ, ಅಹಂಕಾರಕ್ಕೆ ಉದಾಸೀನದ ಮದ್ದು! ಅಂಥವರು ನನ್ನನ್ನು ಚರ್ಚೆಗೆ ಬಾರದ ಹೇಡಿ ಅಂದುಕೊಂಡರೂ ಅಡ್ಡಿಯಿಲ್ಲ.

ಅಂಥವರೊಂದಿಗೆ ವಾದಕ್ಕೆ, ಚರ್ಚೆಗೆ ಇಳಿಯುವುದು ಎಂದರೆ, ಸಗಣಿಯೊಂದಿಗೆ ಸರಸ ವಾಡಿದಂತೆ ಎಂಬುದು ನನ್ನ ಅನಿಸಿಕೆ. ಇದು ಅವರಿಗೆ ಅರ್ಥವಾಗದಿದ್ದರೂ ಸರಿ. ಅಂಥವರ ಅಹಂಕಾರಕ್ಕೆ ಒಂದು ನಿಮಿಷದ ಮೌನ!

ಹಾಗಾದರೆ ಚರ್ಚೆ ಎನ್ನುವುದು ನಿನ್ನೆ ಮೊನ್ನೆ ಹುಟ್ಟಿಕೊಂಡದ್ದೇ? ಫೇಸ್‌ಬುಕ್, ವಾಟ್ಸಾಪ್ ನಂತರ ಆರಂಭವಾದದ್ದೇ? ಖಂಡಿತ ಅಲ್ಲ. ಚರ್ಚೆಗಳು ಎಂದು ಆರಂಭವಾದವು ಎಂದು ಹುಡುಕುತ್ತ ಹೋದರೆ, ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಚರ್ಚೆಗಳಾಗುತ್ತಿದ್ದ ವಿಷಯ ತಿಳಿದುಬರುತ್ತದೆ. ಬಹುತೇಕ ಚರ್ಚೆಗಳು ಧಾರ್ಮಿಕ, ನೈತಿಕ, ತಾತ್ವಿಕ, ಸೈದ್ಧಾಂತಿಕ ವಿಷಯಗಳ ಮೇಲೆ ನಡೆಯುತ್ತಿತ್ತಂತೆ. ಆ ಚರ್ಚೆಗಳೆಲ್ಲ ಜ್ಞಾನ ಸಂಗ್ರಹಕ್ಕಾಗಿ ಅಥವಾ ಜ್ಞಾನವೃದ್ಧಿಗಾಗಿ ನಡೆಯುತ್ತಿದ್ದಂಥವು. ಇದನ್ನು ವಾದವಿದ್ಯೆ ಎಂದು ಕರೆಯಲಾಗುತ್ತಿತ್ತಂತೆ.

ಅವೆಲ್ಲವೂ ರಾಜಾಶ್ರಯದಲ್ಲಿ ನಡೆಯುತ್ತಿದ್ದ ಚರ್ಚೆಗಳು. ಆ ಕಾಲದಲ್ಲಿಯೇ ಇಂಥ ಚರ್ಚೆಯಲ್ಲಿ ಮಹಿಳೆಯರೂ ಭಾಗವಹಿಸುತ್ತಿದ್ದರಂತೆ. ಗಾರ್ಗಿಯಂಥ ಮಹಿಳಾ ವಿದ್ವಾಂಸರು ಇದಕ್ಕೆ ಉದಾಹರಣೆ. ಅಂದರೆ, ಆ ಕಾಲದಿಂದಲೂ ಚರ್ಚೆಯ ವಿಷಯ ಬಂದಾಗ ಲಿಂಗಭೇದವಿರಲಿಲ್ಲ ಎಂದು ಸಾಬೀತಾಯಿತು.

ಇನ್ನೊಂದು, ಆಗ ನಡೆಯುತ್ತಿದ್ದ ಚರ್ಚೆಗಳನ್ನೆಲ್ಲ ದಾಖಲಿಸಿ, ಆಯಾ ವಿಭಾಗಗಳೊಂದಿಗೆ ವ್ಯವಹರಿಸಲು ಕೈಪಿಡಿ ತಯಾರಿಸಲಾಗುತ್ತಿತ್ತು. ಇಂಥ ಚರ್ಚೆಗಳಿಂದಲೇ ಭಾರತದ ತರ್ಕ ಮತ್ತು ಸಂಶೋಧನೆಗಳ ಸಂಪ್ರದಾಯ ವಿಕಸನಗೊಂಡಿತು, ಅಭಿವೃದ್ಧಿಹೊಂದಿತು ಎಂದರೆ ತಪ್ಪಾಗಲಿಕ್ಕಿಲ್ಲ.

ಕ್ರಿಸ್ತಪೂರ್ವ ಮೂರನೆಯ ಶತಮಾನದಲ್ಲಿಯೇ ಸನ್ಯಾಸಿಗಳು ಮತ್ತು ಪುರೋಹಿತರು ಚರ್ಚೆ ನಡೆಸುವ ಕಲೆಯಲ್ಲಿ ನಿಪುಣರಾಗಿದ್ದರು ಎಂದು ತಿಳಿದುಬರುತ್ತದೆ. ಆ ಕಾಲದ ಹಲವಾರು ಚರ್ಚಾ ಕೈಪಿಡಿಗಳನ್ನು ನಾವು ಇಂದಿಗೂ ಕಾಣಬಹುದಾಗಿದೆ. ಆಯುರ್ವೇದದ ಎರಡು ಪಠ್ಯಗಳಾದ ಚರಕ ಸಂಹಿತ ಮತ್ತು ಸುಶ್ರುತ ಸಂಹಿತ ಗ್ರಂಥಗಳು ಅದಕ್ಕೆ ಸಾಕ್ಷಿಯಾಗಿ ಇಂದಿಗೂ ಉಳಿದುಕೊಂಡಿವೆ.

ಚರಕ ಸಂಹಿತದಲ್ಲಿ ವೈದ್ಯರ ತರಬೇತಿ, ರೋಗ, ಆಹಾರ, ಪೋಷಣೆ, ಔಷಧಿ ಇತ್ಯಾದಿಗಳ ಜತೆ ನೀತಿಶಾಸ ಮತ್ತು ಚರ್ಚೆಯ ತತ್ವಗಳ ಕುರಿತಾದ ವಿಷಯವನ್ನು ಪ್ರಸ್ತಾಪಿಸಲಾಗಿದೆ. ಅದರ ಪ್ರಕಾರ ಚರ್ಚೆಯಲ್ಲಿ ಎರಡು ವಿಧಗಳು. ಒಂದು, ಶಾಂತಿಯುತ ಚರ್ಚೆ, ಇನ್ನೊಂದು ಪ್ರತಿಕ್ರಿಯಾಶೀಲ ಚರ್ಚೆ.

ಶಾಂತಿಯುತ ಚರ್ಚೆ ಎಂದರೆ, ಒಂದು ವಿಷಯದ ಕುರಿತಾದ ಮಂಡನೆ. ಪ್ರತಿಕ್ರಿಯಾಶೀಲ ಚರ್ಚೆ ಎಂದರೆ, ಆ ಮಂಡನೆಗೆ ಪ್ರತಿಕ್ರಿಯಿಸುವ ಬಗೆ. ಪ್ರತಿಕ್ರಿಯೆ ನೀಡುವ ವರ್ಗದವರನ್ನು ಶ್ರೇಷ್ಠ, ಸಮಾನ ಮತ್ತು ಕೀಳು ಹೀಗೆ ವರ್ಗೀಕರಿಸಲಾಗುತ್ತಿತ್ತಂತೆ. ಇದರೊಂದಿಗೆ ಚರ್ಚಿಸುವವರನ್ನಷ್ಟೇ ಅಲ್ಲದೆ, ವೀಕ್ಷಿಸುವ ಸಭೆಯ ಕುರಿತಾಗಿಯೂ ಅದರಲ್ಲಿ ಉಲ್ಲೇಖವಿದೆ.

ಸಭೆಯಲ್ಲಿ, ಕಲಿತವರು ಅಥವಾ ಜ್ಞಾನಿಗಳು ಮತ್ತು ಅಜ್ಞಾನಿಗಳು ಎಂದು ಎರಡು ರೀತಿಯಲ್ಲಿ ವರ್ಗೀಕರಿಸಲಾಗುತ್ತಿತ್ತಂತೆ. ಇವುಗಳಲ್ಲಿಯೂ ಸ್ನೇಹಪರ, ಪ್ರತಿಕೂಲ ಅಥವಾ ಅಸಡ್ಡೆ ವರ್ಗದ ಜನರು ಎಂದು ಪುನಃ ವರ್ಗೀಕರಿಸಲಾಗುತ್ತಿತ್ತಂತೆ. ಪ್ರತಿಕ್ರಿಯಿಸುವವರ ಸ್ವರೂಪವನ್ನು ಅವಲಂಬಿಸಿ ಸಭೆಯಲ್ಲಿ ಚರ್ಚೆಯನ್ನು ಹೇಗೆ ನಿರ್ವಹಿಸಬೇಕು ಎಂಬುದರ ಕುರಿತು ಸಲಹೆಗಳೂ ಇವೆಯಂತೆ. ಈ ಕುರಿತಾಗಿಯೇ ಗ್ರಂಥದಲ್ಲಿ ನಲವತ್ತನಾಲ್ಕು ಅಂಶಗಳ ಪಟ್ಟಿ ಇದೆ ಎಂದು ತಿಳಿದುಬರುತ್ತದೆ. ಅಂದರೆ ಚರ್ಚೆಗೆ ಆ ಕಾಲದಲ್ಲಿ ನೀಡುತ್ತಿದ್ದ ಮಹತ್ವ ಏನು, ಎಷ್ಟು ಎಂಬುದರ ಅರಿವಾಗುತ್ತದೆ.

ಹಾಗೆಯೇ ಚರ್ಚೆಯಾಗಲಿ, ಅಭಿಪ್ರಾಯವಾಗಲಿ, ಉಪದೇಶವೇ ಆಗಲಿ ವಿಷಯ, ಸ್ಥಳ ಮತ್ತು ವ್ಯಕ್ತಿಯನ್ನು ಅವಲಂಬಿಸಿರುತ್ತದೆ. ನ್ಯಾಯಾಲಯದಲ್ಲಿ ನಡೆಯುವ ಚರ್ಚೆಯೇ ಬೇರೆ, ಧಾರ್ಮಿಕ ಸ್ಥಳಗಳಲ್ಲಿ ನಡೆಯುವ ಚರ್ಚೆಯೇ ಬೇರೆ, ವಿಜ್ಞಾನದ ಚರ್ಚೆಯೇ ಬೇರೆ. ಚರ್ಚೆಯ ಕುರಿತು ಒಂದು ಲೇಖನದ, ವಾಟ್ಸಾಪ್‌ನ, ಫೇಸ್‌ಬುಕ್‌ನ ಹೇಳಿ ಮುಗಿಸಲು ಸಾಧ್ಯವಿಲ್ಲ.

ಚರ್ಚೆ ಎನ್ನುವುದು ಘನವಾದ ವಿಷಯವೇ ಹೊರತು ಮಕ್ಕಳಾಟಿಕೆಯಲ್ಲ. ಆದರೆ ಈಗ? ಎಲ್ಲರೂ ವಿದ್ವಾಂಸರು, ಎಲ್ಲರೂ ಸ್ವಯಂಘೋಷಿತ ಪಂಡಿತೋತ್ತಮರು. ನಿಮಗೆ ಹಾಗನ್ನಿಸುವುದಿಲ್ಲವೇ? ಒಮ್ಮೆ ಫೇಸ್ ಬುಕ್, ಎಕ್ಸ್ (ಟ್ವಿಟರ್) ತೆಗೆದು ನೋಡಿ. ಸ್ವಯಂ ಘೋಷಿತ, ಮುಸುಕುಧಾರಿ ಪಂಡಿತರ ಹಾವಳಿ, ತನ್ನದೊಂದು ತೂರಿಸುವ ತೆವಲು. ಅದೂ ಫೇಕ್ ಐಡಿಯಲ್ಲಿ. ತನ್ನ ಪರಿಚಯವನ್ನೇ ಹೇಳಿಕೊಳ್ಳಲಾಗದವರಲ್ಲಿ ಯಾವ ಚರ್ಚೆ? ಅವರಿಂದ ಏನು ಉಪದೇಶ? ಇತಿಹಾಸದ ಘಟನೆಗಳ ಬಗ್ಗೆ, ವ್ಯಕ್ತಿಗಳ ಬಗ್ಗೆ ಇಂದಿಗೂ ಚರ್ಚೆ ನಡೆಯುತ್ತಿದೆ.

ನನ್ನ ಬಾಲ್ಯದಿಂದಲೂ ಕೇಳಿಕೊಂಡು ಬಂದ ಚರ್ಚೆ, ಚಹಾ-ಕಾಫಿ ಆರೋಗ್ಯಕ್ಕೆ ಒಳ್ಳೆಯದೋ ಕೆಟ್ಟದ್ದೋ, ಕೋಳಿ ಮೊಟ್ಟೆ ದೇಹಕ್ಕೆ ಒಳ್ಳೆಯದೋ ಕೆಟ್ಟದ್ದೋ ಎನ್ನುವುದಕ್ಕೆ ಇನ್ನೂ ಉತ್ತರ ಸಿಕ್ಕಿಲ್ಲ. ಆಯುರ್ವೇದವೋ, ಅಲೋಪತಿಯೋ ಎನ್ನುವುದೇ ಇನ್ನೂ ಬಗೆಹರಿದಿಲ್ಲ.

ನಾನು ಸಾಯುವುದರೊಳಗೆ ಇದಕ್ಕೆಲ್ಲ ಉತ್ತರ ಸಿಗುವ ಯಾವ ಲಕ್ಷಣವೂ ಕಾಣುವುದಿಲ್ಲ. ಹಾಗಿರುವಾಗ, ಯಾವುದೋ ಚಿತ್ರನಟಿ ಸಾವಿರ ವರ್ಷದ ಹಿಂದಿನ ಇತಿಹಾಸದ ಕುರಿತು ಹೇಳಿಕೆ ನೀಡಿದ್ದರ ಬಗ್ಗೆಯಾಗಲಿ, ಕ್ರೀಡಾಪಟುವೊಬ್ಬ ಅಂತರಿಕ್ಷದ ಬಗ್ಗೆ ಆಡಿದ ಮಾತಿಗಾಗಲಿ ಅಥವಾ ಯಾವುದೋ ಊರಿನ ಯಾವುದೋ ಓಣಿಯಲ್ಲಿ ಕೈಗಾಡಿ ದೂಡುವವನೊಬ್ಬ ಯಾವುದೋ ದೇಶದ ನೀತಿಯ ಬಗ್ಗೆ ನೀಡಿದ ಹೇಳಿಕೆಯ ಕುರಿತು ಅಭಿಪ್ರಾಯ ತಿಳಿಸಿ ಎಂದರೆ, ಚರ್ಚೆಗೆ ಬನ್ನಿ ಎಂದು ಕರೆದರೆ, ಆಗಲೇ ಹೇಳಿದ್ದಾನಲ್ಲ- ಕತ್ತೆ ಬಾಲ, ಕುದುರೆ ಜುಟ್ಟು!

- ಕಿರಣ್ ಉಪಾಧ್ಯಾಯ, ಬಹ್ರೈನ್

ಇವಾಲ್ವ್ ಬ್ಯಾಕ್ ಎಂದರೇನು?

"ನಾನು ಹಂಪಿಯಲ್ಲಿರುವ ಇವಾಲ್ವ್ ಬ್ಯಾಕ್ ಎಂಬ ರೆಸಾರ್ಟಿನಲ್ಲಿ ಉಳಿದಿದೆ. ಇದರ ಹೆಸರೇ ಭಿನ್ನ ಮತ್ತು ವಿಶಿಷ್ಟವಾಗಿದೆ. ಈ ರೆಸಾರ್ಟ್ ಸಮೂಹವನ್ನು ಮೊದಲು ಆರೇಂಜ್ ಕೌಂಟಿ ಎಂದು ಕರೆಯಲಾಗುತ್ತಿತ್ತು. ಇವಾಲ್ವ್ ಬ್ಯಾಕ್ ಎಂಬ ಹೆಸರಿನಿಂದ ಕರೆಯಲು ಯಾವುದೋ ಬಲವಾದ ಕಾರಣ ಇದ್ದಿರಲೇಬೇಕು.

ಸಂಪಾದಕರ ಸದ್ಯಶೋಧನೆ

ನಾನು ಹಂಪಿಯಲ್ಲಿರುವ ಇವಾಲ್ವ್ ಬ್ಯಾಕ್ ಎಂಬ ರೆಸಾರ್ಟಿನಲ್ಲಿ ಉಳಿದಿದ್ದೆ. ಇದರ ಹೆಸರೇ ಭಿನ್ನ ಮತ್ತು ವಿಶಿಷ್ಟವಾಗಿದೆ. ಈ ರೆಸಾರ್ಟ್ ಸಮೂಹವನ್ನು ಮೊದಲು ಆರೇಂಜ್ ಕೌಂಟಿ ಎಂದು ಕರೆಯಲಾಗುತ್ತಿತ್ತು. ಇವಾಲ್ವ್ ಬ್ಯಾಕ್ ಎಂಬ ಹೆಸರಿನಿಂದ ಕರೆಯಲು ಯಾವುದೋ ಬಲವಾದ ಕಾರಣ ಇದ್ದಿರಲೇಬೇಕು. ಇವಾಲ್ವ್ ಬ್ಯಾಕ್ ಒಂದು ಆಳವಾದ ಜೀವನದರ್ಶನ ಮತ್ತು ಪ್ರಕೃತಿಯತ್ತ ಮರಳುವ ಕರೆಯನ್ನು ಒಳಗೊಂಡಿದೆ ಎಂದೆನಿಸುತ್ತದೆ. ಸಾಮಾನ್ಯವಾಗಿ ಎಂದರೆ ವಿಕಸನಗೊಳ್ಳುವುದು ಅಥವಾ ಮುಂದಕ್ಕೆ ಸಾಗುವುದು ಎಂದರ್ಥ.

ನಾವು ನಾಗರಿಕತೆಯ ಹಾದಿಯಲ್ಲಿ ಬೆಳೆಯುತ್ತಾ ತಂತ್ರಜ್ಞಾನ ಮತ್ತು ಆಧುನಿಕತೆಯ ಶಿಖರವನ್ನು ಏರಿದ್ದೇವೆ. ಆದರೆ ಎಂಬ ಪದವನ್ನು ಇದರೊಂದಿಗೆ ಸೇರಿಸಿದಾಗ, ಅದು ನಮ್ಮ ಮೂಲಕ್ಕೆ ಮರಳಿ ವಿಕಸನಗೊಳ್ಳುವುದು ಎಂಬ ವಿಶಿಷ್ಟ ಅರ್ಥವನ್ನು ನೀಡುತ್ತದೆ. ಇದರ ಹಿಂದಿನ ಆಶಯವೆಂದರೆ, ಆಧುನಿಕತೆಯ ಗದ್ದಲದಲ್ಲಿ ನಾವು ಕಳೆದುಕೊಂಡಿರುವ ಶಾಂತಿ ಮತ್ತು ಪ್ರಕೃತಿಯನ್ನು ಮತ್ತೆ ಕಂಡುಕೊಳ್ಳುವುದು, ಪರಿಸರದೊಂದಿಗೆ ಸಮತೋಲನ ಕಾಯ್ದುಕೊಳ್ಳುತ್ತಾ ಬದುಕುವುದು ಹಾಗೂ ನಮ್ಮ ಸಂಸ್ಕೃತಿ, ಪರಂಪರೆ ಮತ್ತು ನೈಸರ್ಗಿಕ ಬೇರುಗಳಿಗೆ ಮರಳುವುದು.

ಇವಾಲ್ವ್ ಬ್ಯಾಕ್ ರೆಸಾರ್ಟಿನ ಹಿಂದೆಯೂ ಇದೇ ಉದ್ದೇಶವಿದ್ದಂತಿದೆ. ಕೇವಲ ಐಷಾರಾಮಿ ಸೌಲಭ್ಯ ನೀಡುವುದಷ್ಟೇ ಇದರ ಗುರಿಯಲ್ಲ. ಅತಿಥಿಗಳು ಪ್ರಕೃತಿಯ ಭಾಗವಾಗಿ ಅನುಭವ ಪಡೆಯಬೇಕು ಎಂಬುದು ಆಶಯ. ಸಾಮಾನ್ಯವಾಗಿ ವಿಕಸನ ಎಂದರೆ ಹಳೆಯದನ್ನು ಬಿಟ್ಟು ಹೊಸತನ್ನು ಅಪ್ಪಿಕೊಳ್ಳುವುದು. ಆದರೆ ಈ ಇವಾಲ್ವ್ ಬ್ಯಾಕ್ ತತ್ವವು ಹೇಳುವುದೇನೆಂದರೆ, ನೈಜ ಪ್ರಗತಿಯು ನಿಸರ್ಗದೊಂದಿಗೆ ಸಹಬಾಳ್ವೆ ನಡೆಸುವುದರಲ್ಲಿದೆ.

ಇಲ್ಲಿನ ರೆಸಾರ್ಟ್‌ಗಳು ಇರುವ ಪರಿಸರಕ್ಕೆ ತಕ್ಕಂತೆ ವಿನ್ಯಾಸಗೊಂಡಿವೆ. ಹಂಪಿಯ ವಿಜಯ ನಗರ ಸಾಮ್ರಾಜ್ಯದ ವೈಭವವಿರಲಿ ಅಥವಾ ಕಬಿನಿಯ ಕಾಡುಕುರುಬರ ಶೈಲಿಯಿರಲಿ, ಇವು ಇತಿಹಾಸವನ್ನು ಮತ್ತೆ ಜೀವಂತಗೊಳಿಸುತ್ತವೆ. ಇಲ್ಲಿ ಅತ್ಯಾಧುನಿಕ ಸೌಲಭ್ಯಗಳಿದ್ದರೂ, ಅವು ಪ್ರಕೃತಿಯನ್ನು ಗೌರವಿಸುತ್ತವೆ.

ಹತ್ತಿರದ ಮರ-ಗಿಡಗಳು, ಪ್ರಾಣಿ-ಪಕ್ಷಿಗಳು ಮತ್ತು ಸ್ಥಳೀಯ ಜನರ ಬದುಕಿನ ಶೈಲಿಯನ್ನು ಅತಿಕ್ರಮಿಸದೇ ಅವುಗಳೊಂದಿಗೆ ಲೀನವಾಗುತ್ತವೆ. ಇವಾಲ್ವ್ ಬ್ಯಾಕ್ ಎನ್ನುವುದನ್ನು ಮೂರು ವಿಭಾಗಗಳಲ್ಲಿ ಹೀಗೆ ವಿವರಿಸಬಹುದು- ಮೊದಲನೆಯದು, ಸಾಂಸ್ಕೃತಿಕ ಬೇರುಗಳಿಗೆ ಮರಳುವುದು.

ಇಂದು ನಾವು ಜಾಗತೀಕರಣದ ಪ್ರಭಾವದಿಂದ ನಮ್ಮೂರಿನ ಕಲೆ, ಆಹಾರ ಮತ್ತು ವಾಸ್ತು ಶಿಲ್ಪವನ್ನು ಮರೆಯುತ್ತಿದ್ದೇವೆ. ಇವಾಲ್ವ್ ಬ್ಯಾಕ್ ಈ ಪರಂಪರೆಯನ್ನು ಉಳಿಸುವ ಕೆಲಸ ಮಾಡುತ್ತದೆ. ಉದಾಹರಣೆಗೆ, ಕೊಡಗಿನ ಕೊಡವ ಸಂಸ್ಕೃತಿಯನ್ನು ಅವರ ರೆಸಾರ್ಟ್‌ನಲ್ಲಿ ಪ್ರತಿಬಿಂಬಿಸುವ ಮೂಲಕ ಪ್ರವಾಸಿಗರಿಗೆ ತಮ್ಮ ಮಣ್ಣಿನ ಘಮವನ್ನು ಪರಿಚಯಿಸುತ್ತಾರೆ.

ಎರಡನೆಯದು, ಪ್ರಕೃತಿಯೊಂದಿಗೆ ಸಂಪರ್ಕ. ನಗರೀಕರಣದಿಂದಾಗಿ ನಾವು ಕಾಂಕ್ರೀಟ್ ಕಾಡುಗಳಲ್ಲಿ ಸಿಲುಕಿದ್ದೇವೆ. ಇವಾಲ್ವ್ ಬ್ಯಾಕ್ ಎಂದರೆ ಮತ್ತೆ ಕಾಡು, ನದಿ ಮತ್ತು ಹಸಿರಿನ ಮಡಿಲಿಗೆ ಹೋಗುವುದು. ಇಲ್ಲಿನ ಪರಿಸರವು ಅತಿಥಿಗಳಿಗೆ ತಾಂತ್ರಿಕ ಪ್ರಪಂಚದಿಂದ ದೂರವಿದ್ದು, ತಮ್ಮ ಅಂತರ್ಯದೊಂದಿಗೆ ಸಂವಹನ ನಡೆಸಲು ಅವಕಾಶ ನೀಡುತ್ತದೆ. ಮೂರನೆಯದು, ಸುಸ್ಥಿರ ಅಭಿವೃದ್ಧಿ. ಪರಿಸರಕ್ಕೆ ಹಾನಿ ಮಾಡದೆ ಅಭಿವೃದ್ಧಿ ಹೊಂದ ಬೇಕು ಎಂಬುದು ಇದರ ಪ್ರಮುಖ ಪಾಠ.

ಪ್ಲಾಸ್ಟಿಕ್‌ಮುಕ್ತ ವಾತಾವರಣ, ಮಳೆನೀರು ಕೊಯ್ಲು ಮತ್ತು ಸ್ಥಳೀಯ ಸಮುದಾಯಗಳಿಗೆ ಉದ್ಯೋಗ ನೀಡುವ ಮೂಲಕ ಇವರು ನಿಜವಾದ ವಿಕಸನವನ್ನು ತೋರಿಸಿ ಕೊಡುತ್ತಿದ್ದಾರೆ. ಇವಾಲ್ವ್ ಬ್ಯಾಕ್ ಎಂಬುದು ಕೇವಲ ಒಂದು ಬ್ರ್ಯಾಂಡ್ ಹೆಸರಲ್ಲ, ಅದು ಪ್ರತಿಯೊಬ್ಬ ಮನುಷ್ಯನಿಗೂ ಅನ್ವಯಿಸುವ ಜೀವನಶೈಲಿ. ನಾವು ಎಷ್ಟೇ ದೊಡ್ಡ ಸಾಧನೆ ಮಾಡಿದರೂ, ಎಷ್ಟೇ ಶ್ರೀಮಂತರಾದರೂ, ನಮಗೆ ನೆಮ್ಮದಿ ಸಿಗುವುದು ಪ್ರಕೃತಿಯ ಮಡಿಲಲ್ಲಿ ಮತ್ತು ನಮ್ಮ ಸಂಸ್ಕೃತಿಯಲ್ಲಿ ಎಂಬ ಸತ್ಯವನ್ನು ಇದು ನೆನಪಿಸುತ್ತದೆ.

ಇವಾಲ್ವ್ ಬ್ಯಾಕ್ ಎಂದರೆ ಹಳೆಯ ಸಂಪ್ರದಾಯದ ಮೌಲ್ಯಗಳನ್ನು ಮತ್ತು ಪ್ರಕೃತಿಯ ಪಾವಿತ್ರ್ಯವನ್ನು ಉಳಿಸಿಕೊಂಡು ಆಧುನಿಕ ಜಗತ್ತಿನಲ್ಲಿ ಅರ್ಥಪೂರ್ಣವಾಗಿ ಬದುಕುವುದು. ಇದು ಹಿಂದಕ್ಕೆ ಹೋಗುವುದಲ್ಲ, ಬದಲಿಗೆ ಸರಿಯಾದ ಹಾದಿಯಲ್ಲಿ ಮುಂದೆ ಸಾಗುವುದು.

- ವಿಶ್ವೇಶ್ವರ ಭಟ್

ಕೃತಕ ಬುದ್ಧಿಮತ್ತೆ: ದ್ವಿತೀಯ ದರ್ಜೆಯ ಸ್ವೋಪಜ್ಞತೆ



» ಇತ್ತೀಚೆಗೆ ಕೃತಕ ಬುದ್ಧಿಮತ್ತೆ (ಎಐ) ಮೂಲಕ, ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಲಾದ ಒಂದು ಕೃತಿಯನ್ನು ಬಿಡುಗಡೆ ಮಾಡಲಾಯಿತು; ಈ ಕೃತಿಯು ಎಐನಿಂದ ಅನುವಾದಗೊಂಡ ಪ್ರಪ್ರಥಮ ಭಾರತೀಯ ಪುಸ್ತಕವೆಂದು ಪ್ರಚಾರ ಪಡೆಯಿತು. ದೆಹಲಿಯಲ್ಲಿ ನಡೆದ ಎಐ ಸಮಾವೇಶದಲ್ಲೂ ಸಹ ಈ ಎಐ ಅನುವಾದಿತ ಕೃತಿ ಸದ್ದು ಮಾಡಿತು.

ಕುವೆಂಪು ನೀನೇರಬಲ್ಲೆಯಾ ನಾನೇರುವೆತ್ತರಕೆ? / ನೀ ಹಾರಬಲ್ಲೆಯಾ ನಾ ಹಾರು ವಗಲಕ್ಕೆ? / ನೀ ಮುಳುಗಬಲ್ಲೆಯಾ ನಾ ಮುಳುಗುವಾಳಕ್ಕೆ? / ಇಲ್ಲ? ನಡೆ, ದೂರ ಸರಿ! ಹೌದು? ಬಾ, ಹತ್ತಿರಕೆ! ಎಂಬ ಸಾಲುಗಳನ್ನು ಬರೆದಿದ್ದರು. ನಮ್ಮಲ್ಲಿ ಬಹುತೇಕರು ಭಾವಿಸುವಂತೆ ಇದು ಕುವೆಂಪು ಗರ್ವದಿಂದ ನುಡಿದ ಮಾತುಗಳಲ್ಲ. ಕೃತಿಕೆ ಕವನ ಸಂಕಲನದಲ್ಲಿ ಬರುವ ನನ್ನ ಕವಿತೆ ತನ್ನ ವಿಮರ್ಶಕನಿಗೆ ಎಂಬ ಪದ್ಯದ ಸಾಲುಗಳಿವು. ಒಂದು ಕವಿತೆ ತನ್ನ ವಿಮರ್ಶಕನೊಂದಿಗೆ ನಡೆಸುವ ಸಂವಾದವನ್ನು ಕಲ್ಪಿಸಿಕೊಂಡು ಕುವೆಂಪು ಈ ಪದ್ಯವನ್ನು ರಚಿಸಿದ್ದರು. ಅಂದು ತೀಕ್ಷ್ಣವಾದ ವಿಮರ್ಶೆ ಕೋಮಲವಾದ ಕವಿತ್ವದ ಪಾಲಿಗೆ ಕುಠಾರಪ್ರಾಯವಾಗಿತ್ತು. ಸದ್ಯದ ಸನ್ನಿವೇಶದಲ್ಲಿ ಕೃತಕ ಬುದ್ಧಿಮತ್ತೆ (ಎಐ) ಕವಿತ್ವಕ್ಕೆ ಮತ್ತು ಒಟ್ಟಾರೆ ಸಾಹಿತ್ಯ ರಚನೆ ಹಾಗು ವಿಕಾಸಕ್ಕೆ ಅಂತಹುದೊಂದು ಗಂಡಾಂತರವಾಗಿ ಪರಿಣಮಿಸಿದೆ. ಆದ್ದರಿಂದ ಕುವೆಂಪುರ ಅಂದಿನ ಆ ಪದ್ಯ ಇಂದಿನ ಕೃತಕ ಬುದ್ಧಿಮತ್ತೆಯೊಂದಿಗೆ ನಡೆಸುತ್ತಿರುವ ಸಂವಾದ ಎಂಬಂತೆಯೂ ನೋಡಬಹುದಾಗಿದೆ.

ಇತ್ತೀಚೆಗೆ ಕೃತಕ ಬುದ್ಧಿಮತ್ತೆ (ಎಐ) ಮೂಲಕ, ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಲಾದ ಒಂದು ಕೃತಿಯನ್ನು ಬಿಡುಗಡೆ ಮಾಡಲಾಯಿತು; ಈ ಕೃತಿಯು ಎಐನಿಂದ ಅನುವಾದಗೊಂಡ ಪ್ರಪ್ರಥಮ ಭಾರತೀಯ ಪುಸ್ತಕವೆಂದು ಪ್ರಚಾರ ಪಡೆಯಿತು. ದೆಹಲಿಯಲ್ಲಿ ನಡೆದ ಎಐ ಸಮಾವೇಶದಲ್ಲೂ ಸಹ ಈ ಎಐ ಅನುವಾದಿತ ಕೃತಿ ಸದ್ದು ಮಾಡಿತು. ಗೌಹರ್ ಜಾನ್ ಭಾರತೀಯ ಸಂಗೀತ ಕ್ಷೇತ್ರದ ಅಪೂರ್ವ ಗಾಯಕಿಯರಲ್ಲಿ ಒಬ್ಬಳು. ಈಕೆ ಗ್ರಾಮಾ ಫೋನ್‌ನಲ್ಲಿ ಹಾಡಿದ ಮೊತ್ತ ಮೊದಲ ಭಾರತೀಯ ಸಂಗೀತಗಾರ್ತಿ. ಸಾಂಪ್ರದಾಯಿಕ ಹಾಡುಗಾರಿಕೆಯನ್ನು ಪ್ರಪ್ರಥಮ ಬಾರಿಗೆ ತಂತ್ರಜ್ಞಾನದ ಅಳವಡಿಸಲು ನೆರವಾದ ಈಕೆಯ ಜೀವನ ಚರಿತ್ರೆಯೂ ಸಹ ಪ್ರಪ್ರಥಮವಾಗಿ ಎಐ ತಂತ್ರಜ್ಞಾನದ ಮೂಲಕ ಅನುವಾದಗೊಂಡಿರುವುದು ಕಾಕತಾಳೀಯವೇ ಇರಬಹುದು.

ಒಂದಂತೂ ನಿಜ: ಸಾಹಿತ್ಯ ವಲಯದಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ ಅನುವಾದ ಕ್ಷೇತ್ರದಲ್ಲಿ, ಕೃತಕ ಬುದ್ಧಿಮತ್ತೆ ಸಂಚಲನ ಮೂಡಿಸಿದೆ. ಜೊತೆಗೆ ಭವಿಷ್ಯದ ಸಾಹಿತ್ಯ ಕ್ಷೇತ್ರದಲ್ಲಿ ಸಾಹಿತಿಗಳು, ಅನುವಾದಕರು ಗೌಣವಾಗಿ ಬಿಡುವರೇ ಎಂಬ ಸಣ್ಣ ಆತಂಕವನ್ನೂ ಸಹ ಸೃಷ್ಟಿಸಿದೆ. ಮನುಷ್ಯರು ಅನುಕರಣಾ ಜೀವಿಗಳು ಎಂದು ಅರಿಸ್ಟಾಟಲ್ ಹೇಳಿದ್ದ. ಮನುಷ್ಯರು ಅನುಕರಿಸಿ ಕಲಿಯುತ್ತಾರೆ ನಿಜ. ಆದರೆ ಮನುಷ್ಯ ಸಂವೇದನೆಯಲ್ಲಿ ಅನುಕರಣೆಯ ಜೊತೆಗೆ ಒಂದಷ್ಟು ಸ್ವೋಪಜ್ಞತೆ, ವ್ಯಕ್ತಿವಿಶಿಷ್ಟತೆ, ಜೀವನಾನುಭವಗಳೂ ಸಹ ಬೆರೆತಿರುತ್ತವೆ. ಆದ್ದರಿಂದಲೇ ಮನುಷ್ಯರನ್ನು ಸಂಪೂರ್ಣವಾಗಿ ಅನುಕರಣಾ ಜೀವಿಗಳೆನ್ನಲು ಬರುವುದಿಲ್ಲ. ಆದರೆ ಕೃತಕ ಬುದ್ಧಿಮತ್ತೆಗೆ ಅರಿಸ್ಟಾಟಲನ ಮಾತನ್ನು ಯಥಾರ್ಥವಾಗಿ, ಕರಾರುವಾಕ್ಕಾಗಿ, ಅನ್ವಯಿಸಬಹುದಾಗಿದೆ.

ಏಕೆಂದರೆ ಕೃತಕ ಬುದ್ಧಿಮತ್ತೆಯಲ್ಲಿ ಸ್ವೋಪಜ್ಞತೆ, ವ್ಯಕ್ತಿವಿಶಿಷ್ಟತೆ, ಜೀವನಾನುಭವಗಳು ಗೈರುಹಾಜರಾಗಿರುತ್ತದೆ. ಕೃತಕ ಬುದ್ಧಿ ಮತ್ತೆಯು ಜೀವನಾನುಭವ, ಸ್ವೋಪಜ್ಞತೆ ಮುಂತಾದ ಪದಗಳಿಗೆ ಪಾಂಡಿತ್ಯ ಪೂರ್ಣವಾದ ಹಲವು ವಿವರಣೆ, ವ್ಯಾಖ್ಯಾನಗಳನ್ನು ನೀಡಬಲ್ಲುದೇ ಪಾಂಡಿತ್ಯವನ್ನು, ಮಾಹಿತಿಯನ್ನು ಪುನರುಚ್ಚರಿಸಿದರೆ ಅದು ಅರಣ್ಯ ರೋದನವಾಗುತ್ತದೆ ಎಂದು ನಮ್ಮ ಪುರಾತನರು ಹೇಳಿದ್ದರು (ಆಮ್ನಾಯಾಭ್ಯ ಸನಾನಿ ಅರಣ್ಯ ರುದಿತಮ್ ವೇದವ್ರತಾನಿ ಅನ್ವಹಮ್). ಕಾವ್ಯರಚನೆ ಮತ್ತು ವ್ಯಕ್ತಿತ್ವ ನಿರಸನಗಳು ಕವಿಯಲ್ಲಿ ಸಮಾನಾಂತರವಾಗಿ ನಡೆಯುವ ಎರಡು ಪ್ರಕ್ರಿಯೆಗಳಾಗಿವೆ.

ಕಾವ್ಯ ವ್ಯಕ್ತಿಗತ ಅನುಭವವನ್ನು ವಿಶ್ವಾತ್ಮಕ ಅನುಭವವನ್ನಾಗಿಸುತ್ತದೆ. ಹೀಗೆ ಕಾವ್ಯ ರಚನೆಯ ಮೂಲಕ ಕವಿ ಋಷಿಯ ಮಟ್ಟಕ್ಕೇರುತ್ತಾನೆ. ಆದರೆ ಎಐನಲ್ಲಿ ವ್ಯಕ್ತಿಯೇ ಇರುವುದಿಲ್ಲವಾದ ಕಾರಣ ಅಲ್ಲಿ ವ್ಯಕ್ತಿವಿಶಿಷ್ಟತೆ ಹಾಗು ವ್ಯಕ್ತಿತ್ವ ನಿರಸನಗಳ ಪ್ರಶ್ನೆ ಉದ್ಭವಿಸುವುದಿಲ್ಲ. ಎಐನಲ್ಲಿ ಮಾಹಿತಿ ಅಥವಾ ಪಾಂಡಿತ್ಯವಷ್ಟೇ ಇರುತ್ತದೆ; ವಿಶೇಷವೆಂದರೆ, ಬಳಕೆ ಪಾಂಡಿತ್ಯವೂ ಹೆಚ್ಚುತ್ತಾ ಹೋಗುತ್ತದೆ.

ವ್ಯಕ್ತಿ ವಿಶಿಷ್ಟತೆ: ವಿನಾ ಅದರ ಜೀವಂತ ಉಪಸ್ಥಿತಿ ಅದರಲ್ಲಿರುವುದಿಲ್ಲ. ಎಐ ತಂತ್ರಜ್ಞಾನಕ್ಕೆ ಪಂಪನಿಂದ ಹಿಡಿದು 21ನೇ ಶತಮಾನದ ಕವಿಗಳವರೆಗೆ ಎಲ್ಲ ಕವಿ-ಕೃತಿಗಳೂ ಗೊತ್ತಿರುತ್ತದೆ, ಆ ಕವಿಗಳ ಕಾವ್ಯ ಪ್ರಯೋಗಗಳು, ಅವರ ಕಾವ್ಯದ ವೈಖರಿ ವಿನ್ಯಾಸಗಳು, ಅವರು ಕಾವ್ಯದಲ್ಲಿ ಬಳಸುವ ಉಪಮೆ, ಪ್ರತಿಮೆ, ರೂಪಕಗಳು ಗೊತ್ತಿರುತ್ತವೆ.

ಯಾವ ಪ್ರಾಧ್ಯಾಪಕನ ಬಳಿಯೂ ಇರದಷ್ಟು ಮಾಹಿತಿ ಸಾಮಗ್ರಿಯನ್ನು ಅದು ಹೊಂದಿರುತ್ತದೆ. ಮಾತ್ರವಲ್ಲ, ಆ ಸಾಮಗ್ರಿಗಳನ್ನೇ ಬಳಸಿಕೊಂಡು, ತನ್ನ ಶಕ್ತಿಗೆ ತಕ್ಕಂತೆ ಅವನ್ನೆಲ್ಲ ಔಚಿತ್ಯಪೂರ್ಣವಾಗಿ ಸಮನ್ವಯಿಸಿ ಹೊಸ ಪದ್ಯ ವನ್ನೋ, ಪ್ರಾಸವನ್ನೋ ಹೆಣೆಯುವ ಸಾಮರ್ಥ್ಯವೂ ಅದಕ್ಕಿರುತ್ತದೆ. ಆದರೆ ಅವುಗಳೆಲ್ಲವನ್ನೂ ಬಳಸಿ ಅದಕ್ಕೆ ಹೊಸತೇನನ್ನಾದರೂ ಸೇರಿಸಲು ತಂತ್ರಜ್ಞಾನಕ್ಕೆ ಸಾಧ್ಯವೇ ಎಂಬ ಪ್ರಶ್ನೆಗೆ ನಿರಾಶಾದಾಯಕವಾದ ಉತ್ತರವೇ ಸಿಗುತ್ತದೆ. ಆ ಹೊಸತನ ಜೀವಂತ ಕವಿಯಿಂದ ಮಾತ್ರ ಬರಲು ಸಾಧ್ಯ. ಆದ್ದರಿಂದಲೇ ನಮ್ಮ ಕಾವ್ಯ ಮೀಮಾಂಸಕರು ಪಾಂಡಿತ್ಯವನ್ನು ಜರಿದದ್ದು ಮತ್ತು ಪ್ರತಿಭಾಶಕ್ತಿಯನ್ನು ಹೊಗಳಿದ್ದು (ಪ್ರಜ್ಞಾ ನವನವೋನ್ಮೇಷಶಾಲಿನೀ ಪ್ರತಿಭಾಮತಾ (ಪ್ರತಿಭೆ ಎಂಬುದು ಸದಾಕಾಲ ಹೊಸತನ್ನು ಉಂಟು ಮಾಡುವ ಪ್ರಜ್ಞೆಯಾಗಿದೆ) - ಮಮ್ಮಟ, ಕಾವ್ಯಪ್ರಕಾಶ). ಪ್ರತಿ ಕ್ಷಣವೂ ಹೊಸತನ್ನು ಸೃಷ್ಟಿಸುವ ಚೈತನ್ಯವನ್ನು ಪ್ರತಿಭೆ ಎಂದೂ, ಇದ್ದುದನ್ನೇ ಮತ್ತೆ ಮತ್ತೆ ಪುನರುಚ್ಚರಿಸುವುದನ್ನು ಪಾಂಡಿತ್ಯವೆಂದೂ ಕರೆಯುತ್ತಾರೆ.

ಸ್ವೋಪಜ್ಞತೆ, ಹೊಸತನ ಇಲ್ಲದೇ ಕೇವಲ ಹೆಚ್ಚಾದಂತೆ ಅದರ ಟಿ ಎಸ್ ಎಲಿಯೆಟ್ ಪರಂಪರೆ ಮತ್ತು ವ್ಯಕ್ತಿಪ್ರತಿಭೆ ಎಂಬ ತನ್ನ ಪ್ರಸಿದ್ಧವಾದ ಲೇಖನದಲ್ಲಿ ಪರಂಪರೆ ಕವಿಪ್ರತಿಭೆಯೊಳಗೆ ಪಡೆಮೂಡುವುದನ್ನು ಹಾಗೆ ಪಡೆಮೂಡಿದುದನ್ನು ಕವಿಪ್ರತಿಭೆ ಮುರಿದು ಹೊಸತನ್ನು ಕಟ್ಟುವುದನ್ನು ಕುರಿತು ವಿವರಿಸುತ್ತಾನೆ. ಒಂದು ವ್ಯಕ್ತಿಗತ ಅನುಭವವನ್ನು ಸಾರ್ವತ್ರಿಕ ಅನುಭವವನ್ನಾಗಿಸುವ ಕೌಶಲ್ಯವನ್ನು ವ್ಯಕ್ತಿ ವಿಶಿಷ್ಟತೆ ಎಂದು ಆ ಲೇಖನದಲ್ಲಿ ಬರೆಯುತ್ತಾನೆ. ಈ ಪ್ರಕ್ರಿಯೆ ಒಂದು ಸಾಹಿತ್ಯ ಪರಂಪರೆಗೆ ಕಾಲಕಾಲಕ್ಕೆ ಜೀವದಾನ ಮಾಡುತ್ತಿರುತ್ತದೆ. ಪಂಪನ ಆದಿಪುರಾಣದಲ್ಲಿ ಒಂದು ಕಥೆ ಇದೆ. ರಾಜನೊಬ್ಬ ಒಂದು ಮುಂಜಾನೆ ಎದ್ದು ಕನ್ನಡಿಯಲ್ಲಿ ಮುಖ ನೋಡಿಕೊಂಡ. ಕಿವಿಯ ಹತ್ತಿರ ಬಾಗಿದ ಒಂದು ಬಿಳಿಯ ಕೂದಲು ಕಾಣಿಸಿದಾಗ ಒಡನೆಯೇ ಅವನಲ್ಲಿ ವೈರಾಗ್ಯ ಮೂಡಿ ಅವನು ತಪಸ್ಸಿಗೆ ತೆರಳಿದ. ಆ ಬಿಳಿಯ ಕೂದಲು ಅವನ ಕವಿಯಲ್ಲಿ ನಿನಗೆ ವಯಸ್ಸಾಗಿದೆ, ಶರೀರದ ನಶ್ವರತೆಯನ್ನು ಇನ್ನಾದರೂ ಧ್ಯಾನಿಸು ಎಂದು ಉಪದೇಶಿಸಿದಂತೆ ಅವನಿಗೆ ಭಾಸವಾಯಿತಂತೆ. ಈ ಕಲ್ಪನೆ ಕವಿಯ ಸ್ವೋಪಜ್ಞತೆಯಾಗಿದೆ.

ಕವಿ ಗೋಪಾಲ ಕೃಷ್ಣ ಅಡಿಗರು ಅನ್ಯರೊರೆದುದನೆ ಬರೆದುದನೆ ಬರೆಬರೆದು ಬಿನ್ನಗಾಗಿದೆ ಮನವು ಬಗೆಯೊಳಗನೇ ತೆರೆದು ನನ್ನ ನುಡಿಯೊಳೆ ಬಣ್ಣ ಬಣ್ಣದಲಿ ಬಣ್ಣಿಸುವ ಪನ್ನತಿಕೆ ಬರುವನಕ ನನ್ನ ಬಾಳಿದು ನರಕ (ಭಾವಗೀತೆ) ಎಂದು ಬರೆದಿದ್ದಾರೆ.

ಎಐಗಳು ಅನ್ಯರು ಒರೆದುದನ್ನು, ಬರೆದುದನ್ನು ಬೇರೆ ಬೇರೆ ರೀತಿಗಳಲ್ಲಿ ಸಂಯೋಜಿಸಿ ಮತ್ತೆ ಮತ್ತೆ ಬರೆಯಬಲ್ಲವು. ಆದರೆ ಕವಿ ಅಡಿಗರಿಗೆ ಅನಿಸಿದಂತೆ ಅವಕ್ಕೆ ಬಿನ್ನವಾಗಿದೆ ಮನವು ಎಂದೆನಿಸದು. ತನ್ನ ಒಳಗನ್ನು ತೆರೆದು ಅದನ್ನು ಬಣ್ಣಿಸುವ ಪನ್ನತಿಕೆ ಬರುವನಕ ತನ್ನ ಬಾಳು ನರಕವೆಂಬ ವಿಷಾದ ಯಾವ ಕಾಲಕ್ಕೂ ಅದಕ್ಕೆ ಮೂಡದು. ಅವೆಲ್ಲ ಕವಿ ಪ್ರತಿಭೆಗೆ ಸಂಬಂಧಿಸಿದ ಭಾವ ವಿಕಲ್ಪಗಳಾಗಿವೆ. ತಂತ್ರಜ್ಞಾನವು ಹೆಚ್ಚೆಂದರೆ ಇಂಥದೊಂದು ಭಾವವಿಕಲ್ಪದ ಮಾಹಿತಿ ಅದಾಗಲೇ ತನ್ನ ಬಳಿ ಇದ್ದಲ್ಲಿ ಅದನ್ನು ಬಳಸಿಕೊಳ್ಳಬಹುದು. ಆದರೆ ಅಂತಹ ಮಾಹಿತಿ ಎಂದಿಗೂ ದ್ವಿತೀಯ ದರ್ಜೆಯ ಸ್ವೋಪಜ್ಞತೆಯಾಗಿರುತ್ತದೆ. ಎಐಗಳನ್ನು ಕವಿಪ್ರತಿಭೆಯ ಪರೋಪ ಜೀವಿ ಎನ್ನಬಹುದೇ ವಿನಾ ಕವಿಪ್ರತಿಭೆಗೆ ಪರ್ಯಾಯವೆಂದಾಗಲಿ, ಪ್ರತಿಸ್ಪರ್ಧಿ ಎಂದಾಗಲಿ ಕರೆಯಲು ಸಾಧ್ಯವಿಲ್ಲ.

ಒಟಿಟಿಗೆ ಹೋಲಿಕೆ: ಕೃತಕ ಬುದ್ಧಿಮತ್ತೆಯ ಬಗ್ಗೆ ವಿಶೇಷ ಪರಿಣತಿ ಹಾಗು ಭರವಸೆ ಹೊಂದಿರುವ ಕನ್ನಡದ ಕೆಲವು ಸಾಹಿತಿಗಳು ಎಐ ನೆರವಿನಿಂದ ಸಮಸ್ತ ವಿಶ್ವಸಾಹಿತ್ಯವನ್ನೂ ಕನ್ನಡದಲ್ಲೇ ಓದುವ ಕಾಲ ಇಷ್ಟರಲ್ಲೇ ಬರಬಹುದು. ಇಂದು ಹೇಗೆ ಒಟಿಟಿಯಲ್ಲಿ ಎಲ್ಲ ಭಾಷೆಗಳ ಸಿನಿಮಾಗಳನ್ನೂ ಕನ್ನಡದಲ್ಲೇ ನೋಡುವೆವೋ ಹಾಗೆ ಅದೂ ಸಹ ಸಾಧ್ಯವಾಗುತ್ತದೆ ಎನ್ನುತ್ತಿರುತ್ತಾರೆ.

ಸಿನಿಮಾಗಳು ಹಾಡು, ಸಂಗೀತ, ದೃಶ್ಯ, ತಂತ್ರಜ್ಞಾನ, ನಟನೆ ಹೀಗೆ ಪ್ರೇಕ್ಷಕರನ್ನು ತಲುಪಲು ಇನ್ನೂ ಹತ್ತು ಹಲವು ಅನಂತ ಸಾಧ್ಯತೆಗಳನ್ನು ಬಳಸಿಕೊಳ್ಳುತ್ತವೆ. ಆದರೆ ಸಾಹಿತ್ಯಕ್ಕೆ ಶಬ್ದಾರ್ಥಗಳಿಂದಾಚೆಗೆ ಅನ್ಯಸಾಧ್ಯತೆ ಇಲ್ಲ, ಇರಲೂ ಬಾರದು. ಕಾಂತಾರದಂತಹ ಸಿನಿಮಾ ಅನ್ಯ ಭಾಷೆಗಳಿಗೆ ಡಬ್ಬಿಂಗ್ ಆದರೂ, ಗಲ್ಲಾಪೆಟ್ಟಿಗೆಯಲ್ಲಿ ಗೆದ್ದರೂ ಅನ್ಯಭಾಷಿಕರಿಗೆ ತುಳುನಾಡಿಗೆ ವಿಶಿಷ್ಟವಾದ ಭಾಷಾ ಸೊಗಡನ್ನು ಆಸ್ವಾದಿಸಲು ಸಾಧ್ಯವಾಗುವುದಿಲ್ಲ.

ಕಾಪಿ ಚೀಟಿ?: ಒಂದು ಸರಳವಾದ ಉದಾಹರಣೆಯೊಂದಿಗೆ ವಿವರಿಸುವುದಾದರೆ ಕೃತಕ ಬುದ್ಧಿಮತ್ತೆಯನ್ನು ಪರೀಕ್ಷೆಯಲ್ಲಿ ಉತ್ತರ ಬರೆಯುವಾಗ ವಿದ್ಯಾರ್ಥಿಗಳು ಕದ್ದು ಮುಚ್ಚಿ ಬಳಸುವ ಚೀಟಿಗಳಿಗೆ ಹೋಲಿಸಬಹುದು. ವಿದ್ಯಾರ್ಥಿಗೆ ವಿಷಯದ ಪ್ರಾಥಮಿಕ ಜ್ಞಾನವಿದ್ದರಷ್ಟೇ ಆ ಸಣ್ಣ ಪುಟ್ಟ ಚೀಟಿಗಳಲ್ಲಿನ ಉತ್ತರವನ್ನು ಪುಟಗಟ್ಟಲೆ ವಿಸ್ತರಿಸಲು ಅವರಿಗೆ ಸಾಧ್ಯವಾಗುತ್ತದೆ. ವಿಷಯ ಜ್ಞಾನವೇ ಇಲ್ಲದ, ಪ್ರಶ್ನೆಗಳೇ ಅರ್ಥವಾಗದ ವಿದ್ಯಾರ್ಥಿಗಳ ಕೈಗೆ ಪಠ್ಯಪುಸ್ತಕವನ್ನೇ ಕೊಟ್ಟರೂ, ಸಿದ್ಧ ಉತ್ತರಗಳನ್ನೇ ನೀಡಿದರೂ ಅವರು ಪಾಸಾಗುವುದಿಲ್ಲ, ಇದು ನೈತಿಕವೋ ಅನ್ಯೆತಿಕವೋ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದು ಅನೈತಿಕ ಅಭ್ಯಾಸವಲ್ಲ ಎನ್ನುವವರುಂಟು. ಕೆಲವು ಶಿಕ್ಷಣ ತಜ್ಞರು ತೆರೆದ ಪುಸ್ತಕ ಪರೀಕ್ಷೆ (ಓಪನ್ ಬುಕ್ ಎಕ್ಸಾಂ)ಯನ್ನು ಅನುಮೋದಿಸುತ್ತಾರೆ. ಭಾರತದಲ್ಲೂ ಸಿಬಿಎಸ್‌ಇಯಂತಹ ಶೈಕ್ಷಣಿಕ ಮಂಡಲಿಗಳು ಇದರ ಅನುಷ್ಠಾನದ ಬಗ್ಗೆ ಯೋಚಿಸುತ್ತಿದೆ. ಶಿಕ್ಷಾ, ಛಂದಸ್ಸು, ನಿರುಕ್ತ, ವ್ಯಾಕರಣ ಮುಂತಾದವು ಹೇಗೆ ಕಾವ್ಯರಚನೆಗೆ ಪರಿಕರವಾಗಿ ಒದಗಿ ಬರುತ್ತದೋ ಹಾಗೆ ಎಐ ಕೂಡ ಒಂದು ಪರಿಕರದಂತೆ ಒದಗಿಬರಬಹುದು.

ಅಪಾಯ ಇಲ್ಲದಿಲ್ಲ!: ಆದರೆ ಎಐ ತಂತ್ರಜ್ಞಾನದಿಂದ ಸಾಹಿತ್ಯಕ್ಷೇತ್ರಕ್ಕೆ ಅಪಾಯ ಇಲ್ಲದಿಲ್ಲ. ಮೊದಲನೆಯದಾಗಿ ನೋಡುವುದಾದರೆ, ಹಿಂದೆಲ್ಲ ನಮ್ಮ ಕವಿಗಳು ಕಾವ್ಯರಚನೆಗೆ ಮುನ್ನ ನೂರಾರು ಕಾವ್ಯಗಳ ಅಧ್ಯಯನ ಮಾಡಿರುತ್ತಿದ್ದರು. ಆದರೆ ಇಂದು ಕೃತಕ ಬುದ್ಧಿಮತ್ತೆ ನಮ್ಮ ಕವಿಗಳಿಗೆ ಈ ಬಗೆಯ ಪರಿಶ್ರಮವನ್ನು ನೀಗಿಸಿ ಅವರನ್ನು ಕುರಿತೋದದೆಯೂ ಕಾವ್ಯಪ್ರಯೋಗ ಮತಿಗಳನ್ನಾಗಿಸಿದೆ.

ಉದಾಹರಣೆಗೆ, ಕಾವ್ಯಪ್ರಯೋಜನದ ಕುರಿತೋ, ವಿದ್ಯಾರ್ಜನೆಯ ಮಹತ್ವದ ಕುರಿತೋ, ಮಹಾಭಾರತದಲ್ಲಿ ಯಾವ ಉಲ್ಲೇಖವಿದೆ ಎಂದು ತಿಳಿಯಲು ಹಿಂದಿನವರು ಇಡೀ ಮಹಾಭಾರತವನ್ನು ಅಧ್ಯಯನ ಮಾಡುತ್ತಿದ್ದರು ಅಥವಾ ಕೊನೆಯ ಪಕ್ಷ ವಿದುರನೀತಿಯನ್ನೋ, ಶಾಂತಿಪರ್ವವನ್ನೋ, ಭಗವದ್ಗೀತೆಯನ್ನೋ ಪರಿಶೀಲಿಸುತ್ತಿದ್ದರು.

ಇಂದು ಎಐ ಈ ಬಗೆಯ ಜಿಜ್ಞಾಸೆಯನ್ನು ಸುಗಮಗೊಳಿಸಿದೆ. ಸುಮ್ಮನೆ ಅಪ್ಪಣೆ (ಪ್ರಾಂಪ್ಟ್) ನೀಡಿದರೆ ಸಾಕು; ಕ್ಷಣಾರ್ಧದಲ್ಲಿ ಶ್ಲೋಕ, ಅದರರ್ಥ, ಪರ್ವ, ಅಧ್ಯಾಯ, ಶ್ಲೋಕಸಂಖ್ಯೆ ಎಲ್ಲವನ್ನೂ ನೀಡುತ್ತದೆ. ಇಂತಹ ಅನುಕೂಲವಿರುವಾಗ ವರ್ಷಗಟ್ಟಲೆ ಕುಳಿತು ಶಾಸ್ತ್ರಾಧ್ಯಯನ ಮಾಡುವ ಗೊಡವೆಗೆ ಯಾರು ಹೋಗುತ್ತಾರೆ? ಮುಂಬರುವ ದಿನಗಳಲ್ಲಿ ಶಾಸ್ತ್ರ ಜ್ಞಾನ ಶೂನ್ಯವಾದ ಪೀಳಿಗೆಗಳುಹುಟ್ಟಿದರೆ ಅದರೊಂದಿಗೆ ಎಐ ತಂತ್ರಜ್ಞಾನವೂ ಅವನತಿಯಾಗಲಿದೆ. ತಂತ್ರಜ್ಞಾನವನ್ನು ಬಳಸುವವರು ಕುಶಲರಲ್ಲದಿದ್ದಾಗ ತಂತ್ರಜ್ಞಾನದ ಬಳಕೆ, ಪ್ರಯೋಜನಗಳೂ ಸೀಮಿತವಾಗುತ್ತವೆ.

ಕೀರ್ತಿಶನಿಯ ಅಪಾಯ: ಇನ್ನು ಎರಡನೆಯದಾಗಿ ಎಐನ ಅತಿಯಾದ ಬಳಕೆಯಿಂದ ಕವಿಗಳು ತಮ್ಮ ಸಾಹಿತ್ಯವನ್ನು ಜಗತ್ತಿನ ಎಲ್ಲ ಭಾಷಿಕರೂ ಓದಬೇಕೆಂಬ ಕೀರ್ತಿಶನಿ ಹಿಡಿಸಿಕೊಳ್ಳುವ ಅಪಾಯವಿದೆ. ಆ ಉದ್ದೇಶವನ್ನು ಈಡೇರಿಸಿ ಕೊಳ್ಳುವ ಸಲುವಾಗಿ ಕವಿಗಳು ತಾವು ಬಳಸುವ ಭಾಷೆಯೊಂದಿಗೆ ರಾಜಿ ಮಾಡಿಕೊಳ್ಳಬಹುದು. ಉದಾಹರಣೆಗೆ, ಕನ್ನಡದ ಪ್ರಮಾಣಿತ ಭಾಷೆಯನ್ನು ಬಿಟ್ಟು, ಶುದ್ಧ ಧಾರವಾಡದ ಭಾಷಾ ಸೊಗಡಿನಲ್ಲಿ ಕಾವ್ಯ ಬರೆದರೆ ಆ ಸೊಗಡು ಸಹಜವಾಗಿಯೇ ಅನುವಾದದಲ್ಲಿ ಪ್ರತೀತವಾಗುವು ದಿಲ್ಲ. ಅಂತಹ ಕವಿಗಳು ತಮ್ಮ ಭಾಷೆಯ ವಿಶಿಷ್ಟ ಸೊಗಡು, ಪ್ರಾದೇಶಿಕ ಅನನ್ಯತೆಗಳನ್ನು ಹಾಗೆಯೇ ತಮ್ಮ ವ್ಯಕ್ತಿ ವಿಶಿಷ್ಟತೆಗಳನ್ನು ಕೀರ್ತಿಲಾಭಕ್ಕಾಗಿ ಬಲಿದಾನ ನೀಡಬಹುದು. ಖ್ಯಾತ ಜರ್ಮನ್ ತತ್ವಜ್ಞಾನಿ ಫ್ರೆಡರಿಕ್ ನೀಷೆ ಓದುಗರು ಶ್ರೇಷ್ಠವಾದ ಕೃತಿಯನ್ನು ಆಯ್ಕೆ ಮಾಡಿಕೊಳ್ಳುವರೇ ಇಲ್ಲವೇ ಎಂಬುದು ಪ್ರಶ್ನೆಯಲ್ಲ ಬದಲಾಗಿ ಒಂದು ಶ್ರೇಷ್ಠವಾದ ಕೃತಿ ತನ್ನ ಓದುಗರನ್ನು ತಾನೇ ಆಯ್ಕೆ ಮಾಡಿಕೊಳ್ಳುತ್ತದೆ ಎಂದಿದ್ದಾನೆ.

ಕವಿಗಳು ಭಾಷೆಯೊಂದಿಗೆ ಹೀಗೆ ರಾಜಿ ಮಾಡಿಕೊಂಡಾಗ ಕೃತಿ ತನ್ನ ಓದುಗರನ್ನು ಆಯ್ಕೆ ಮಾಡಿಕೊಳ್ಳುವ ಸತ್ವವನ್ನೇ ಕಳೆದುಕೊಳ್ಳುವ ಅಪಾಯವಿದೆ. ಕುವೆಂಪು ನೀನೇರಬಲ್ಲೆಯಾ ನಾನೇರುವೆತ್ತರಕೆ? / ನೀ ಹಾರಬಲ್ಲೆಯಾ ನಾ ಹಾರುವಗಲಕ್ಕೆ? / ನೀ ಮುಳುಗಬಲ್ಲೆಯಾ ನಾ ಮುಳುಗುವಾಳಕ್ಕೆ? / ಇಲ್ಲ? ನಡೆ, ದೂರಸರಿ! ಹೌದು? ಬಾ, ಹತ್ತಿರಕೆ! ಎಂಬ ಸಾಲುಗಳನ್ನು ಬರೆದಿದ್ದರು. ನಮ್ಮಲ್ಲಿ ಬಹುತೇಕರು ಭಾವಿಸುವಂತೆ ಇದು ಕುವೆಂಪು ಗರ್ವದಿಂದ ನುಡಿದ ಮಾತುಗಳಲ್ಲ. ಕೃತಿಕೆ ಕವನ ಸಂಕಲನದಲ್ಲಿ ಬರುವ ನನ್ನ ಕವಿತೆ ತನ್ನ ವಿಮರ್ಶಕನಿಗೆ ಎಂಬ ಪದ್ಯದ ಸಾಲುಗಳಿವು. ಒಂದು ಕವಿತೆ ತನ್ನ ವಿಮರ್ಶಕನೊಂದಿಗೆ ನಡೆಸುವ ಸಂವಾದವನ್ನು ಕಲ್ಪಿಸಿಕೊಂಡು ಕುವೆಂಪು ಈ ಪದ್ಯವನ್ನು ರಚಿಸಿದ್ದಾರೆ. ಅಂದು ತೀಕ್ಷ್ಣವಾದ ವಿಮರ್ಶೆ ಕೋಮಲವಾದ ಕವಿತ್ವದ ಪಾಲಿಗೆ ಕುಠಾರಪ್ರಾಯವಾಗಿತ್ತು. ಸದ್ಯದ ಸನ್ನಿವೇಶದಲ್ಲಿ ಕೃತಕ ಬುದ್ಧಿಮತ್ತೆ ಕವಿತ್ವಕ್ಕೆ ಮತ್ತು ಒಟ್ಟಾರೆ ಸಾಹಿತ್ಯ ರಚನೆ ಹಾಗು ವಿಕಾಸಕ್ಕೆ ಅಂತಹುದೊಂದು ಗಂಡಾಂತರವಾಗಿ ಪರಿಣಮಿಸಿದೆ. ಆದ್ದರಿಂದ ಕುವೆಂಪುರ ಅಂದಿನ ಆ ಪದ್ಯ ಇಂದಿನ ಕೃತಕ ಬುದ್ಧಿಮತ್ತೆಯೊಂದಿಗೆ ನಡೆಸುತ್ತಿರುವ ಸಂವಾದ ಎಂಬಂತೆಯೂ ನೋಡಬಹುದಾಗಿದೆ. ಸಾರ್ವಕಾಲಿಕ ಮೌಲ್ಯವುಳ್ಳ ಕವಿತೆಗಳು ಪ್ರತಿ ಕಾಲಮಾನದಲ್ಲೂ ಹೊಸ ಹೊಸ ಅರ್ಥ ಸಾಧ್ಯತೆಗಳನ್ನು ಹೊರಹೊಮ್ಮಿಸಬಲ್ಲದು. ಆದರೆ ಕೃತಕ ಬುದ್ಧಿಮತ್ತೆ (ಎಐ) ಯಾವ ಕಾಲಕ್ಕೂ ಕವಿಯ ಮಟ್ಟಕ್ಕೆ ಏರಲಾರದು. ಆದರೆ ಕವಿ ಯಾವ ಕ್ಷಣದಲ್ಲಾದರೂ, ಎಐ ರೀತಿಯಲ್ಲಿ ಯಾಂತ್ರಿಕ ಕವಿತೆಗಳನ್ನು ರಚಿಸುವ ಮಟ್ಟಕ್ಕೆ ಇಳಿಯಬಲ್ಲ. ಎಐ ಎಂಬ ಪರೋಪಜೀವಿಯನ್ನೇ ಅವಲಂಬಿಸುವ ಜೀವಿಯಾಗಬಲ್ಲ. ಈ ಬೆಳವಣಿಗೆಗಳು ಒಂದು ಸಾಹಿತ್ಯ ಪರಂಪರೆಯ ಅವನತಿಯ ಲಕ್ಷಣವಾಗಿದೆ.

- ಡಾ.ಟಿ.ಎನ್.ವಾಸುದೇವ ಮೂರ್ತಿ

ಅರಣ್ಯ ಇಲಾಖೆ ವಿರುದ್ಧ ರೈತರ ಆಕ್ರೋಶ

ಒಕ್ಕಲ್ಲೆಬ್ಬಿಸುವ ಮೂಲಕ ರೈತರಿಗೆ ಅನ್ಯಾಯ: ರಾಜ್ಯಪಾಲರಿಗೆ ಮನವಿ ಸಲ್ಲಿಸಲು ನಿರ್ಧಾರ

• ಪ್ರಜೋದಯ ವರದಿ

ಬೇಲೂರು: ತಾಲ್ಲೂಕಿನ ಹಳೇಬೀಡು ಹೋಬಳಿ ಐದಳ್ಳ ಕಾವಲ್ ಸರ್ಕಾರಿ ಭೂಮಿ 1, ಸರ್ವೆ ನಂ 1 - 2555 ಎಕರೆ ಭೂಮಿಯಲ್ಲಿ ಕೃಷಿ ಚಟವಟಿಕೆ ನಡೆಸುವ ರೈತರನ್ನು ಅರಣ್ಯ ಇಲಾಖೆ ಒಕ್ಕಲ್ಲೆಬ್ಬಿಸುವ ಮೂಲಕ ರೈತರಿಗೆ ಅನ್ಯಾಯ ಮಾಡುತ್ತಿದೆ ಸಂಬಂಧ ಪಟ್ಟವರು ರೈತರಿಗೆ ಭೂಮಿ ಉಳಿಸಿ ಕೊಡಬೇಕು. ಇಲ್ಲವಾದರೆ ರಾಜ್ಯಪಾಲರಿಗೆ ಮನವಿ ಸಲ್ಲಿಸಿ ನಿರಂತರ ಹೋರಾಟ ನಡೆಸಲಾಗುತ್ತದೆ ಎಂದು ರೈತ ಸಂಘದ ಪದಾಧಿಕಾರಿಗಳು ತಾಲ್ಲೂಕು ಕಚೇರಿ ಕಂದಾಯ ಇಲಾಖೆ ರಾಜಸ್ವ ನಿರೀಕ್ಷಕ ಉದಿತ್‌ಗೆ ಮನವಿ ಸಲ್ಲಿಸಿ ಆಕ್ರೋಶ ವ್ಯಕ್ತಪಡಿಸಿದರು.

ರಾಷ್ಟ್ರೀಯ ರೈತ ಸಂಘದ ಸಂಚಾಲಕ ಕನಕಂಚೇನಹಳ್ಳಿ ಪ್ರಸನ್ನಕುಮಾರ್ ಮಾತನಾಡಿ, ಬೇಲೂರು ತಾಲ್ಲೂಕಿನ ಹಳೇಬೀಡು ಹೋಬಳಿ ಐದಳ್ಳ ಕಾವಲ್ 1 ಸರ್ವೆ ನಂ 1 ರಲ್ಲಿನ 2555 ಎಕ್ಕರೆ ಭೂಮಿಯನ್ನು ಈಗಾಗಲೇ 870 ಕ್ಕೂ ಅಧಿಕ ಬಡ ರೈತರು ಸಾಗುವಳಿ ನಡೆಸಿಕೊಂಡು ಕುಟುಂಬ ನಿರ್ವಹಣೆ ಮಾಡುತ್ತಿರುವ ರೈತರ ಮೇಲೆ ಗದಾ ಪ್ರಹಾರ ನಡೆಸಿದ ಅರಣ್ಯ ಇಲಾಖೆ ಈ ಭೂಮಿ ನಮ್ಮದು ಎಂದು ಹೇಳಿಕೊಂಡು ರೈತರನ್ನು ಒಕ್ಕಲೆಬ್ಬಿಸುವ ಹುನ್ನಾರ ನಡೆಸುತ್ತಿರುವುದು ನಿಜಕ್ಕೂ ಶೋಚನೀಯ. ಈಗಾಗಲೇ ಐದಳ್ಳ ಕಾವಲ್ ಸರ್ವೆ ನಂ 1 ರ 2555 ಎಕರೆ ಸರ್ಕಾರಿ ಭೂಮಿ ಎಂದು ಪಹಣಿಯಲ್ಲಿ ಬರುತ್ತಿದೆ, ಆದರೆ ಅರಣ್ಯ ಇಲಾಖೆ ತಮ್ಮದಲ್ಲದ ಭೂಮಿಗೆ ಏಕೆ ಆಸೆ ಪಡುತ್ತಿದ್ದಾರೆ ಎಂದು ತಿಳಿಯುತ್ತಿಲ್ಲ ಎಂದು ಕಿಡಿಕಾರಿದರಲ್ಲದೆ, ಕೃಷಿಕರ ಭೂಮಿ, ಅರಣ್ಯ ಇಲಾಖೆ ಏಕಾಏಕಿ ನಮ್ಮ ಭೂಮಿ ಎಂದು ಬಡ ಕೃಷಿಕರನ್ನು ಒಕ್ಕಲೆಬ್ಬಿಸುವ ಹುನ್ನಾರ ಮಾಡುತ್ತಿರವ ಕಾರಣದಿಂದ ರಾಷ್ಟ್ರಪತಿ, ರಾಜ್ಯಪಾಲರಿಗೆ ಮನವಿ ನೀಡಲಾಗಿದೆ. ಇದೇ ಭೂಮಿಗಾಗಿ ನೂರಾರು ರೈತರು ಬೇಲೂರಿಗೆ ಸತತ ಮೂರು ಬಾರಿ ಪಾದಯಾತ್ರೆ ಮಾಡಿದ್ದಾರೆ. ನಮ್ಮ ಹೋರಾಟಕ್ಕೆ ಪ್ರೊ. ನಂಜುಂಡ ಸ್ವಾಮಿರವರೇ ಶಕ್ತಿ, ಐದಳ ಕಾವಲಿನ ಭೂಮಿಯಲ್ಲಿ ಪ್ರೊ. ನಂಜುಂಡಸ್ವಾಮಿ ಪುತ್ತಳಿ ಸ್ಥಾಪನೆ ಯೊಂದಿಗೆ ಹೋರಾಟ ನಡೆಸುವ ಬಗ್ಗೆ ಎಚ್ಚರಿಕೆ ನೀಡಿದರು.

ಈಗಾಗಲೇ ಐದಾರು ಬಾರಿ ಐದಳ ಕಾದಲಿನ ಬಗ್ಗೆ ಭೂಮಿ ಉಳಿಸಬೇಕು ಎಂದು ರೈತ ಸಂಘ ಪಾದಯಾತ್ರೆ ಮೂಲಕ ಮನವಿ ಸಲ್ಲಿಸಿದೆ. ಮನವಿಗೆ ರಾಷ್ಟ್ರಪತಿಗಳು ಮತ್ತು ರಾಜ್ಯಪಾಲರು ಸಕಾರಾತ್ಮಕ ಪ್ರತಿಕ್ರಿಯೆ ನೀಡಿದ್ದಾರೆ. ಸದ್ಯ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿದ್ದು, ಪರಿಶೀಲನೆ ನಡೆಸಲಾಗುತ್ತದೆ ಎಂದಿದ್ದಾರೆ. ಅರಣ್ಯ ಇಲಾಖೆ ಯಾವುದೇ ಕಾರಣಕ್ಕೂ ರೈತರ ಸಾಗುವಳಿ ಭೂಮಿಯನ್ನು ಅತಿಕ್ರಮಣ ಮಾಡಬಾರದು ಎಂದು ತಿಳಿಸಿದರೂ ಕೂಡ ಅರಣ್ಯ ಇಲಾಖೆ ಪದೇ ಪದೇ ರೈತರಿಗೆ ತೊಂದರೆ ನೀಡುತ್ತಾ ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಉಗ್ರ ಹೋರಾಟದ ಮೂಲಕ ಎಚ್ಚರಿಕೆ ನೀಡಲಾಗುತ್ತದೆ ಎಂದು ಹೇಳಿದರು.

ಅರಣ್ಯ ಇಲಾಖೆಯ ಅಧಿಕಾರಿಗಳು ಲಾರಿಯಲ್ಲಿ ಜೆಸಿಬಿ ಯಂತ್ರ ತಂದು ಕಾಲುವೆ ತೆಗೆಸುವ ಸಂದರ್ಭದಲ್ಲಿ ನೂರಾರು ರೈತರು ಅರಣ್ಯ ಇಲಾಖೆ ವಿರುದ್ಧ ಪ್ರತಿಭಟನೆ ನಡೆಸಿ ಜೆಸಿಬಿಯನ್ನು ವಾಪಸು ಕಳಿಸಿದ್ದು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೋಲಿಸ್ ಇಲಾಖೆ ಸಹಕಾರವನ್ನು ನೀಡಬೇಕು ಎಂದರು.

ರೈತ ಮುಖಂಡ ರಾದ ನಿಂಗಪ್ಪ, ಅಯ್ಯಬಾ ಸಾಬ್, ವಿಜಾಜ್ ಪಾಷ, ಮಹಮ್ಮದ್ ದಸ್ತಗಿರಿ, ಭೋಜರಾಜ್, ಹನುಮಂತ ಭಾಗವಹಿಸಿದ್ದರು.

ಜೂನ್‌ನಿಂದ 10 ಸಾವಿರ ಕೇಂದ್ರಗಳಲ್ಲಿ ಎಲ್‌ಕೆಜಿ, ಯುಕೆಜಿ ತರಗತಿಗಳು ಆರಂಭ

• ಪ್ರಜೋದಯವರದಿ

ಬೆಂಗಳೂರು: ಮುಂದಿನ ಜೂನ್ ತಿಂಗಳಿನಿಂದ 10 ಸಾವಿರ ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ, ಯುಕೆಜಿ ತರಗತಿಗಳನ್ನು ಆರಂಭಿಸಲಾಗುವುದು. ಹಂತ ಹಂತವಾಗಿ ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳನ್ನು ಈಡೇರಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ವತಿಯಿಂದ ಫ್ರೀಡಂ ಪಾರ್ಕ್‌ನಲ್ಲಿ ಅಂಗನವಾಡಿ ಕಾರ್ಯಕರ್ತರು ನಡೆಸುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಮನವಿ ಸ್ವೀಕರಿಸಿ ಮಾತನಾಡಿದ ಸಚಿವರು, ಈಗಾಗಲೇ ಐದು ಸಾವಿರ ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ, ಯುಕೆಜಿ ತರಗತಿಗಳನ್ನು ಆರಂಭಿಸಲಾಗಿದೆ ಎಂದರು.

ಸಂಘಟನೆಯವರ ಜೊತೆಗೆ ಮಾತುಕತೆ ನಡೆಸಿ ಮುಖ್ಯಮಂತ್ರಿ ಅವರ ಜೊತೆ ಚರ್ಚೆ ನಡೆಸಲಾಗುವುದು. ಮುಖ್ಯಮಂತ್ರಿಗಳ ಸಮಯ ನಿಗದಿ ಮಾಡಿ ಶಿಕ್ಷಣ ಇಲಾಖೆಯ ಜೊತೆಗೆ ಮಾತುಕತೆ ನಡೆಸಲಾಗುವುದು. ಎಂಎ, ಬಿಎಡ್, ಪದವಿ ಪಡೆದಿರುವವರು ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದಾರೆ. ಅಂಗನವಾಡಿ ಕೇಂದ್ರಗಳಲ್ಲಿಯೇ ಎಲ್‌ಕೆಜಿ, ಯುಕೆಜಿ ತರಗತಿಗಳನ್ನು ಉಳಿಸಿಕೊಳ್ಳಲಾಗುವುದು ಎಂದು ಸಚಿವರು ಭರವಸೆ ನೀಡಿದರು.

ಈ ಹಿಂದೆ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ ಬಿಎಲ್‌ಒ ಕೆಲಸಗಳಿಂದ ಅಂಗನವಾಡಿ ಕಾರ್ಯಕರ್ತೆಯರನ್ನು ಕೈಬಿಡುವಂತೆ ಮಾಡಿದ್ದೆ. ಆದರೆ, ಬಿಎಲ್‌ಒ ಕೆಲಸಗಳಿಗೆ ಮತ್ತೊಮ್ಮೆ ಅಂಗನವಾಡಿ ಕಾರ್ಯಕರ್ತೆಯರನ್ನು ನಿಯೋಜಿಸಲಾಗಿದೆ. ಮುಂದಿನ ದಿನಗಳಲ್ಲಿ ಇದರಿಂದ ಮುಕ್ತಿ ಕೊಡಿಸಲು ಪ್ರಯತ್ನಿಸಲಾಗುವುದು ಎಂದು ಅವರು ಭರವಸೆ ನೀಡಿದರು.

ಶ್ರೀ ದೇವರ ದಾಸಿಮಯ್ಯ ಜಯಂತಿ - ಜಾಥಾ

ಹಾಸನ; ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇವರ ಸಹಯೋಗದಲ್ಲಿ ಇಂದು ಏರ್ಪಡಿಸಲಾಗಿದ್ದ ಶ್ರೀ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮದಲ್ಲಿ ದೇವರ ದಾಸಿಮಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಂತರ ಜಾಥಾಕ್ಕೆ ತಹಸೀಲ್ದಾರ್ ಗೀತಾ ಅವರು ಚಾಲನೆ ನೀಡಿದರು. ಕನ್ನಡ ಮತ್ತು ಸಂಸ್ಕೃತ ಇಲಾಖೆಯ ಸಹಾಯಕ ನಿರ್ದೇಶಕ ತಾರಾನಾಥ್, ಶಂಕರ ಶೆಟ್ಟಿ, ವಿ.ಎ.ನಂಜುಂಡಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಭಗತ್ ಸಿಂಗ್, ರಾಜಗುರು, ಸುಖದೇವರಿಗೆ ಮೋದಿ ನಮನ

ನವದೆಹಲಿ: ಭಾರತದ ಸ್ವಾತಂತ್ರ್ಯ ಹೋರಾಟದ ವೀರರಾದ ಭಗತ್ ಸಿಂಗ್, ಶಿವರಾಮ ರಾಜಗುರು ಮತ್ತು ಸುಖದೇವ್ ಥಾಪರ್ ಅವರ ಹುತಾತ್ಮ ದಿನದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಗೌರವ ನಮನ ಸಲ್ಲಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ಮೋದಿ, ಭಾರತ ಮಾತೆಯ ಶೂರ ಪುತ್ರರಾದ ಭಗತ್ ಸಿಂಗ್, ರಾಜಗುರು ಮತ್ತು ಸುಖದೇವ್‌ಗೆ ನಾವು ಇಂದು ಗೌರವ ನಮನ ಸಲ್ಲಿಸುತ್ತೇವೆ. ದೇಶಕ್ಕಾಗಿ ಅವರ ಬಲಿದಾನ ನಮ ಸಮೂಹ ಸ್ಮೃತಿಯಲ್ಲಿ ಸದಾಕಾಲ ಅಚ್ಚಳಿಯದೇ ಉಳಿದಿದೆ ಎಂದು ತಿಳಿಸಿದ್ದಾರೆ.

ಯುವ ವಯಸ್ಸಿನಲ್ಲೇ ಅವರು ಅಪಾರ ಧೈರ್ಯ ಹಾಗೂ ಭಾರತದ ಸ್ವಾತಂತ್ರ್ಯಕ್ಕಾಗಿ ಅಚಲ ಬದ್ಧತೆಯನ್ನು ತೋರಿದ್ದಾರೆ ಎಂದು ಹೇಳಿದ್ದಾರೆ.

ದೇವರ ದಾಸಿಮಯ್ಯ ಜ್ಞಾನ ಪ್ರೇರಣೆ ಪಡೆದ ಸಾಹಿತ್ಯಕಾರರು

• ಪ್ರಜೋದಯ ವರದಿ

ಹಾಸನ: ದಾಸಿಮಯ್ಯನವರು ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಪದವಿ ಪಡೆದವರಲ್ಲ, ಆದರೆ ವಿಶ್ವವನ್ನು ವಿಶ್ವವಿದ್ಯಾನಿಲಯದಷ್ಟು ಅಪಾರ ಜ್ಞಾನ ಉಳ್ಳವರಾಗಿದ್ದರು ಎಂದು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಹೆಚ್.ಎಲ್.ಮಲ್ಲೇಶಗೌಡ ತಿಳಿಸಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇವರ ಸಹ ಯೋಗದಲ್ಲಿ ಸೋಮವಾರ ಹಾಸನಾಂಬ ಕಲಾಕ್ಷೇತ್ರದಲ್ಲಿ ಶ್ರೀ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜಗತ್ತಿನ ವಿಶಿಷ್ಟ ಸಾಹಿತ್ಯವೆಂದರೆ ದಾಸಿಮಯ್ಯನವರ ವಚನಗಳಲ್ಲಿ ರಚನೆಯಾಗಿರುವ ಸಾಹಿತ್ಯಗಳು, ಮಾನವ ಜಾತಿ ಒಂದೇ. ಆದರೆ ಹಲವಾರು ವಿಧಗಳನ್ನು ಸೃಷ್ಟಿಸಿಕೊಂಡವರು ಸಾಹಿತ್ಯ ಲೋಕದಲ್ಲಿ ಹಲವಾರು ಜ್ಞಾನ ಪ್ರೇರಣೆ ಪಡೆದ ಸಾಹಿತ್ಯಕಾರರು ಹಾಗೂ ವಚನಕಾರಾಗಿದ್ದರು ಎಂದರು.

ವಚನಗಳ ರಚನೆಗೆ ಮೂಲ ಪ್ರೇರಣೆ ನೀಡಿದವರು ದೇವರ ದಾಸಿಮಯ್ಯ ವಚನ ಸಾಹಿತ್ಯಗಳನ್ನು ತಿಳಿದುಕೊಳ್ಳಲು ಅರ್ಥೈಸಿಕೊಳ್ಳಲು ಯಾವ ಪಂಡಿತರಿಂದಲು ಸಾಧ್ಯವಾಗುತ್ತಿರಲಿಲ್ಲ, ವಚನಕರ ಸಂತತಿಯಲ್ಲಿ ಆದ್ಯ ವಚನಕರ ಎಂಬ ಹೆಗ್ಗಳಿಕೆ ಇವರಿಗೆ ಸಲ್ಲುತ್ತದೆ ಎಂದರು.

ಉಪನ್ಯಾಸ ನೀಡಿ ಮಾತನಾಡಿದ ಸಾಹಿತಿ ಕೊಟ್ರೇಶ್ ಉಪ್ಪಾರ್ ಅವರು, ಸಾಹಿತ್ಯಕ್ಕೆ ಪ್ರಥಮ ಅಡಿಪಾಯ ಹಾಕಿದವರು ದೇವರ ದಾಸಿಮಯ್ಯನವರು, ಮಾನವೀಯ ಮೌಲ್ಯಗಳನ್ನು ಕಟ್ಟಿಕೊಟ್ಟವರಲ್ಲಿ ದೇವರ ದಾಸಿಮಯ್ಯ ಅವರು ಮೊದಲಿಗರು, 12 ನೇ ಶತಮಾನದಲ್ಲಿ ಜಾತಿ ವ್ಯವಸ್ಥೆಯಲ್ಲಿ ಮಾನವೀಯ ಮೌಲ್ಯವನ್ನ ಸಾರಿದ ಕೀರ್ತಿ ಸಲ್ಲುತ್ತದೆ ಎಂದರಲ್ಲದೆ, ಸಾಮಾಜಿಕ ಪ್ರಜ್ಞೆ, ಭಕ್ತಿ, ವೈಚಾರಿಕತೆ ಪ್ರಜ್ಞೆ ತುಂಬಾ ಮಹತ್ವವಾದದ್ದು, ಶರಣ ಸಂತತಿಯಲ್ಲಿ ಸರಳವಾದ ವಚನಗಳು ಎಂದರೆ ದಾಸಿಮಯ್ಯ ನವರದೇ ಆಗಿದೆ. ಬದುಕಿನ ಬಗ್ಗೆ ತುಂಬಾ ಸರಳವಾಗಿ ಸುಂದರವಾಗಿ ವಚನಗಳ ಮೂಲಕ ತಿಳಿಸಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

12 ನೇ ಶತಮಾನದ ಶಿವ ಶರಣರು ಕೆಲವರ್ಗದಿಂದ ಬಂದವರಾಗಿದ್ದರು ಸಹ ಮಹಿಳೆಯರಿಗೆ ಸಮಾನತೆ ನೀಡಬೇಕು ಎಂಬುದು ಅವರ ಮೂಲ ಉದ್ದೇಶವಾಗಿತ್ತು. ಶಿವಶರಣರಲ್ಲಿ ವಿಜ್ಞಾನಿಯು ಸಹ ನೆಲೆಸಿದ್ದ ಎಂಬುದರಲ್ಲಿ ಸಂದೇಹವಿಲ್ಲ ಎಂದು ಅವರು ತಿಳಿಸಿದರು.

ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪಟೇಲ್ ಶಿವಪ್ಪ ಅವರು ಮಾತನಾಡಿ, ಕುಲ ಎಂಬುದು ಎಲ್ಲರಿಗೂ ಒಂದೇ ಕುಲದಲ್ಲಿ ಯಾವುದೇ ಮೇಲು-ಕೀಳು ಎಂಬ ಭೇದ ಭಾವ ಇಲ್ಲ, ಸಮಾಜದಲ್ಲಿ ಎಲ್ಲರೂ ಒಂದೇ ಎಂದು ಮೊದಲು ತಿಳಿಸಿದವರು ದೇವರ ದಾಸಿಮಯ್ಯನವರು, 11ನೇ ಶತಮಾನದಲ್ಲಿ ಮೊದಲು ಅಡಿಪಾಯ ಹಾಕಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತ ಇಲಾಖೆಯ ಸಹಾಯಕ ನಿರ್ದೇಶಕ ತಾರಾನಾಥ್, ತಹಸೀಲ್ದಾರ್ ಗೀತಾ ಶಂಕರಶೆಟ್ಟಿ, ವಿ.ಎ. ನಂಜುಂಡಸ್ವಾಮಿ ಮತ್ತಿತರರಿದ್ದರು.

ಅಡುಗೆ ಅನಿಲ ಸಿಲಿಂಡರ್‌ಗೆ ತೊಂದರೆಯಾಗದಂತೆ ಕ್ರಮ ವಹಿಸಿ

ಆಹಾರ ಇಲಾಖೆಗೆ ಶಾಸಕ ಬಾಲಕೃಷ್ಣ ಸೂಚನೆ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ತಾಲ್ಲೂಕಿನಲ್ಲಿ ಅಡುಗೆ ಅನಿಲ ಸಿಲಿಂಡರ್‌ಗೆ ಯಾವುದೇ ರೀತಿಯ ತೊಂದರೆ ಆಗದಂತೆ ತಾಲ್ಲೂಕಿನ ಆಹಾರ ಇಲಾಖೆ ಗಮನ ಹರಿಸಬೇಕು ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಅವರು ಸೂಚಿಸಿದ್ದಾರೆ.

ತಾಲ್ಲೂಕು ಕಚೇರಿಯಲ್ಲಿ ನಡೆದ ಆಹಾರ ಇಲಾಖೆ ಮತ್ತು ಕಂದಾಯ ಇಲಾಖೆ ಹಾಗೂ ವಿವಿಧ ಅಡುಗೆ ಅನಿಲ ವಿತರಣಾ ಕೇಂದ್ರಗಳ ಏಜೆನ್ಸಿಯ ವ್ಯವಸ್ಥಾಪಕರೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ತಾಲ್ಲೂಕಿನಲ್ಲಿ ಸಾರ್ವಜನಿಕರಿಗೆ ಅಡುಗೆ ಅನಿಲ ಸಿಲಿಂಡರ್‌ಗಳು ವಿತರಣೆಯಲ್ಲಿ ಯಾವುದೇ ರೀತಿಯ ತೊಂದರೆ ಉಂಟಾಗಬಾರದು. ಏಕೆಂದರೆ ಈಗಾಗಲೇ ದೃಶ್ಯ ಮಾಧ್ಯಮಗಳ ಮೂಲಕ ವಿವಿಧ ಜಿಲ್ಲೆಗಳಲ್ಲಿ ಮತ್ತು ತಾಲೂಕುಗಳಲ್ಲಿ ಅಡುಗೆ ಅನಿಲ ವಿತರಣೆಯಲ್ಲಿ ಬಹಳಷ್ಟು ತೊಂದರೆ ಉಂಟಾಗುತ್ತಿದೆ ಎಂದು ಪ್ರಕಟಣೆಗಳು ಬರುತ್ತಿವೆ. ಆ ನಿಟ್ಟಿನಲ್ಲಿ ಸೋಮವಾರ ಅಧಿಕಾರಿಗಳ ಸಭೆ ಮತ್ತು ಏಜೆನ್ಸಿಯ ವ್ಯವಸ್ಥಾಪಕರ ಸಭೆಯನ್ನು ಕರೆದು ತಾಲೂಕಿನಲ್ಲಿ ಎಷ್ಟು ಅಡಿಗೆ ಅನಿಲಗಳ ಬೇಡಿಕೆ ಇದೆ ಮತ್ತು ಸರ್ಕಾರದಿಂದ ಎಷ್ಟು ಪ್ರಮಾಣದಲ್ಲಿ ಅಡಿಗೆ ಅನಿಲದ ಸಿಲಿಂಡರ್ ಗಳನ್ನು ನೀಡುತ್ತಿದ್ದಾರೆ ಎಂಬ ಮಾಹಿತಿಯನ್ನು ಆಧರಿಸಿ ಸಭೆಯನ್ನು ನಡೆಸಲಾಗುತ್ತಿದೆ. ಈ ಸಭೆಗೆ ಅನುಗುಣವಾಗಿ ಬೇಡಿಕೆ ಅನುಸರಿಸಿ ಸಿಲಿಂಡರ್ ವಿತರಣಾ ಕಾರ್ಯವನ್ನು ಪೂರೈಸುವಂತೆ ಅನೇಕ ರೀತಿಯ ಮಾರ್ಗದರ್ಶನಗಳನ್ನು ನೀಡಲಾಗುತ್ತಿದೆ ಎಂದರು.

ಒಟ್ಟಾರೆ ತಾಲ್ಲೂಕಿನಲ್ಲಿ ಐದು ಗ್ಯಾಸ್ ಏಜೆನ್ಸಿಗಳಿದ್ದು ಈ ಏಜೆನ್ಸಿಗಳಲ್ಲಿ ಸುಮಾರು 107694 ಅಡುಗೆ ಅನಿಲ ಸಂಪರ್ಕಗಳಿದ್ದು 1227 ಅಡಿಗೆ ಅನಿಲ ಸಿಲಿಂಡರ್‌ಗಳ ಕೊರತೆ ಕಾಣುತ್ತಿದೆ. ಆದಕಾರಣ ಜಿಲ್ಲಾಧಿಕಾರಿಗಳಿಗೆ ಕೂಡಲೇ 1227 ಕೊರತೆ ಇರುವ ಸಿಲಿಂಡರ್ ಗಳನ್ನು ಕೂಡಲೇ ಸರಬರಾಜು ಮಾಡುವಂತೆ ಈ ಸಭೆಯಲ್ಲಿ ಕೋರುತ್ತಿದ್ದೇವೆ ಹಾಗೂ ಅಡಿಗೆ ಅನಿಲ ಸಿಲಿಂಡರ್‌ಗಳು ಯಾವುದೇ ಕಾರಣಕ್ಕೂ ಕೊರತೆ ಉಂಟಾಗದಂತೆ ಈಗಾಗಲೇ ಎಲ್ಲಾ ಏಜೆನ್ಸಿಗಳಿಗೂ ಮತ್ತು ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಲಾಗುತ್ತಿದೆ ಎಂದು ತಿಳಿಸಿದರು.

ತಾಲ್ಲೂಕು ದಂಡಾಧಿಕಾರಿ ಶಂಕರಪ್ಪ ಅವರು ಮಾತನಾಡಿ, ಅಡುಗೆ ಅನಿಲ ಸಂಪರ್ಕದಾರರು ದಯ ಮಾಡಿ ಯಾರೂ ಕೂಡ ಏಜೆನ್ಸಿಯ ಕಚೇರಿ ಮುಂಭಾಗದಲ್ಲಿ ಯಾರೂ ಕೂಡ ಆಗಮಿಸಬಾರದು ತಾವು ಬುಕ್ಕಿಂಗ್ ಮಾಡಿದ ಎರಡು ಮೂರು ದಿನಗಳಲ್ಲಿ ತಮ್ಮ ಮನೆಯ ಬಾಗಿಲಿಗೆ ಅಡುಗೆ ಅನಿಲ ಸಿಲಿಂಡರ್‌ಗಳನ್ನು ಸರಬರಾಜು ಮಾಡಲು ಈಗಾಗಲೇ ಏಜೆನ್ಸಿಗಳಿಗೆ ತಿಳಿಸಲಾಗಿದೆ. ಅದರ ಅನುಮಯ ಎಲ್ಲಾ ಏಜೆನ್ಸಿಗಳು ಕೂಡ ಬುಕಿಂಗ್ ಮಾಡಿದ ಒಂದು ಎರಡು ದಿನಗಳಲ್ಲಿ ಗ್ರಾಹಕರ ಮನೆ ಬಾಗಿಲಿಗೆ ಸಿಲಿಂಡರ್ ಗಳನ್ನು ವಿತರಣೆ ಮಾಡಲು ಮುಂದಾಗಿದ್ದೇವೆ ಎಂದು ತಿಳಿಸಿದ್ದಾರೆ. ಆದರನ್ವಯ ಗ್ರಾಹಕರು ತಾವುಗಳು ಅಡುಗೆ ಅನಿಲ ಸಿಲಿಂಡರ್ ಗಳಿಗಾಗಿ ಯಾವುದೇ ರೀತಿಯ ಆತಂಕ ವ್ಯಕ್ತಪಡಿಸುವುದು ಬೇಡ ಎಂದು ಹೇಳಿದರು.

ಪೊಲೀಸ್ ಡಿವೈಎಸ್ಪಿ ಕುಮಾರ್, ಪುರಸಭೆ ಮುಖ್ಯ ಅಧಿಕಾರಿ ಯತೀಶ್ ಮುಂತಾದವರು ಹಾಜರಿದ್ದರು.

ಇರಾನ್ ಯುದ್ಧ: 5 ದಿನಗಳ ಕದನವಿರಾಮ ಘೋಷಣೆ

• ಪ್ರಜೋದಯ ವರದಿ

ತೈಲ ಬೆಲೆಯಲ್ಲಿ ಭಾರೀ ಇಳಿಕೆ



ಟೆಹ್ರಾನ್/ವಾಷಿಂಗ್ಟನ್: ಮಧ್ಯ ಪ್ರಾಚ್ಯದಲ್ಲಿ ಇಸ್ರೇಲ್- ಹಾಗೂ ಇರಾನ್ ನಡುವಿನ ಉದ್ವಿಗ್ನತೆ ನಡುವೆ ಕಳೆದ 2 ದಿನಗಳಿಂದ ಇರಾನ್ ಮತ್ತು ಅಮೆರಿಕಾ ನಡುವೆ ಮಾತುಕತೆಗಳು ನಡೆದಿದ್ದು, ಇದು ಸಫಲವಾಗಿದೆ ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಈ ಬೆನ್ನಲ್ಲೇ, ಯುದ್ಧಕ್ಕೆ 5 ದಿನಗಳ ಬ್ರೇಕ್ ನೀಡಿರುವುದಾಗಿ ಘೋಷಿಸಿದ್ದಾರೆ. ಮಧ್ಯಪ್ರಾಚ್ಯದಲ್ಲಿ ಯುದ್ಧ ತೀವ್ರತೆ ಹೆಚ್ಚುತ್ತಿದ್ದು, ಉಭಯ ಕಡೆಗಳಿಂದ ಬಂದ ಹೇಳಿಕೆಗಳು ಹಾಗೂ ಆಕ್ರಮಣಗಳು ಈ ಯುದ್ಧ ಇಷ್ಟು ಬೇಗ ನಿಲ್ಲಲು ಸಾಧ್ಯವಿಲ್ಲ ಎಂಬ ಭಾವನೆಯನ್ನು ಮೂಡಿಸಿತ್ತು. ಆದರೆ, ಅಚ್ಚರಿಯೆಂಬಂತೆ ಇರಾನ್ ಹಾಗೂ ಅಮೆರಿಕಾ ಮಾತುಕತೆ ನಡೆಸಿದ್ದು, ಕಳೆದ 48 ಗಂಟೆಗಳು ಅಂದರೆ ಕಳೆದ 2 ದಿನಗಳಿಂದ ನಡೆದ ಮಾತುಕಗಳು ನಿರೀಕ್ಷೆಯನ್ನು ಮೀರಿ ಫಲಪ್ರದವಾಗಿದ್ದು, ಆಕ್ರೋಶದಿಂದ ಕುದಿಯುತ್ತಿದ್ದ ಉಭಯಕಡೆಗಳು ಪರಸ್ಪರ ಕೊಂಚ ಶಾಂತವಾಗಿದ್ದು, ಮುಂದಿನ 5 ದಿನಗಳವರೆಗೂ ಕದನ ವಿರಾಮಕ್ಕೆ ಮುಂದಾಗಿವೆ.

ಈ ಕುರಿತು ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಟ್ರೂತ್ ಸೋಶಿಯಲ್ ಮೂಲಕ ಅಧಿಕೃತವಾಗಿ ಘೋಷಣೆ ಮಾಡಿದ್ದು, ಕಳೆದ ಎರಡು ದಿನಗಳಲ್ಲಿ, ಅಮೆರಿಕಾ ಮತ್ತು ಇರಾನ್ ಮಧ್ಯಪ್ರಾಚ್ಯದಲ್ಲಿ ನಮ್ಮ ಮಿಲಿಟರಿ ಕಾರ್ಯಾಚರಣೆಗಳ ಸಂಪೂರ್ಣ ನಿರ್ಣಯದ ಬಗ್ಗೆ ಉತ್ತಮ ಮತ್ತು ಫಲಪ್ರದ ಸಂಭಾಷಣೆಗಳನ್ನು ನಡೆಸಿದ್ದೇವೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತಿದೆ ಎಂದಿದ್ದಾರೆ.

ಈ ವಾರದುದ್ದಕ್ಕೂ ಮುಂದುವರಿಯುವ ಆಳ, ವಿವರವಾದ ಮತ್ತು ರಚನಾತ್ಮಕ ಸಂಭಾಷಣೆಗಳ ಸ್ವರೂಪ ಮತ್ತು ಸ್ವರವನ್ನು ಆಧರಿಸಿ, ವಾರವಿಡೀ ಮಾತುಕತೆ ಮುಂದುವರಿಯುತ್ತದೆ. ಈ ನಿಟ್ಟಿನಲ್ಲಿ ಈ ಸಮಯದಲ್ಲಿ 5 ದಿನಗಳ ವರೆಗೂ ಇರಾನ್ ನ ವಿದ್ಯುತ್ ಸ್ಥಾವರಗಳು ಮತ್ತು ಇಂಧನ ಮೂಲಸೌಕರ್ಯದ ವಿರುದ್ಧ ಯಾವುದೇ ರೀತಿಯ ಮಿಲಿಟರಿ ದಾಳಿಗಳನ್ನು ನಡೆಸದೆ ಇರಲು ನಾನು ರಕ್ಷಣಾ ಇಲಾಖೆಗೆ ಆದೇಶಿಸಿದ್ದೇನೆ ಎಂದು ಅವರು ತಿಳಿಸಿದ್ದಾರೆ.

ಹೊಸ ವಿದ್ಯುತ್ ಸಂಪರ್ಕ ಮಾರ್ಗ ಚಾಲನೆ: ಸೂಚನೆ

ಹಾಸನ: ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತದ ವತಿಯಿಂದ ಹಾಸನ ತಾಲ್ಲೂಕಿನ ದುದ್ದ ಗ್ರಾಮದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ 220 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರ ಹಾಗೂ 220 ಕೆ.ವಿ. ಮತ್ತು 66 ಕೆ.ವಿ. ವಿದ್ಯುತ್ ಮಾರ್ಗಗಳಾದ 1.220 ಕೆ.ವಿ ವಿದ್ಯುತ್ ಸ್ವೀಕರಣಾಕೇಂದ್ರದಿಂದ 110 ಕೆ.ವಿ. ಗಂಡಸಿ ವಿದ್ಯುತ್ ವಿತರಣಾ ಕೇಂದ್ರಕ್ಕೆ ಸಂಪರ್ಕಿಸುವ ವಿದ್ಯುತ್ ಮಾರ್ಗವನ್ನು ಸುಮಾರು 13.841 ಕಿ.ಮೀ ನಿರ್ಮಿಸುವ ಕಾಮಗಾರಿ. 2.220 ಕೆ.ವಿ. ದುದ್ದ ಸ್ವೀಕರಣಾ ಕೇಂದ್ರದಿಂದ 66/11 ಕೆ.ವಿ ಸಾತೇನಹಳ್ಳಿ ವಿದ್ಯುತ್ ವಿತರಣಾ ಕೇಂದ್ರಕ್ಕೆ ಸಂಪರ್ಕಿಸುವ 18.275 ಕಿ.ಮೀ ವಿದ್ಯುತ್ ಮಾರ್ಗದ ಕಾಮಗಾರಿಯು ಮುಕ್ತಾಯಗೊಂಡಿದ್ದು ಮಾ.20 ರಂದು ಅಥವಾ ನಂತರ ದಿನಗಳಲ್ಲಿ 110 ಕೆ.ವಿ ಮತ್ತು 66 ಕೆ.ವಿ ವಿದ್ಯುತ್ ಹರಿಸಲಾಗುವುದು.

ಸಾರ್ವಜನಿಕರು ಈ ಮಾರ್ಗದ ವಿದ್ಯುತ್ ಗೋಪುರವನ್ನು ಹತ್ತುವುದಾಗಲಿ, ಅವುಗಳಿಗೆ ದನ-ಕರುಗಳನ್ನು ಕಟ್ಟುವುದಾಗಲಿ, ಹಸಿರುಬಳ್ಳಿ ಅಥವಾ ಲೋಹದತಂತಿಗಳನ್ನು ಎಸೆಯುವುದಾಗಲಿ ಮಾಡಬಾರದು. ಇದರಿಂದ ಸಾರ್ವಜನಿಕರ ಆಸ್ತಿ-ಪಾಸ್ತಿ ಮತ್ತು ಪ್ರಾಣಕ್ಕೆ ಹಾನಿಯಾಗುವ ಸಂಭವವಿರುತದೆ. ಯಾವುದೇ ತರಹದ ದುಷ್ಕೃತ್ಯಗಳಿಗೆ ಒಳಗೊಂಡ ಅಪಘಾತ ಅಥವಾ ಹಾನಿ ಸಂಭವಿಸಿದರೆ ಅವರೇ ಜವಾಬ್ದಾರರಾಗಿರುತ್ತಾರೆ ಹಾಗೂ ವಿದ್ಯುತ್ ಮಾರ್ಗದ 18 ಮತ್ತು 22 ಮೀಟರ್ ಕಾರಿಡಾರ್ ಅಡಿಯಲ್ಲಿ ಯಾವುದೇ ರೀತಿಯ ಕಟ್ಟಡಗಳನ್ನು ಕಟ್ಟುವುದಾಗಲಿ ಅಥವಾ ಮರಗಳನ್ನು ಬೆಳೆಸುವುದಾಗಲಿ ಮಾಡಬಾರದು. ಸಾರ್ವಜನಿಕರ ಬೇಜವಾಬ್ದಾರಿಯಿಂದ ಆಗುವ ಅನಾಹುತಗಳಿಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಜವಾಬ್ದಾರಿಯಾಗಿರುವುದಿಲ್ಲ ಎಂದು ತಿಳಿಸಿದ್ದಾರೆ.

ಭಾರತಕ್ಕೆ ಏನಾಗಲ್ಲ; ಭಾರತೀಯರ ಸುರಕ್ಷತೆ ನಮ್ಮ ಪ್ರಾಥಮಿಕ ಕಾಳಜಿ

• ಪ್ರಜೋದಯ ವರದಿ

ಯುದ್ಧದ ಬಿಕ್ಕಟ್ಟನ್ನು ಭಾರತ ಯಶಸ್ವಿಯಾಗಿ ಎದುರಿಸುತ್ತಿದೆ: ಲೋಕಸಭೆಯಲ್ಲಿ ಮೋದಿ

ಹೊಸದಿಲ್ಲಿ: ಮಧ್ಯಪ್ರಾಚ್ಯ ಯುದ್ಧದಿಂದ ಎದುರಾಗಿರುವ ಬಿಕ್ಕಟ್ಟು ತಾತ್ಕಾಲಿಕವಾಗಿದ್ದು, ಈ ಬಿಕ್ಕಟ್ಟನ್ನು ಭಾರತ ಯಶಸ್ವಿಯಾಗಿ ಎದುರಿಸುತ್ತಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಲೋಕಸಭೆಯಲ್ಲಿ ಸೋಮವಾರ ಮಾತನಾಡಿದ ಪ್ರಧಾನಿ ಮೋದಿ, ಸಂಘರ್ಷದ ಕುರಿತು ಭಾರತದ ನಿಲುವು ಮತ್ತು ಜಾಗತಿಕ ಶಾಂತಿಯ ಕುರಿತ ದೇಶಸ ಬದ್ಧತೆಯನ್ನು ಪುನರುಚ್ಚರಿಸಿದರು.

ಮಧ್ಯಪ್ರಾಚ್ಯದಲ್ಲಿ ಸಂಘರ್ಷ ಭುಗಿಲೆದ್ದ ಬಳಿಕ ಅಲ್ಲಿನ ಭಾರತೀಯರ ಸುರಕ್ಷತೆ ನಮ್ಮ ಸರ್ಕಾರದ ಪ್ರಾಥಮಿಕ ಕಾಳಜಿಯಾಗಿದೆ ಎಂದಿರುವ ಪ್ರಧಾನಿ ಮೋದಿ, ಇರಾನ್‌ನಲ್ಲಿರುವ ಭಾರತೀಯ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಸ್ವದೇಶಕ್ಕೆ ಮರಳಿ ಕರೆತರುವಲ್ಲಿ ನಾವು ಯಶಸ್ವಿಯಾಗಿದ್ದೇವೆ ಎಂದು ಸ್ಪಷ್ಟಪಡಿಸಿದರಲ್ಲದೇ, ಉಳಿದ ವಿದ್ಯಾರ್ಥಿಗಳನ್ನೂ ಕರೆತರಲು ಪ್ರಯತ್ನಗಳನ್ನು ಆರಂಭಿಸಲಾಗುವುದು ಎಂದು ಪ್ರಧಾನಿ ಭರವಸೆ ನೀಡಿದರು.

ಇರಾನ್‌ನಿಂದ ಇದುವರೆಗೂ ಸುಮಾರು 1,000 ಭಾರತೀಯ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರಲಾಗಿದ್ದು, ಕೊನೆಯ ಭಾರತೀಯನನ್ನೂ ಸುರಕ್ಷಿತವಾಗಿ ಮರಳಿ ಕರೆತರಲು ತಮ್ಮ ಸರ್ಕಾರ ಬದ್ಧವಾಗಿದೆ. ಕೇವಲ ಇರಾನ್ ಮಾತ್ರವಲ್ಲದೇ ಮಧ್ಯಪ್ರಾಚ್ಯದ ಇತರ ದೇಶಗಳಲ್ಲಿರುವ ಭಾರತೀಯರ ಸುರಕ್ಷತೆಗೆ ಆದ್ಯತೆ ನೀಡಲಾಗಿದೆ ಎಂದು ಪ್ರಧಾನಿ ಮೋದಿ ಲೋಕಸಭೆಗೆ ತಿಳಿಸಿದರು.

ಇದೇ ವೇಳೆ ಈ ಸಂಘರ್ಷದಿಂದಾಗಿ ಮಧ್ಯಪ್ರಾಚ್ಯದ ವಿವಿಧ ದೇಶಗಳಲ್ಲಿ ಮೃತಪಟ್ಟ ಭಾರತೀಯರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಭಾರತದ ಏಕೀಕೃತ ಧ್ವನಿಗೆ ಪ್ರಧಾನಿ ಕರೆ:

ಇನ್ನು ಮಧ್ಯಪ್ರಾಚ್ಯ ಬಿಕ್ಕಟ್ಟಿನ ಪರಿಣಾಮಗಳನ್ನು ಭಾರತ ಎದುರಿಸುತ್ತಿರುವ ಕುರಿತು ಮಾತನಾಡಿದ ಪ್ರಧಾನಿ ಮೋದಿ, ಈ ಯುದ್ಧವು ಭಾರತಕ್ಕೆ ಅಭೂತಪೂರ್ವ ಸವಾಲುಗಳನ್ನು ಒಡ್ಡಿದೆ. ಈ ಸವಾಲುಗಳು ಆರ್ಥಿಕ, ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಮತ್ತು ಮಾನವೀಯ ದೃಷ್ಟಿಕೋನವನ್ನು ಹೊಂದಿವೆ. ಯುದ್ಧದಲ್ಲಿರುವ ಮತ್ತು ಯುದ್ಧದಿಂದ ಪ್ರಭಾವಿತವಾಗಿರುವ ದೇಶಗಳೊಂದಿಗೆ ಭಾರತವು ವ್ಯಾಪಕವಾದ ವ್ಯಾಪಾರ ಸಂಬಂಧವನ್ನು ಹೊಂದಿದೆ. ಈ ಯುದ್ಧ ನಡೆಯುತ್ತಿರುವ ಪ್ರದೇಶವು ಪ್ರಪಂಚದಾದ್ಯಂತದ ಇತರ ದೇಶಗಳೊಂದಿಗೆ ನಮ್ಮ ವ್ಯಾಪಾರಕ್ಕೆ ಪ್ರಮುಖ ಮಾರ್ಗವಾಗಿದೆ ಎಂದು ಹೇಳಿದರು.

ನಿರ್ದಿಷ್ಟವಾಗಿ ಹೇಳುವುದಾದರೆ ಈ ಪ್ರದೇಶವು ನಮ್ಮ ಕಚ್ಚಾ ತೈಲ ಮತ್ತು ಅನಿಲ ಅಗತ್ಯಗಳಲ್ಲಿ ಹೆಚ್ಚಿನ ಭಾಗವನ್ನು ಪೂರೈಸುತ್ತದೆ. ಹೀಗಾಗಿ ಈ ಬಿಕ್ಕಟ್ಟಿನ ಸಂದರ್ಭದಲ್ಲಿ ಭಾರತದ ತೈಲ ಮತ್ತು ಅನಿಲ ಅಗತ್ಯತೆಯನ್ನು ನಮ್ಮ ಸರ್ಕಾರ ಖಚಿತಪಡಿಸಿಕೊಳ್ಳುತ್ತಿದೆ. ಭಾರತವು ತನ್ನ ಇಂಧನ ಕೊರತೆ ನೀಗಿಲು ಇಲ್ಲ ಅನ್ಯ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತಿದೆ. ಈ ಬಿಕ್ಕಟ್ಟನ್ನು ಭಾರತ ಒಟ್ಟಾಗಿ ಯಶಸ್ವಿಯಾಗಿ ಎದುರಿಸುವುದು ಸತ್ಯ ಎಂದು ಪ್ರಧಾನಿ ಮೋದಿ ಗಟ್ಟಿಯಾಗಿ ಹೇಳಿದರು.

ಈ ಬಿಕ್ಕಟ್ಟಿನ ಬಗ್ಗೆ ಭಾರತೀಯ ಸಂಸತ್ತಿನಿಂದ ಸರ್ವಾನುಮತದ ಮತ್ತು ಏಕೀಕೃತ ಧ್ವನಿ ಕೇಳಿಬರುವುದು ಅತ್ಯಗತ್ಯ. ಈ ಯುದ್ಧ ಪ್ರಾರಂಭವಾದಾಗಿನಿಂದ, ಪೀಡಿತ ಪ್ರದೇಶಗಳಲ್ಲಿರುವ ಪ್ರತಿಯೊಬ್ಬ ಭಾರತೀಯನಿಗೂ ಅಗತ್ಯ ನೆರವು ನೀಡಲಾಗಿದೆ. ನಾನು ಪಶ್ಚಿಮ ಏಷ್ಯಾದ ಹೆಚ್ಚಿನ ರಾಷ್ಟ್ರಗಳ ಮುಖ್ಯಸ್ಥರೊಂದಿಗೆ ಎರಡು ಸುತ್ತಿನ ಫೋನ್ ಕರೆಗಳ ಮೂಲಕ ವೈಯಕ್ತಿಕವಾಗಿ ಮಾತನಾಡಿದ್ದೇನೆ. ಎಲ್ಲರೂ ಭಾರತೀಯರ ಸುರಕ್ಷತೆಯನ್ನು ಸಂಪೂರ್ಣವಾಗಿ ಖಚಿತಪಡಿಸಿದ್ದಾರೆ ಎಂದು ಮೋದಿ ಮಾಹಿತಿ ನೀಡಿದರು.

ಭಾರತದ ತಯಾರಿ ಹೇಗಿದೆ?

ಇನ್ನು ಮಧ್ಯಪ್ರಾಚ್ಯ ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಭಾರತದ ತಯಾರಿಯನ್ನು ಎಳೆಎಳೆಯಾಗಿ ಬಿಚ್ಚಿಟ್ಟ ಪ್ರಧಾನಿ ಮೋದಿ, ತೈಲ ಮತ್ತು ಅನಿಲದ ಕೊರತೆ ಎದುರಾಗದಂತೆ ನೋಡಿಕೊಳ್ಳಲಾಗುವುದು ಎಂದು ಭರವಸೆ ನೀಡಿದರು. ಕಳೆದ ದಶಕದಲ್ಲಿ, ಭಾರತವು ಬಿಕ್ಕಟ್ಟಿನ ಸಮಯದಲ್ಲಿ ಕಚ್ಚಾ ತೈಲ ಸಂಗ್ರಹಣೆಗೆ ಆದ್ಯತೆ ನೀಡಿದೆ. ಇಂದು, ಭಾರತವು 5.3 ಮಿಲಿಯನ್ ಮೆಟ್ರಿಕ್ ಟನ್‌ಗಳಿಗಿಂತ ಹೆಚ್ಚಿನ ಕಾರ್ಯತಂತ್ರದ ಪೆಟ್ರೋಲಿಯಂ ನಿಕ್ಷೇಪವನ್ನು ಹೊಂದಿದೆ ಮತ್ತು 6.5 ಮಿಲಿಯನ್ ಮೆಟ್ರಿಕ್ ಟನ್‌ಗಳಿಗಿಂತ ಹೆಚ್ಚಿನ ನಿಕ್ಷೇಪವನ್ನು ನಿರ್ಮಿಸಲು ಕೆಲಸ ಮಾಡುತ್ತಿದೆ. ಸರ್ಕಾರವು ವಿವಿಧ ದೇಶಗಳ ಪೂರೈಕೆದಾರರೊಂದಿಗೆ ನಿರಂತರ ಸಂಪರ್ಕದಲ್ಲಿದೆ ಎಂದು ಪ್ರಧಾನಿ ಮೋದಿ ಅವರು ತಿಳಿಸಿದರು.

ಕುಡಿಯುವ ನೀರು ವ್ಯತ್ಯಯ

ಹಾಸನ: ಅರಸೀಕೆರೆ ನಗರಸಭೆಗೆ ಸೇರಿದ ಘನ್ನಿಗಡ ಜಾಕ್‌ವೆಲ್ ಪಂಪ್ ಹೌಸ್‌ನಲ್ಲಿ ಇಂಟೆಕ್ ವಾಲ್ಟ್ ಛೇಂಬರ್ ನಲ್ಲಿ ಕಸ, ಕಡ್ಡಿ, ಕಲ್ಲು, ಬಟ್ಟೆ ಹಾಗೂ ಇತ್ಯಾದಿ ಸಾಮಗ್ರಿಗಳು ಸಿಕ್ಕಿಕೊಂಡಿರುವುದರಿಂದ ಪಂಪ್ ಚಾಲನೆ ಮಾಡಲಾಗುತ್ತಿಲ್ಲ.

ಅರಸೀಕೆರೆ ನಗರಕ್ಕೆ ಸಮರ್ಪಕ ನೀರು ಸರಬರಾಜು ಮಾಡಲು ವ್ಯತ್ಯಯ ಉಂಟಾಗುತ್ತಿದ್ದು, ಇಂಟೆಕ್ ವಾಲ್ಸ್ 1000 ಎಂ.ಎಂ. ವ್ಯಾಸದ ಪೈಪ್‌ಗೆ ಮೆಸ್ ಅಳವಡಿಸಲು ಹಾಗೂ 600 ಎಂ.ಎಂ. ವ್ಯಾಸದ ವಾಲ್ಸ್ ದುರಸ್ಥಿ ಪಡಿಸಲು ಮತ್ತು ಬ್ಯಾಂಕ್ ಕ್ಲೀನ್ ಮಾಡಲು ಮಾ.24 ರಿಂದ ಮಾ.26ರವರೆಗೆ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು ಸದರಿ ದಿನಾಂಕಗಳಂದು ಕುಡಿಯುವ ನೀರಿನ ಪಂಪ್ ಚಾಲನೆ ಮಾಡಲು ಸಾಧ್ಯವಾಗದ ಕಾರಣ ಅರಸೀಕೆರೆ ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡಲು ವ್ಯತ್ಯಯ ಉಂಟಾಗಿದ್ದು ಸಾರ್ವಜನಿಕರು ಸಹಕರಿಸಬೇಕೆಂದು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

ಅರಸೀಕೆರೆಯಲ್ಲಿ ದೇವರ ದಾಸಿಮಯ್ಯನವರ ಅದ್ದೂರಿ ಜಯಂತಿ ಆಚರಣೆ

ಬಸವಾದಿ ಶರಣರ ವಚನಗಳು ಮನುಕುಲಕ್ಕೆ ದಾರಿದೀಪ

• ಪ್ರಜೋದಯ ವರದಿ



ಅರಸೀಕೆರೆ: ದೇವರ ದಾಸಿಮಯ್ಯ ಸಹಕಾರ ಸಂಘದ ವತಿಯಿಂದ ನಗರದ ಪಿ.ಪಿ. ವೃತ್ತದಲ್ಲಿ ದೇವರ ದಾಸಿಮಯ್ಯ ಜಯಂತಿಯನ್ನು ಆಚರಿಸಲಾಯಿತು.

ದೇವಾಂಗ ಸಮಾಜದ ನೂರಾರು ಮಂದಿ ಸೇರಿದಂತೆ ನಾನಾ ಸಮಾಜ ಬಾಂಧವರು ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಜಯಂತೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ದೇವರ ದಾಸಿಮಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ತಮ್ಮ ಭಕ್ತಿಯನ್ನು ಸಮರ್ಪಿಸಿದರು.

ವಕೀಲ ವಿವೇಕ್ ಅವರು ಮಾತನಾಡಿ, ದೇವರ ದಾಸಿಮಯ್ಯ ಸೇರಿದಂತೆ ಬಸವಾದಿ ಶರಣರ ವಚನಗಳಲ್ಲಿ ಅಡಕವಾಗಿರುವ ಸಂದೇಶಗಳು ಮನುಕುಲಕ್ಕೆ ದಾರಿ ದೀಪವಾಗಿದೆ. ವಚನಗಳು, ದಾಸರ ವಾಣಿಗಳನ್ನು ಕೇಳಿದರೆ ಸಾಲದು, ಪಾಲಿಸುವ ಸಂಕಲ್ಪವನ್ನ ನಾವೆಲ್ಲ ಮಾಡಿದ್ದೆ ಆದರೆ ಜಾತಿ ಜಾತಿಗಳ ನಡುವಿನ ವೈಷಮ್ಯ, ಮೂಢನಂಬಿಕೆಗಳೊಂದಿಗೆ ಸಾಗುತ್ತಿರುವ ನಮ್ಮ ಜೀವನ ಮುಕ್ತವಾಗಿ ಸಮಾಜದಲ್ಲಿ ಸಾಮರ್ಥ್ಯದ ಸಂಕೋಲೆ ಬಲಗೊಳ್ಳಲು ಸಹಕಾರಿಯಾಗಲಿದೆ ಎಂದು ಕಿವಿಮಾತು ಹೇಳಿದರಲ್ಲದೆ, ದೇವಾನುದೇವತೆಗಳಿಗೆ ವಸ್ತ್ರವನ್ನು ಸಿದ್ದಪಡಿಸಿ ಕೊಟ್ಟ ದೇವಾಂಗ ಸಮಾಜಕ್ಕೆ ಯುಗ ಯುಗಾಂತರಗಳ ಇತಿಹಾಸವಿದೆ ಎಂದರು.

ತಾಲ್ಲೂಕು ಒಕ್ಕಲಿಗರ ಸಮಾಜದ ಅಧ್ಯಕ್ಷ ಆರ್.ಅನಂತಕುಮಾರ್ ಮಾತನಾಡಿ, ದೇವಾಂಗ ಸಮಾಜ ನಾಗರೀಕ ಸಮಾಜದ ರಾಯಭಾರಿಗಳು ಎಂದು ಶ್ಲಾಘಿಸಿದವರಲ್ಲದೆ, ಸಮಾಜಕ್ಕೆ ವಸ್ತ್ರವನ್ನು ಪ್ರಧಾನ ಮಾಡಿದ ತಮ್ಮ ಕುಲಕಸುಬಿಗೆ ಅಂದು -ಇಂದು -ಮುಂದು ಸಹ ಪ್ರತಿಯೊಂದು ಸಮಾಜವು ಆಭಾರಿಯಾಗಿದೆ. ಪ್ರಸ್ತುತ ಕಾಲಘಟ್ಟದಲ್ಲಿ ಸಾಂಪ್ರದಾಯಿಕ ಉಡುಗೆ ಸಿದ್ದಪಡಿಸುವ ನೇಕಾರರ ಬದುಕು ಅಭದ್ರತೆಗೆ ಒಳಗಾಗುತ್ತಿರುವುದು ಕಳವಳದ ಸಂಗತಿಯಾಗಿದೆ. ನೇಕಾರರ ಹಿತ ಕಾಯುವ ನಿಟ್ಟಿನಲ್ಲಿ ಸರ್ಕಾರ ಮುಂದಾಗಬೇಕಿದೆ ಎಂದು ಮನವಿ ಮಾಡಿದರು.

ವೈದ್ಯ ಡಾ.ಶಿವಕುಮಾರ್ ಅವರು ಮಾತನಾಡಿ, ದೇವಾಂಗ ಸಮಾಜ ಒಂದು ಸಣ್ಣ ಸಮಾಜವಾಗಿದ್ದರು ಇತರ ಸಮಾಜ ಹಾಗೂ ಸಮುದಾಯಗಳೊಂದಿಗೆ ಉತ್ತಮ ಬಾಂಧವ್ಯ ಇಟ್ಟುಕೊಂಡು ಇರುವುದರಿಂದ ದೇವಾಂಗ ಸಮಾಜದ ಬಗ್ಗೆ ಎಲ್ಲರಿಗೂ ವಿಶೇಷವಾದ ಗೌರವ ಇದೆ ಆದರೆ ಸಣ್ಣ ಸಮಾಜವಾಗಿರುವ ನೀವು ಸಂಘಟಿತರಾಗಬೇಕು, ಆಗ ಮಾತ್ರ ರಾಜಕೀಯವಾಗಿ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಸದೃಢ ರಾಗಲು ಸಾಧ್ಯವಾಗುತ್ತದೆ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ನಗರಸಭೆಯ ಪೌರಾಯುಕ್ತ ಕೃಷ್ಣಮೂರ್ತಿ, ಉಪ ತಹಸೀಲ್ದಾರ್ ಶಿವಶಂಕರ್, ತಾಲ್ಲೂಕು ದೇವಾಂಗ ಸಮಾಜದ ಅಧ್ಯಕ್ಷ ಗಿರಿಯಪ್ಪ, ದೇವರ ದಾಸಿಮಯ್ಯ ಸಹಕಾರ ಸಂಘದ ಅಧ್ಯಕ್ಷ ಪರಮೇಶ್, ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ವಿ.ನವೀನ್‌ಕುಮಾರ್, ದೇವರ ದಾಸಿಮಯ್ಯ ಸಹಕಾರ ಸಂಘದ ಕಾರ್ಯದರ್ಶಿ ಕೋಳಗುಂದ ಸ್ವಭಾವ್, ಜಿಲ್ಲಾ ಕರವೇ ಉಪಾಧ್ಯಕ್ಷ ಹೇಮಂತ್ ಕುಮಾರ್, ತಾಲ್ಲೂಕು ಅಧ್ಯಕ್ಷ ಕಿರಣ್ ಕುಮಾರ್, ತಮ್ಮಯ್ಯಶೆಟ್ಟಿ, ಮಹೇಂದ್ರ ಕುಮಾರ್, ರೈಲ್ವೆ ರಂಗಣ್ಣ, ಯಳವಾರೆ ರಂಗನಾಥ್ ಇತರರು ಇದ್ದರು.

ಚಿನ್ನ-ಬೆಳ್ಳಿ ಬೆಲೆಯಲ್ಲಿ ಮತ್ತೆ ಭಾರೀ ಇಳಿಕೆ

ಮುಂಬೈ: ಇರಾನ್ ಯುದ್ಧ ಮತ್ತು ಅಮೆರಿಕ ಕದನ ವಿರಾಮ ಘೋಷಣೆ ಬೆನ್ನಲ್ಲೇ ಮಹಿಳೆಯರ ನೆಚ್ಚಿನ ಚಿನ್ನದ ದರ ಸೋಮವಾರ ಮತ್ತೆ ಭಾರಿ ಪ್ರಮಾಣದಲ್ಲಿ ಕುಸಿತ ಕಂಡಿದ್ದು, ಪ್ರಸ್ತುತ ಚಿನ್ನದ ದರ ರೂ. 1,36,000 ಬೆಂಬಲ ಮಟ್ಟಕ್ಕಿಂತ ಹೆಚ್ಚಿದೆ.

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಅರಕಲಗೂಡು
ಹಾಸನ ಜಿಲ್ಲೆ-573102.
Ph: 08175-220350 Email: ka.arkalgudu.tp@gmail.com
Website: www.arkalgudtown.mrc.gov.in
ಕ್ರ.ಸಂ/ಪಪಂಅ/ಹರಾಜು/02/2025-26 ದಿನಾಂಕ: 23-03-2026

: ಸಾರ್ವಜನಿಕ ಪ್ರಕಟಣೆ :

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೇ, ಪಟ್ಟಣ ಪಂಚಾಯಿತಿ 2026-27 ನೇ ಸಾಲಿನ ವಿವಿಧ ಬಾಬುಗಳ ವಾರ್ಷಿಕ ಹರಾಜನ್ನು ದಿನಾಂಕ: 23-03-2026 ರಂದು ನಿಗಧಿಪಡಿಸಲಾಗಿರುತ್ತದೆ. ಆದರೆ ಸಾಲು ಸಾಲು ಸರ್ಕಾರಿ ರಜೆಗಳು ಬಂದ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಬ್ಯಾಂಕ್‌ನಲ್ಲಿ ಡಿ.ಡಿ. ಪಡೆಯಲು ತೊಂದರೆಯಾಗಿರುತ್ತದೆ. ಆದ ಕಾರಣ ಸಾರ್ವಜನಿಕ ಹಿತದೃಷ್ಠಿಯಿಂದ ಸದರಿ ಹರಾಜನ್ನು ದಿನಾಂಕ: 26-03-2026 ರ ಗುರುವಾರ ಬೆಳಗ್ಗೆ 11.00 ಗಂಟೆಗೆ ಮುಂದೂಡಲಾಗಿರುತ್ತದೆ. ಹೆಚ್ಚಿನ ವಿವರ ಹಾಗೂ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಕಂದಾಯ ನಿರೀಕ್ಷಕರು, ಪಟ್ಟಣ ಪಂಚಾಯಿತಿ, ಅರಕಲಗೂಡು ರವರನ್ನು ಸಂಪರ್ಕಿಸಬಹುದಾಗಿದೆ. ಅಥವಾ ಪಟ್ಟಣ ಪಂಚಾಯಿತಿಯ Website: http://www.arkalgudtown.mrc.gov.in ಲಾಗಿನ್ ಆಗಿ ಪಡೆಯಬಹುದಾಗಿದೆ. ಸಾರ್ವಜನಿಕರು ಸಹಕರಿಸಬೇಕಾಗಿ ಈ ಮೂಲಕ ಕೋರಿದೆ.

ಸಹಿ/- ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಅರಕಲಗೂಡು.

ವಾ.ಸಾ.ಸಂ.ಇ/ಕೆಎಸ್‌ಎಂಎ/ಹಾ/25-26/

ಜಿಲ್ಲಾಧಿಕಾರಿ ಲತಾಕುಮಾರಿ ಸಲಹೆ | ವಿಶ್ವ ಗ್ರಾಹಕರ ದಿನಾಚರಣೆ

ಗ್ರಾಹಕರ ಹಕ್ಕುಗಳ ಬಗ್ಗೆ ಅರಿವು ಹೊಂದುವುದು ಜವಾಬ್ದಾರಿ

• ಪ್ರಜೋದಯ ವರದಿ

ಹಾಸನ: ನಿತ್ಯ ಜೀವನದಲ್ಲಿ ವಸ್ತುಗಳನ್ನು ಖರೀದಿ ಮಾಡುವ ಪ್ರತಿಯೊಬ್ಬ ಗ್ರಾಹಕ ತನ್ನ ಹಕ್ಕುಗಳ ಬಗ್ಗೆ ತಿಳಿದು ಅರಿತಿರಬೇಕು, ಮಾರುಕಟ್ಟೆಯಲ್ಲಿ ಗ್ರಾಹಕರೇ ಪ್ರಭುಗಳು. ಖರೀದಿಸು ವಾಗ ಪ್ರಶ್ನಿಸಿ ಕೇಳಿ ಖರೀದಿ ಮಾಡಬೇಕೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರ ಹಾಗು ಮಹಿಳಾ ಪ್ರಥಮ ದರ್ಜೆ ಕಾಲೇಜು ವತಿಯಿಂದ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಏರ್ಪಡಿಸಿದ್ದ ವಿಶ್ವ ಗ್ರಾಹಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಗ್ರಾಹಕರಿಗೆ ಇರುವ ಹಕ್ಕುಗಳ ಬಗ್ಗೆ ತಿಳಿಯಬೇಕು. ಸುರಕ್ಷತೆಯ ಹಕ್ಕು, ಮಾಹಿತಿ ಹಕ್ಕು, ಆಯ್ಕೆ ಮಾಡುವ ಹಕ್ಕು, ಕಾನೂನು ಜಾಹೀರಾತುಗಳ ಹಕ್ಕುಗಳ ಬಗ್ಗೆ ಅರಿತು ಯಾವುದೇ ಸರಕು ಖರೀದಿಸುವಾಗ ಜಾಗೃತಿ ವಹಿಸಬೇಕೆಂದರು.

ಗ್ರಾಹಕರಿಗೆ ತನ್ನದೇ ಆದ ಹಕ್ಕುಗಳು ಇರುತ್ತವೆ. ಆದ್ದರಿಂದ ಯಾವುದೇ ಗ್ರಾಹಕರಿಗೆ ಖರೀದಿ ಮಾಡುವಾಗ ಮತ್ತು ಖರೀದಿ ಮಾಡಿದ ನಂತರ ತೊಂದರೆಯಾದರೆ ಕಾನೂನಿನ ಮೂಲಕ ದೂರು ಸಲ್ಲಿಸಿ ನ್ಯಾಯ ಪಡೆದುಕೊಳ್ಳಬಹುದು. ಜೀವನದಲ್ಲಿ ಪ್ರತಿಯೊಂದು ಆಯ್ಕೆಯೂ ಕೂಡ ನಮ್ಮದೇ ಆಗಿರಬೇಕು. ಪ್ರತಿಯೊಂದು ಮಗು ಸಮಾಜದಲ್ಲಿ ಸ್ವಾವಲಂಬನೆಯಿಂದ ಬದುಕಬೇಕು. ತನ್ನದೇಯಾದ ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದು ತಿಳಿಸಿದರು.

ಎಂ.ಕೃಷ್ಣ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಹೆಚ್.ಎಸ್.ಹೇಮಂತ್ ಕುಮಾರ್ ಅವರು ಮಾತನಾಡಿ, ಸಮಾಜದಲ್ಲಿ ಪ್ರತಿಯೊಬ್ಬರು ಕೂಡ ಗ್ರಾಹಕರೇ. ಆದ್ದರಿಂದ ತಮ್ಮದೇ ಆದ ಹಕ್ಕುಗಳು ಅನ್ವಯದ ಮೂಲಕ ಪ್ರಶ್ನೆ ಮಾಡಿ ನ್ಯಾಯ ದಕ್ಕಿಸಿಕೊಳ್ಳಬೇಕು ಎಂದರು.

ಗ್ರಾಹಕರ ಸ್ಥಾನಮಾನ ಹಕ್ಕುಗಳಲ್ಲಿ ಹಲವು ಬದಲಾವಣೆ ಆಗುತ್ತದೆ. ಮೂಲವಾಗಿ ಕಂಡು ಬರುವುದು ಅಂತರ್ಜಾಲದ ಮೂಲಕ ಸರಕುಗಳನ್ನು ಖರೀದಿ ಮಾಡುವುದು ಹೆಚ್ಚಾಗಿ ಕಂಡು ಬರುತ್ತದೆ. ಆದ್ದರಿಂದ ಸುರಕ್ಷಿತವಾದ ಉತ್ಪನ್ನಗಳನ್ನು ಖರೀದಿ ಮಾಡುವುದು ಬಹಳ ಕಡಿಮೆ. ಗ್ರಾಹಕರು ಯಾವುದೇ ವಸ್ತುಗಳನ್ನು ಖರೀದಿ ಮಾಡುವಾಗ ಆ ವಸ್ತುಗಳ ಬಗ್ಗೆ ಸಂಪೂರ್ಣವಾಗಿ ಪರಿಶೀಲನೆ ಮಾಡಿ ಎಚ್ಚರಿಕೆಯಿಂದ ಖರೀದಿ ಮಾಡಬೇಕು ಮತ್ತು ಆ ವಸ್ತುವಿನ ಕೊನೆಯ ದಿನಾಂಕವನ್ನು ಗಮನಿಸಬೇಕೆಂದರು.

ಹೆಚ್ಚಾಗಿ ಎಲ್ಲರೂ ಕೂಡ ಜಾಹೀರಾತುಗಳ ಮೇಲೆ ಅವಲಂಬಿತರಾಗಿದ್ದು, ಅದರಲ್ಲೂ ಮಕ್ಕಳನ್ನು ಅವಲಂಬಿಸಿ ಜಾಹೀರಾತು ನೀಡುತ್ತಾರೆ ಹಾಗು ಎಲ್ಲಾ ಜಾಹೀರಾತುಗಳು ಕೂಡ ವಿಭಿನ್ನ ರೀತಿಯ ಸರಕುಗಳ ಆಧರಿಸುತ್ತವೆ. ಗ್ರಾಹಕರು ಸರಕುಗಳನ್ನು ಖರೀದಿ ಮಾಡಿದ ನಂತರ ಆ ವಸ್ತುಗಳಿಂದ ತೊಂದರೆಯಾದರೆ ನೇರವಾಗಿ ದೂರು ನೀಡಬಹುದು. ಕಾನೂನಿನ ಮೂಲಕ ತೊಂದರೆಗಳಿಗೆ ನೇರವಾಗಿ ಪರಿಹಾರ ದೂರಕುತ್ತದೆಂದು ಹೇಳಿದರು.

ಹಕ್ಕುಗಳನ್ನು ಕೇಳುವುದು ಮತ್ತು ಪಡೆದು ಕೊಳ್ಳುವುದು ಪ್ರತಿಯೊಬ್ಬ ಗ್ರಾಹಕರ ಹಕ್ಕು ಹಾಗೂ ಸರಕುಗಳನ್ನು ಖರೀದಿ ಮಾಡುವಾಗ ಬಹು ಎಚ್ಚರಿಕೆಯಿಂದ ಖರೀದಿ ಮಾಡಬೇಕು ಹಾಗೂ ಸುತ್ತಲಿನ ಪರಿಸರದ ಸುರಕ್ಷತೆಯನ್ನು ಕಾಪಾಡುವ ನಿಟ್ಟಿನಲ್ಲಿ ಆಹಾರ ಪದಾರ್ಥಗಳನ್ನು ಖರೀದಿ ಮಾಡುವುದು ಉತ್ತಮವಾದ ಆಲೋಚನೆ ಆಗಿರಬೇಕು ಎಂದರು.

ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕ ಅರುಣ್ ಕುಮಾರ್, ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾರಾದ ಡಾ.ಕವಿತಾ, ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರ ಕಾರ್ಯಾಧ್ಯಕ್ಷ ಸಿದ್ದಯ್ಯ ಹಾಗು ಇತರರಿದ್ದರು.

2028ಕ್ಕೆ ರೇವಣ್ಣ ಶಕ್ತಿ ಪ್ರದರ್ಶನದ ಶಪಥ

» ಮೊದಲನೇ ಪುಟದಿಂದ

ನಾನು ಸಿದ್ದನಿದ್ದೇನೆ ಎಂದು ಹರಿಹಾಯ್ದರು.

ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಬಹಳ ಪ್ರಾಮಾಣಿಕರು, ನಾನು ಅವರ ಬಗ್ಗೆ ಮಾತನಾಡುವುದಿಲ್ಲ. ಹೆಚ್.ಡಿ.ಕುಮಾರಸ್ವಾಮಿ ಅವರಿಗೆ 40 ವರ್ಷಗಳ ರಾಜಕೀಯ ಅನು ಭವ. ಅವರು ಏನೋ ಒತ್ತುವರಿ ಮಾಡಿಕೊಂಡು ಬಿಟ್ಟಿ ದ್ದಾರೆ. ಅದಕ್ಕಾಗಿ ಒಂದು ವಿಶೇಷ ತನಿಖಾ ತಂಡ ರಚನೆ ಮಾಡಲಾಯಿತು. ಅದಕ್ಕೆ ಸುಪ್ರೀಂ ಕೋರ್ಟ್, ಹೈಕೋರ್ಟ್ ಲಾಯರ್, ಎಜಿ ನೇಮಕ ಮಾಡಲಾಗಿತ್ತು. ನಾಲ್ಕು ಎಕರೆ ಏನೋ ಒತ್ತುವರಿ ಮಾಡಿಕೊಂಡಿದ್ದಾರೆ. ಲ್ಯಾಂಡ್ ಮಾಫೀಯ ನಡೆಸ್ತಿದ್ದಾರಲ್ಲ ತಹಶಿಲ್ದಾರ್, ಅವರ ಬಗ್ಗೆ ಉನ್ನತ ಮಟ್ಟದ ತನಿಖೆ ಮಾಡಿಸ್ತೀರಾ ಎಂದು ಪ್ರಶ್ನಿಸಿದರು.

ಹಾಸನದಲ್ಲಿ ಅಕ್ರಮ ಅಧಿಕ

ಕಂದಾಯ ಇಲಾಖೆಯಲ್ಲಿ ನಡೆಯುತ್ತಿರುವ ದಾಖಲೆಗಳನ್ನು ಕೊಡುತ್ತೇನೆ. ಹಾಸನ ಜಿಲ್ಲೆಯಲ್ಲಿ ಸಾವಿರಾರು ಕೋಟಿ ರೂ. ಲೂಟಿ ನಡೆಯುತ್ತಿದೆ. ಡ್ರೀಮ್ಡ್ ಫಾರೆಸ್ಟ್‌ನಲ್ಲೇ ಗಣಿ ಲೂಟಿ ಮಾಡಲಾಗುತ್ತಿದೆ. ಜಿಲ್ಲಾಧಿಕಾರಿ, ತಹಶಿಲ್ದಾರ್ ಹಾಗು ಕೆಲ ಪೊಲೀಸ್ ಅಧಿಕಾರಿಗಳೇ ಅಕ್ರಮದಲ್ಲಿ ಭಾಗವಹಿಸಿದ್ದಾರೆ. ಹಾಸನದ ಸುತ್ತಲೂ ಪರವಾನಗಿ ಇಲ್ಲದೇ ಗಣಿಗಾರಿಕೆ ನಡೆಯುತ್ತಿದೆ. ಅದರ ಬಗ್ಗೆ ತನಿಖೆ ಮಾಡಿಸುವ ತಾಕತ್ ಈ ಸರ್ಕಾರಕ್ಕೆ ಇದೆಯೇ ತರಾಟೆಗೆ ತೆಗೆದುಕೊಂಡರು.

ಅರುಂಧತಿಗೆ ಐಸಿಸಿ ತಿಂಗಳ ಆಟಗಾರ್ತಿ ಗೌರವ

• ಪ್ರಜೋದಯ ವರದಿ

ದುಬೈ: ಆಸ್ಟ್ರೇಲಿಯಾ ವಿರುದ್ಧ ಟಿ-20 ಸರಣಿಯಲ್ಲಿ ಉತ್ತಮ ಬೌಲಿಂಗ್ ಪ್ರದರ್ಶಿಸಿದ್ದ ಭಾರತ ಮಹಿಳಾ ತಂಡದ ಮಧ್ಯಮ ವೇಗದ ಬೌಲರ್ ಅರುಂಧತಿ ರೆಡ್ಡಿ ಅವರನ್ನು ಐಸಿಸಿ ಫೆಬ್ರುವರಿ ತಿಂಗಳ ಆಟಗಾರ್ತಿ ಗೌರವಕ್ಕೆ ಪಾತ್ರರಾಗಿದ್ದಾರೆ.

ಪುರುಷರ ಟಿ-20 ವಿಶ್ವಕಪ್‌ನಲ್ಲಿ ಸ್ಥಿರ ಬ್ಯಾಟಿಂಗ್ ಪ್ರದರ್ಶನ ನೀಡಿದ್ದ ಪಾಕಿಸ್ತಾನ ತಂಡದ ಆರಂಭ ಆಟಗಾರ ಸಾಹಿಬ್‌ಝಾದಾ ಫರ್ಹಾನ್ ಅವರನ್ನು ಐಸಿಸಿ ತಿಂಗಳ ಆಟಗಾರ ಗೌರವಕ್ಕೆ ಹೆಸರಿಸಲಾಗಿದೆ.

7 ಸಾವಿರ ರೂ. ಗಾಗಿ ಯುವಕನ ಕೊಲೆ, ಶವ ದಹನ

» ಮೊದಲನೇ ಪುಟದಿಂದ

ಮಾ.19 ರಂದು ದುದ್ದ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿತ್ತು. ಕೊಲೆ ಆರೋಪಿಗಳ ಪತ್ತೆಗಾಗಿ ವಿಶೇಷ ತನಿಖಾ ತಂಡ ರಚಿಸಲಾಗಿದೆ. ಎ-1 ಆರೋಪಿ ಶಶಾಂಕ್ ಸೇರಿ ಉಳಿದವರನ್ನೂ ಶೀಘ್ರ ಬಂಧಿಸಲಾಗುವುದೆಂದರು.

ಬೈಕ್‌ನಲ್ಲೇ ಮೃತದೇಹ ರವಾನೆ

ವರುಣ್‌ನ ಮೃತದೇಹವನ್ನು ಬೈಕ್‌ನಲ್ಲಿ ಗಂಡಸಿಯಿಂದ ದುದ್ದ, ಅಲ್ಲಿಂದ ಜೇನುಕಲ್ ಬೆಟ್ಟಕ್ಕೆ ಸಾಗಿಸಿದ್ದಾರೆ ಎನ್ನಲಾಗಿದೆ. ಈ ನಡುವೆ ಹಾಸನ ಬಡಾವಣೆ ಠಾಣೆ ವ್ಯಾಪ್ತಿಯ ಮನೆಯಲ್ಲೂ ಒಂದು ದಿನ ವರುಣ್ ಶವ ಇಟ್ಟಿದ್ದ ರೆಂದು ತಿಳಿದು ಬಂದಿದ್ದು ನಾಪತ್ತೆಯಾಗಿರುವ ಆರೋಪಿಗಳ ಸಿಕ್ಕ ಬಳಿಕ ಆ ಬಗ್ಗೆ ಮಾಹಿತಿ ಲಭ್ಯವಾಗಲಿದೆ. ಶಶಾಂಕ್ ವಿರುದ್ಧ ಬೇಲೂರು ಠಾಣೆ ಯಲ್ಲಿ ಪೆಡ್ಲರ್ ಪ್ರಕರಣ ದಾಖಲಾ ಗಿದೆ. ಉಳಿದವರ ವಿರುದ್ಧ ಅಪರಾಧ ಕೇಸ್‌ಗಳಿಲ್ಲ. ಆರೋಪಿಗಳಲ್ಲಿ ಹೆಚ್ಚು ಮಂದಿ ಡೆಲಿವರಿ ಬಾಯ್‌ಗಳಾಗಿ ಕೆಲಸ ಮಾಡುತ್ತಿದ್ದರು ಎಂದರು.

ಮೃತ ವರುಣ್ ಅವರ ತಂದೆ ಇತ್ತೀಚೆಗೆ ನಿಧನರಾಗಿದ್ದರು. ಈತ ಬೆಂಗಳೂರಿನಲ್ಲಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡಿಕೊಂಡಿದ್ದ. ತಾಯಿ ಸಹ ಬೆಂಗಳೂರಿನಲ್ಲೇ ಮನೆಗೆಲಸ ಮಾಡಿಕೊಂಡಿದ್ದಾರೆ. ಹುಟ್ಟೂರಿನ ಮನೆ ಸ್ವಚ್ಛ ಮಾಡುವುದಕ್ಕಾಗಿ ಬಂದಿ ದ್ದನೆಂದು ತಿಳಿಸಿದರು.

ಮಹನೀಯರ ಜಯಂತಿ: ಸಿದ್ಧತೆಗೆ ಬಾಲಕೃಷ್ಣ ಸೂಚನೆ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ತಾಲ್ಲೂಕು ಆಡಳಿತದ ವತಿಯಿಂದ ಏ.5ರಂದು ಡಾ.ಬಾಬು ಜಗಜೀವನ ರಾಂ ಹಾಗು ಏ.14ರಂದು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತ್ಯುತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ತಿಳಿಸಿದರು.

ಪಟ್ಟಣದ ಮಿನಿ ವಿಧಾನಸೌಧ ಸಭಾಂಗಣದಲ್ಲಿ ಸೋಮವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತ ನಾಡಿ, ಬಾಬು ಜಗಜೀವನರಾಂ ಅವರು ಸೃಷ್ಟಿಸಿದ ಹಸಿರು ಕ್ರಾಂತಿ ಯಿಂದ ದೇಶದಲ್ಲಿ ಬಡವರಿಗೆ ಆಹಾರದ ಕೊರತೆ ದೂರವಾಯಿತು. ಹಸಿರು ಕ್ರಾಂತಿಯ ಹರಿಕಾರ ಬಾಬೂಜಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಮುಖ್ಯರಾಗಿದ್ದಾರೆಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ರಚಿಸಿದ ಸಂವಿಧಾನವೇ ದೇಶದ 140 ಕೋಟಿ ಜನರು ನೆಮ್ಮದಿಯಿಂದ ಬದುಕಲು ಕಾರಣ. ಇಂತಹ ಮಹನೀಯರ ಜಯಂತಿಯನ್ನು ಅರ್ಥ ಪೂರ್ಣವಾಗಿ ಆಚರಿಸಿದಾಗ ಮಾತ್ರ ಮಹಾತ್ಮರಿಗೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ. ತಾಲ್ಲೂಕು ಮಟ್ಟದಲ್ಲಿ

ಬಾಬು ಜಗಜೀವನರಾಂ ಮತ್ತು ಡಾ. ಅಂಬೇಡ್ಕರ್ ಜಯಂತಿಗಳನ್ನು ಪ್ರತ್ಯೇಕವಾಗಿ ಆಚರಿಸಬೇಕೆಂದು ಕೆಲವು ಮುಖಂಡರ ಸಲಹೆಯ ಮೇರೆಗೆ ಏ.5 ರಂದು ಡಾ. ಬಾಬು ಜಗಜೀವನ ರಾಂ ಅವರ 119ನೇ ಜಯಂತ್ಯುತ್ಸವವನ್ನು ಸರಳವಾಗಿ ಆಚರಿಸಲಾಗುವುದು ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿಯಂದು ಭವ್ಯ ಮೆರವಣಿಗೆ ಹಮ್ಮಿಕೊಳ್ಳಲಾಗುವುದು. ಉಪ ನ್ಯಾಸಕರಿಂದ ಭಾಷಣ ಆಯೋಜನೆ, ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಹಾಗು ಸಮಾಜದ ಏಳಿಗೆಗಾಗಿ ಶ್ರಮಿಸಿದ ಸಾಧಕರನ್ನು ಸನ್ಮಾನಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಸಭೆಯಲ್ಲಿ ತಹಶೀಲ್ದಾರ್ ಜಿ.ಎಸ್. ಶಂಕರಪ್ಪ, ಪುರಸಭಾ ಮಾಜಿ ಅಧ್ಯಕ್ಷ ಸಿ.ಎನ್.ಮೋಹನ್, ಮುಖ್ಯಾಧಿಕಾರಿ ಆರ್.ಯತೀಶ್‌ಕುಮಾರ್, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಜಿ.ಆರ್.ಹರೀಶ್, ಚನ್ನರಾಯಪಟ್ಟಣ ಉಪ ವಿಭಾಗ ಪೊಲೀಸ್ ಉಪ ಅಧೀಕ್ಷಕ ಎನ್. ಕುಮಾರ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಡಿ. ಆರ್.ತ್ಯಾಗರಾಜು, ದಲಿತ ಮುಖಂಡ ರಾದ ಬೆಳಗಿಹಳ್ಳಿ ಪುಟ್ಟಸ್ವಾಮಿ, ದಂಡೋರ ಮಂಜುನಾಥ್, ಆಲದ ಹಳ್ಳಿ ವೆಂಕಟೇಶ್, ಪ್ರಕಾಶ್ ಇದ್ದರು.

ತಾಂತ್ರಿಕ ಯುಗದಲ್ಲಿ ನಿರ್ಮಾಣ ಯೋಜನೆ ಪಾತ್ರ ಮಹತ್ವದ್ದು

• ಪ್ರಜೋದಯ ವರದಿ

ಹಾಸನ: ಆಧುನಿಕ ತಂತ್ರಜ್ಞಾನ ಯುಗದಲ್ಲಿ ನಿರ್ಮಾಣ ಯೋಜನೆಗಳ ವಿನ್ಯಾಸ ಮತ್ತು ಕಾರ್ಯಗತಗೊಳಿಸುವಿಕೆಯಲ್ಲಿ ಮಹತ್ವದ ಬದಲಾವಣೆ ತರುತ್ತಿದೆಂದು ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಅಧ್ಯಕ್ಷ ಆರ್.ಟಿ. ದ್ಯಾವೇಗೌಡ ಅವರು ಹೇಳಿದರು.

ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸಿವಿಲ್ ಇಂಜಿನೀಯರಿಂಗ್ ಹಾಗು ಸ್ಕಿಲ್ ಅಂಡ್ ಕನ್ಸಲ್ಟೆನ್ಸಿ ಕೇಂದ್ರದಿಂದ ಆಯೋಜಿಸಿದ್ದ ಬಿಲ್ಡಿಂಗ್ ಇನ್ಫರ್ಮೇಷನ್ ಮಾಡಲಿಂಗ್ (ಬಿ.ಐ.ಎಂ.) ಕುರಿತ ಮೂರು ದಿನಗಳ ಸಾಫ್ಟ್‌ವೇರ್ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಿರ್ಮಾಣ ಕ್ಷೇತ್ರದಲ್ಲಿ ಡಿಜಿಟಲ್ ಪರಿವರ್ತನೆ ಅನಿವಾರ್ಯವಾಗಿದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಬಿಐಎಂ ತಂತ್ರಜ್ಞಾನವನ್ನು ಮೂಲ ಸೌಕರ್ಯ ಯೋಜನೆಗಳಲ್ಲಿ ಕಡ್ಡಾಯ ಗೊಳಿಸಲಾಗಿದೆ. ಭಾರತದಲ್ಲಿಯೂ ಅದರ ಅಳವಡಿಕೆ ವೇಗ ಪಡೆಯುತ್ತಿದೆ. ಇಂತಹ ತರಬೇತಿ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಸಹಕಾರಿ ಆಗಿದ್ದು, ವಿದ್ಯಾರ್ಥಿಗಳು ಸದುಪಯೋಗ ಪಡೆಯಬೇಕೆಂದು ಸಲಹೆ ನೀಡಿದರು.

ಪ್ರಾಂಶುಪಾಲ ಡಾ.ಹೆಚ್.ಜೆ. ಅಮರೇಂದ್ರ, ಅವರು ಮಾತನಾಡಿ, ಬಿಐಎಂ ತಂತ್ರಜ್ಞಾನವು ನಿರ್ಮಾಣ ಕ್ಷೇತ್ರದಲ್ಲಿ ಯೋಜನೆ, ವಿನ್ಯಾಸ ಹಾಗು ಕಾರ್ಯಗತಗೊಳಿಸುವಿಕೆಯನ್ನು ಸುಧಾರಿಸುತ್ತಿದೆ ಎಂದರು.

ಹೈದರಾಬಾದ್‌ನ ತಜ್ಞ ಉದಯ ಶಂಕರ್ ರಾಮಸ್ವಾಮಿ ಅವರು ಕಾರ್ಯಕ್ರಮದ ರೂಪು ರೇಷೆಯನ್ನು ಪರಿಚಯಿಸಿ, ನ್ಯಾವಿಸ್ ವರ್ಕ್ಸ್ ಸಾಫ್ಟ್‌ವೇರ್ ಬಳಕೆ ಮೂಲಕ ಪ್ರಾಜೆಕ್ಟ್ ಇಂಟಿ ಗ್ರೇಶನ್, ಕ್ಲಾಶ್ ಡಿಟೆಕ್ಷನ್ ಹಾಗೂ ಸಿಮ್ಯುಲೇಶನ್ ವಿಧಾನಗಳನ್ನು ವಿವರಿಸಿದರು.

ಸ್ಕಿಲ್ ಅಂಡ್ ಕನ್ಸಲ್ಟೆನ್ಸಿ ಕೇಂದ್ರದ ಮುಖ್ಯಸ್ಥ ಡಾ.ಎ.ಜೆ.ಕೃಷ್ಣಯ್ಯ ಅವರು ಮಾತನಾಡಿ, ಇಂತಹ ಕಾರ್ಯಕ್ರಮಗಳು ಶೈಕ್ಷಣಿಕ ಹಾಗು ಉದ್ಯಮದ ಅವಶ್ಯಕತೆಗಳ ನಡುವಿನ ಅಂತರ ಕಡಿಮೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆಂದು ಹೇಳಿದರು.

ಸಂಸ್ಥೆಯ ಖಜಾಂಚಿ ಹೆಚ್.ಡಿ. ಪಾರ್ಶ್ವನಾಥ್, ಪ್ರೊ.ಡಾ.ಹೆಚ್.ಎಸ್. ನರಸಿಂಹನ್, ಸಿವಿಲ್ ವಿಭಾಗದ ಮುಖ್ಯಸ್ಥೆ ಡಾ.ಸುಮನಾ ಜೈಪ್ರಕಾಶ್, ಕಾರ್ಯಕ್ರಮ ಸಂಯೋಜಕ ಡಾ. ಕೆ.ಸಿ.ಮನು, ಸಿ.ಮಧುಶ್ರೀ, ಬಿ.ಎಸ್. ಶಮನಾ ಇತರರಿದ್ದರು.

ಎಂಎಲ್‌ಸಿ, ನಿಗಮದಲ್ಲಿ ಮುಸ್ಲಿಂ ನಾಯಕರಿಗೆ ಆದ್ಯತೆ: ಡಿಕೆಶಿ ಭರವಸೆ

• ಪ್ರಜೋದಯ ವರದಿ

ದಾವಣಗೆರೆ: ದಕ್ಷಿಣ ವಿಧಾನ ಸಭಾ ಕ್ಷೇತ್ರ ಗೆಲ್ಲುವ ಮಾನದಂಡ ಆಧರಿಸಿ ಸಮರ್ಥ ಶಾಮನೂರು ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಲಾಗಿದೆ. ಮುಸ್ಲಿಂ ಸಮುದಾಯದ ಮುಖಂಡರಿಗೆ ವಿಧಾನಪರಿಷತ್ ಹಾಗೂ ನಿಗಮ ಮಂಡಳಿ ನೇಮಕಾತಿ ಯಲ್ಲಿ ಒತ್ತು ನೀಡಲಾಗುವುದೆಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಆಶ್ವಾಸನೆ ನೀಡಿದರು.

ಚುನಾವಣೆಗೂ ಮುನ್ನ ನಡೆದ ಸಮೀಕ್ಷೆಯಲ್ಲಿ ಸಮರ್ಥ ಶಾಮನೂರು ಪರವಾದ ಒಲವು ವ್ಯಕ್ತವಾಗಿದೆ. ಎಲ್ಲಾ ರೀತಿಯ ಲೆಕ್ಕಾ ಚಾರ ಹಾಕಿ ಪಕ್ಷದ ಅಧಿಕೃತ ಅಭ್ಯರ್ಥಿಯಾಗಿ ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗನಿಗೆ ಅವಕಾಶ ನೀಡಲಾಗಿದೆ. ಪಕ್ಷದ ವರಿಷ್ಠರು, ಮುಸ್ಲಿಂ ಸಮುದಾಯದ ಮುಖಂಡರೊಂದಿಗೆ ಸಭೆ ನಡೆಸಿ ಚರ್ಚಿಸಿ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಕಾಂಗ್ರೆಸ್ ಅಭ್ಯರ್ಥಿ ನಾಮಪತ್ರ ಸಲ್ಲಿಕೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ಕೇಳುವ ಹಕ್ಕು ಪಕ್ಷದ ಎಲ್ಲಾ ಕಾರ್ಯಕರ್ತರಿಗೂ ಇದೆ. ದಕ್ಷಿಣ ಕ್ಷೇತ್ರದ ಟಿಕೆಟ್‌ಗೆ ಮುಸ್ಲಿಂ ಸಮು ದಾಯ ಬೇಡಿಕೆ ಇಟ್ಟಿದ್ದು ತಪ್ಪಲ್ಲ. ಅಬ್ದುಲ್ ಜಬ್ಬಾರ್ ಮೂರು ಬಾರಿ ವಿಧಾನಪರಿಷತ್ ಸದಸ್ಯರಾಗಲು ಪಕ್ಷ ಅವಕಾಶ ಮಾಡಿಕೊಟ್ಟಿದೆ. ಸಾದಿಕ್ ಪೈಲ್ವಾನ್ ಅವರನ್ನು ವಿಶ್ವಾಸಕ್ಕೆ ಪಡೆ ಯುತ್ತೇವೆ. ಚುನಾವಣಾ ಪ್ರಚಾರಕ್ಕೆ ಬಂದಾಗ ಮತ್ತೊಂದು ಸುತ್ತಿನ ಮಾತುಕತೆ ನಡೆಸುತ್ತೇವೆಂದು ಹೇಳಿದರು.

ಶಾಮನೂರು ಶಿವಶಂಕರಪ್ಪ ಅವರು ದಾವಣಗೆರೆ ಜಿಲ್ಲೆಯನ್ನು ಚೆನ್ನಾಗಿ ಅಭಿವೃದ್ಧಿ ಮಾಡಿದ್ದಾರೆ. ಬೆಂಗಳೂರು ನಗರಕ್ಕಿಂತಲೂ ಯೋಜನಾಬದ್ಧವಾಗಿ ನಿರ್ಮಿಸಿದ್ದಾರೆ. ಕೈಗಾರಿಕಾ ನಗರವನ್ನು ಶಿಕ್ಷಣ ಕಾಶಿಯಾಗಿ ರೂಪಿಸಿದ್ದಾರೆ. ವಿದೇಶಿ ವಿದ್ಯಾರ್ಥಿಗಳು ಕೂಡ ವ್ಯಾಸಂಗಕ್ಕೆ ದಾವಣಗೆರೆಗೆ ಬರುತ್ತಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಲಸಿಕೆಯನ್ನು ಉಚಿತವಾಗಿ ನೀಡಿ ಅನನ್ಯ ಸೇವೆಸಲ್ಲಿಸಿದ್ದಾರೆಂದುಕೊಂಡಾಡಿದರು.

ರಸ್ತೆ ವಿಚಾರಕ್ಕೆ ಮೂವರ ಮೇಲೆ ಹಲ್ಲೆ

• ಪ್ರಜೋದಯ ವರದಿ

ಬೇಲೂರು: ಮನೆ ಮುಂದಿನ ರಸ್ತೆ ವಿಚಾರವಾಗಿ ಮೂವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ಹಂಚಿಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರಮೇಶ, ಕಿರಣಕುಮಾರ್ ಹಾಗು ಸುಶೀಲಾ ಗಾಯಾಳುಗಳು. ಅದೇ ಊರಿನ ಗಂಗಾ ಬೋವಿ, ಶಿವ ಕುಮಾರ, ಕಿರಣ್, ಸೋಮ, ಆನಂದ, ಪ್ರತಾಪ್, ಪುನೀತ್, ಪ್ರಸನ್ನ, ನಾಗ ಬೋವಿ ಮತ್ತು ಮಂಜಾಬೋವಿ ಎಂಬುವವರು ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ.

ಸರ್ಕಾರಿ ಜಾಗದಲ್ಲಿ ರಸ್ತೆ ನಿರ್ಮಿಸಿ ಕೊಡುವಂತೆ ಗೋವಿಂದಪ್ಪ ಅವರು ಮಾ.21 ರಂದು ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದ್ದರು. ಆ ಹಿನ್ನಲೆಯಲ್ಲಿ ಕಂದಾಯ ಇಲಾಖೆ ಸಿಬ್ಬಂದಿ ಅಳತೆ ಮಾಡಿ ರಸ್ತೆ ಮಾಡಿಸಿಕೊಟ್ಟಿ ದ್ದರು. ಗೋವಿಂದಪ್ಪ ಹಾಗು ಕುಟುಂಬಸ್ಥರು ನಿಗದಿತ ಜಾಗದಲ್ಲಿ ತಂತಿ ಬೇಲಿ ಅಳವಡಿಸುತ್ತಿದ್ದಾಗ ಅಲ್ಲಿಗೆ ಬಂದ ಆರೋಪಿಗಳು ಅವಾಚ್ಯ ಶಬ್ದಗಳಿಂದ ನಿಂದಿ ಸುತ್ತಾ ಹಲ್ಲೆ ಮಾಡಿದ್ದಾರೆ. ಗಾಯಾಳುಗಳು ಹಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದಲ್ಲಿ ಮಾ.25ಕ್ಕೆ ಸ್ವಾಭಿಮಾನ ನಡಿಗೆ

• ಪ್ರಜೋದಯ ವರದಿ

ಹಾಸನ: ಲಿಂಗತ್ವ ಮತ್ತು ಲೈಂಗಿಕ ಅಲ್ಪ ಸಂಖ್ಯಾತರ ಅಭಿವೃದ್ಧಿಗಾಗಿ ಪ್ರತ್ಯೇಕ ನಿಗಮ ಸ್ಥಾಪನೆ, ಕನಿಷ್ಠ 250 ಕೋ. ರೂ. ಅನುದಾನ ಮೀಸಲಿಡುವುದು ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮಾ.25ರಂದು ನಗರದಲ್ಲಿ ಸ್ವಾಭಿಮಾನ ನಡಿಗೆ 2026 ಹಮ್ಮಿಕೊಳ್ಳಲಾಗಿದೆ ಎಂದು ಲಿಂಗತ್ವ ಮತ್ತು ಲೈಂಗಿಕಬಹುತ್ವಕ್ಕಾಗಿ ಚಳವಳಿ ಸದಸ್ಯೆ ಮಂಜಮ್ಮ ಜೋಗತಿ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಬುಧವಾರ ಬೆಳಿಗ್ಗೆ 11 ಗಂಟೆಗೆ ಹೇಮಾವತಿ ಪ್ರತಿಮೆಯಿಂದ ನಡಿಗೆ ಪ್ರಾರಂಭವಾಗಿ ಅಂಬೇಡ್ಕರ್ ಭವನ ತಲುಪಲಿದೆ. ಸಾರ್ವಜನಿಕ ಸಭೆಯು ಅಂಬೇಡ್ಕರ್ ಭವನದಲ್ಲಿ ನಡೆಯಲಿದೆ. ಲಿಂಗತ್ವ ಮತ್ತು ಲೈಂಗಿಕ ಅಲ್ಪ ಸಂಖ್ಯಾತರ ಹಿತರಕ್ಷಣೆಗೆ ಸರ್ಕಾರ ಮುಂದಾಗಬೇಕು. ಉತ್ತಮ ವಸತಿ, ಆರೋಗ್ಯ, ಶಿಕ್ಷಣ ಹಾಗು ಉದ್ಯೋಗ ಸೌಲಭ್ಯ ಒದಗಿಸಬೇಕು. ಉಚಿತ ಲಿಂಗತ್ವ ದೃಢೀಕರಣ ಶಸ್ತ್ರ ಚಿಕಿತ್ಸೆ, ಪ್ರತಿ ಜಿಲ್ಲೆಯಲ್ಲಿ ವಿಶೇಷ ಆರೋಗ್ಯ ಕೇಂದ್ರ ಹಾಗು ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿಗೊಳಿಸ

ಬೇಕೆಂದು ಆಗ್ರಹಿಸಿದರು.

1969ರಲ್ಲಿ ಅಮೇರಿಕಾದ ನ್ಯೂಯಾರ್ಕ್ ನಗರದ ಸ್ಟೋನ್ ವಾಲ್ ಇನ್ ಬಾರ್ ಮೇಲೆ ನಡೆದ ಪೊಲೀಸ್ ದಾಳಿ ವಿರುದ್ಧ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರು ತೋರಿದ ಪ್ರತಿರೋಧವು ವಿಶ್ವದಾದ್ಯಂತ ಚಳವಳಿಗೆ ದಾರಿ ಮಾಡಿಕೊಟ್ಟಿದೆ. ಅದರ ನೆನಪಿನಲ್ಲಿ ಪ್ರತಿ ವರ್ಷ ಸ್ವಾಭಿಮಾನ ನಡಿಗೆ ಹಮ್ಮಿಕೊಳ್ಳಲಾಗುತ್ತಿದೆಂದು ವಿವರಿಸಿದರು.

ನಿರಂತರ ಹೋರಾಟದ ಪರಿಣಾಮ ಕರ್ನಾಟಕದಲ್ಲಿ ಸರ್ಕಾರಿ ಉದ್ಯೋಗಗಳಲ್ಲಿ ಶೇ.1ರಷ್ಟು ಮೀಸಲಾತಿ, ಉಚಿತ ಬಸ್ ಪ್ರಯಾಣ ಸೇರಿ ಹಲವು ಸೌಲಭ್ಯಗಳು ದೊರೆತಿವೆ. 2026-27ರ ರಾಜ್ಯ ಬಜೆಟ್‌ನಲ್ಲಿ ಈ ಸಮುದಾಯದ ಅಭಿವೃದ್ಧಿಗೆ ಅನುದಾನ ಘೋಷಿಸದಿರುವುದು ಬೇಸರ ತರಿಸಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಅದಿಲ್, ಟಿ.ಎನ್.ಮಂಜುನಾಥ್, ನವೀನ್ ಕುಮಾರ್, ಮಾರ್ತಮ್ಮ ಇತರರಿದ್ದರು.

ಹಳೆ ಮೀಸಲಾತಿ ಜಾರಿಗೆ ಒತ್ತಾಯಿಸಿ ಪ್ರತಿಭಟನೆ

• ಪ್ರಜೋದಯ ವರದಿ

ಅರಕಲಗೂಡು: ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟವು ಒಳ ಮೀಸಲಾತಿ ರಹಿತ ಹಳೆ ಮೀಸಲಾತಿ ಜಾರಿಗೆ ಒತ್ತಾಯಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮಾ.25 ರಂದು ಬೃಹತ್ ಪ್ರತಿಭಟನಾ ಸಮಾವೇಶ ಹಮ್ಮಿಕೊಂಡಿದ್ದು, ತಾಲ್ಲೂಕಿನ ಬಲಗೈ ಸಮು ದಾಯದವರು ಪಾಲ್ಗೊಳ್ಳುವಂತೆ ವಕೀಲ ಬಿ.ಸಿ.ರಾಜೇಶ್ ಅವರು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳ ಮೀಸಲಾತಿ ಕುರಿ ತಂತೆ ಸರ್ಕಾರ ನೇಮಿಸಿದ್ದ ನಾಗ ಮೋಹನ್ ದಾಸ್ ಸಮಿತಿ ನೀಡಿರುವ ವರದಿಯಲ್ಲಿ ಬಲಗೈ ಸಮುದಾಯದ ವರಿಗೆ ತೀವ್ರ ಅನ್ಯಾಯವಾಗಿದೆ. ವರದಿ ಸಮರ್ಪಕ ರೀತಿಯಲ್ಲಿ ಇಲ್ಲ, ಹೀಗಾಗಿ ಒಳ ಮೀಸಲಾತಿ ರಹಿತ ಹಳೆ ಮೀಸಲಾತಿ ಜಾರಿಗೆ ಆಗ್ರಹಿಸಿ ಜ್ಞಾನಪ್ರಕಾಶ್ ಸ್ವಾಮೀಜಿ ನೇತೃತ್ವದಲ್ಲಿ ಬೆಂಗಳೂರು ಚಲೋ ಹಮ್ಮಿಕೊಳ್ಳಲಾಗಿದೆ ಎಂದರು.

ಒಳ ಮೀಸಲಾತಿ ಕುರಿತು ಸರ್ಕಾರ ನೇಮಿಸಿದ್ದ ಏಕಸದಸ್ಯ ವಿಚಾರಣಾ ಆಯೋಗದ ವರದಿ ಕುರಿತು ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಂಡು ನೇರ ನೇಮಕಾತಿಗೆ ಹೊರಡಿಸಿರುವ ಆದೇಶವು ಪರಿಶಿಷ್ಟ ಜಾತಿ ಬಲಗೈ ಸಮುದಾಯದ ಪಾಲಿಗೆ ಮರಣ ಶಾಸನವಾಗಿದೆ. ಅಸ್ಪೃಶ್ಯ ಸಮುದಾಯಗಳಾದ ಬಲಗೈ ಮತ್ತು ಎಡಗೈ ಸಮುದಾಯಗಳಿಗಿಂತ ಮೀಸಲಾತಿ ಪಟ್ಟಿಯಲ್ಲಿ ರುವ ಸ್ಪೃಶ್ಯ ಸಮಾಜಗಳು ಶೈಕ್ಷಣಿಕವಾಗಿ ಹೆಚ್ಚಿನ ಸ್ಥಾನಗಳನ್ನು ಪಡೆದಿರುವುದು ಎರಡೂ ಅಸ್ಪೃಶ್ಯ ಸಮುದಾಯಗಳಿಗೆ ಮಾಡಿರುವ ಅನ್ಯಾಯವಾಗಿದೆ. ನಾವಿಬ್ಬರೂ ಸೇರಿ ಈ ಅಸಮಾನತೆ ವಿರುದ್ಧ ಹೋರಾಟ ನಡೆಸಬೇಕಿತ್ತು. ನಮ್ಮಲ್ಲೇ ಅಸಮಾನತೆ ಉಂಟು ಮಾಡ ಲಾಗಿದೆ. ನಮ್ಮ ಹೋರಾಟ ಎಡಗೈ ಸಮಾಜದ ವಿರುದ್ಧವಲ್ಲ, ಬಲಗೈ ಸಮು ದಾಯಕ್ಕೆ ಆಗಿರುವ ಅನ್ಯಾಯ ಸರಿಪಡಿ ಸುವಂತೆ ಅಗ್ರಹಿಸುವುದಾಗಿದೆ ಎಂದು ಹೇಳಿದರು.

ಮಾ.25ರ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವ ಮೂಲಕ ಸಮುದಾಯದ ಹಿತ ಕಾಯುವಂತೆ ಮನವಿ ಮಾಡಿದರು.

ಕೃಷಿಯಲ್ಲಿ ತಂತ್ರಜ್ಞಾನಕ್ಕೆ ಹೆಚ್ಚಿನ ಒತ್ತು ನೀಡಿ

• ಪ್ರಜೋದಯ ವರದಿ

ಅರಕಲಗೂಡು: ರೈತರು ಕೃಷಿಯಲ್ಲಿ ತಂತ್ರಜ್ಞಾನಕ್ಕೆ ಹೆಚ್ಚಿನ ಒತ್ತು ನೀಡುವಂತೆ ಪ್ರಗತಿಪರ ಕೃಷಿಕ ಎಂ.ಸಿ. ರಂಗಸ್ವಾಮಿ ಅವರು ಸಲಹೆ ನೀಡಿದರು.

ತಾಲ್ಲೂಕಿನ ಮಲ್ಲಿಪಟ್ಟಣದಲ್ಲಿ ಇತ್ತೀಚೆಗೆ ನಡೆದ ಕಾಫಿ ಬೆಳೆಗಾರರ ಸಂಘದ ವಾರ್ಷಿಕ ಮಹಾ ಸಭೆಯಲ್ಲಿ ಮಾತನಾಡಿದ ಅವರು, ಕೃಷಿಯಲ್ಲಿ ಒಂದೇ ಬೆಳೆಗೆ ಸೀಮಿತಗೊಳ್ಳದೆ ವೈಜ್ಞಾನಿಕ ಪದ್ಧತಿ ಅಳವಡಿಕೆ ಮಾಡಿಕೊಂಡು ಮಿಶ್ರ ಬೆಳೆ ಬೆಳೆಯಬೇಕು. ಕಾಫಿ ತೋಟದಲ್ಲಿ ಅಂತರ ಬೆಳೆಯಾಗಿ ಏಲಕ್ಕಿ, ಕಾಳು ಮೆಣಸು, ಕಿತ್ತಳೆ ಮುಂತಾದ ಬೆಳೆಗಳನ್ನು ಬೆಳೆಯುವತ್ತಾ ಗಮನ ನೀಡಬೇಕು ಎಂದರು.

ವಿದ್ಯಾವಂತ ಯುವಕರು ಶಿಕ್ಷಣ ಪಡೆದು ಸರ್ಕಾರಿ ನೌಕರಿಗಾಗಿ ಕಾದು ಕೂರದೆ ಕೃಷಿಯಲ್ಲಿ ಪ್ರಯೋಗಾತ್ಮಕವಾಗಿ ತೊಡಗಿಸಿ ಕೊಳ್ಳಬೇಕು. ಸಮಗ್ರ ಕೃಷಿ, ಹೈನುಗಾರಿಗೆ ಅಳವಡಿಸಿಕೊಂಡರೆ ಆರ್ಥಿಕವಾಗಿ ಹೆಚ್ಚಿನ ಗಳಿಕೆ ಸಾಧ್ಯವಾಗಲಿದೆ. ಸರ್ಕಾರ ರೈತರಿಗೆ ಹೆಚ್ಚಿನ ಸೌಕರ್ಯಗಳ ಜೊತೆಗೆ ಉತ್ತಮ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಗಮನ ನೀಡಬೇಕು ಎಂದರು.

ಹಾಸನ ಕಾಫಿ ಮಂಡಳಿ ಉಪ ನಿರ್ದೇಶಕ ಶಕ್ತಿ ಅವರು ಮಾತನಾಡಿ, ರೈತರು ಮಣ್ಣು ಪರೀಕ್ಷೆಗೆ ಹೆಚ್ಚಿನ ಒತ್ತು ನೀಡಬೇಕು. ಅಗತ್ಯ ಪೋಷಕಾಂಶಗಳನ್ನು ನೀಡಿ ಮಣ್ಣಿನ ಆರೋಗ್ಯ ಕಾಪಾಡಿಕೊಂಡರೆ ಉತ್ತಮ ಬೆಳೆ ಬೆಳೆಯಲು ಸಾಧ್ಯ. ಕಾಫಿ ಮಂಡಳಿ ಬೆಳೆಗಾರರಿಗೆ ಅಗತ್ಯ ಸವಲತ್ತು ಒದಗಿಸಲು ಕ್ರಮ ವಹಿಸಿದೆ ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ತಾಲ್ಲೂಕು ಕಾಫಿ ಬೆಳೆಗಾರರ ಸಂಘದ ಅಧ್ಯಕ್ಷ ಮಾಗಲು ಬಸವರಾಜ್, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಡಿ.ರಾಜೇಶ್ ಮಾತನಾಡಿದರು. ಸಂಘದ ಕಾರ್ಯದರ್ಶಿ ವಿಜಯಕುಮಾರ್ ವರದಿ ಮಂಡಿಸಿದರು. ಪ್ರಗತಿ ಪರ ಕೃಷಿಕ ಎಂ.ಸಿ. ರಂಗಸ್ವಾಮಿ ಅವರನ್ನು ಗೌರವಿಸಲಾಯಿತು.

ಮಾಜಿ ಶಾಸಕ ಎ.ಟಿ.ರಾಮಸ್ವಾಮಿ, ತಾಲ್ಲೂಕು ಕಾಫಿ ಬೆಳೆಗಾರರ ಸಂಘದ ಉಪಾಧ್ಯಕ್ಷ ಎ.ಸಿ.ದೇವರಾಜೇಗೌಡ, ರಾಜ್ಯ ಕಾಫಿ ಬೆಳೆಗಾರರ ಸಂಘದ ನಿರ್ದೇಶಕ ವೆಂಕಟೇಶ್, ಬೆಳೆಗಾರರಾದ ಕೃಷ್ಣರಾಜ್, ಬಸವರಾಜು, ಕಾಂತರಾಜ್, ಎಂ.ಎಂ.ವಿಶ್ವನಾಥ್, ವಿಜಯ್, ಅರುಣ್ ಕುಮಾರ್, ಸುಮಿತ್ರಮ್ಮ, ಶಿವಣ್ಣ, ಲೋಹಿತ್ ಉಪಸ್ಥಿತರಿದ್ದರು.

ಬೆಳಗೀಹಳ್ಳಿ ಕೃಷಿ ಪತ್ತಿನ ಸಂಘಕ್ಕೆ ಗೋಪಿ ಅಧ್ಯಕ್ಷ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ತಾಲ್ಲೂಕಿನ ಬೆಳಗೀಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಕಾವಲು ಹೊಸೂರು ಗ್ರಾಮದ ಹೆಚ್.ಎಸ್. ಗೋಪಿ ಅವರು ಸೋಮವಾರ ಅವಿರೋಧ ಆಯ್ಕೆಯಾದರು. ಸಂಘವು 11 ನಿರ್ದೇಶಕರ ಬಲ ಹೊಂದಿದ್ದು ಚುನಾವಣಾ ಪ್ರಕ್ರಿಯೆಯಲ್ಲಿ 10 ಮಂದಿ ಪಾಲ್ಗೊಂಡಿದ್ದರು.

ಹೆಚ್.ಎಸ್.ಗೋಪಿ ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾ ಅಧಿಕಾರಿಗಳು ಹೆಚ್.ಎಸ್.ಗೋಪಿ ಅವರನ್ನೇ ಅವಿರೋಧ ಆಯ್ಕೆ ಮಾಡಿ ಘೋಷಿಸಿದರು.

ಬಳಿಕ ನೂತನ ಅಧ್ಯಕ್ಷ ಹೆಚ್.ಎಸ್. ಗೋಪಿ ಅವರು ಮಾತನಾಡಿ, ಕ್ಷೇತ್ರದ ಶಾಸಕ ಸಿ.ಎನ್. ಬಾಲಕೃಷ್ಣ ಅವರ ಮಾರ್ಗದರ್ಶನದಲ್ಲಿ ಎಲ್ಲಾ ನಿರ್ದೇಶಕರ ಸಹಕಾರದೊಂದಿಗೆ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದರು.

ಸಂಘವು ಪಾರದರ್ಶಕ ವ್ಯವಹಾರದೊಂದಿಗೆ ಉತ್ತಮ ಯೋಜನೆಗಳನ್ನು ರೂಪಿಸುವ ಮೂಲಕ ಫಲಾನುಭವಿಗಳಿಗೆ

ಹೆಚ್ಚಿನ ಸಹಕಾರಿಯಾಗಿದೆ. ಶಾಸಕರ ಚಿಂತನೆ ಹಾಗು ಮಾರ್ಗ ದರ್ಶನದಲ್ಲಿ ಕೇವಲ 10 ಗುಂಟೆ ಜಮೀನು ಹೊಂದಿರುವ ರೈತರಿಗೂ ಸಹ ಬಡ್ಡಿ ರಹಿತ ಸಾಲ ನೀಡುವ ವ್ಯವಸ್ಥೆ ಮಾಡಿರುವುದು ಉತ್ತಮ ಬೆಳವಣಿಗೆಯಾಗಿದೆ ಎಂದು ತಿಳಿಸಿದರು.

ಹೆಚ್‌ಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ಅಭಿಲಾಷ್ ಹಾಗು ಮಧು ಅವರು ಚುನಾವಣಾ ಕರ್ತವ್ಯ ನಿರ್ವಹಿಸಿದರು. ಅವಿರೋಧವಾಗಿ ಆಯ್ಕೆಯಾದ ಹೆಚ್. ಎಸ್.ಗೋಪಿ ಅವರನ್ನು ಸಂಘದ ವತಿಯಿಂದ ಅಭಿನಂದಿಸಲಾಯಿತು. ಕಾರ್ಯಕರ್ತರು ಸಿಹಿ ಹಂಚಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆ ಮಾಜಿ ಅಧ್ಯಕ್ಷ ತೋಟಿ ಜಯರಾಮ್, ತಾಲ್ಲೂಕು ಜೆಡಿಎಸ್ ಮುಖಂಡ ನಾಗೇಂದ್ರ, ಬಾಬು, ಟಿಎಪಿಸಿಎಂಎಸ್ ನಿರ್ದೇಶಕ ತೋಟಿ ನಾಗರಾಜು, ಮಾಜಿ ಉಪ ಪ್ರಧಾನರು ಟಿ.ನಂಜಪ್ಪ, ಪ್ರಮುಖರಾದ ಸುಂದರ್, ಸಂಘದ ಮಾಜಿ ಅಧ್ಯಕ್ಷ ಟಿ.ಪಿ.ಮಂಜು, ಕೆ.ಪಿ.ಅಶೋಕ್, ಉಪಾಧ್ಯಕ್ಷೆ ಭಾರತಿ, ನಿರ್ದೇಶಕರಾದ ಕೆ.ಎನ್.ನಾಗರಾಜ್, ಬಿ.ಕೆ.ರವಿ, ಟಿ.ಎನ್.ನಟರಾಜ್, ಬಿ. ಎಸ್.ರವಿ, ಎಂ.ಆರ್.ಸುರೇಶ್, ಜಿ. ಮಂಜುನಾಥ್, ರಾಧಮ್ಮ, ರಂಗಸ್ವಾಮಿ, ಲೆಕ್ಕಾಧಿಕಾರಿಯಶಸ್ವಿನಿ, ನೌಕರರಾದ ಧನಂಜಯ್, ಕುಮಾರಸ್ವಾಮಿ, ಚಂದ್ರಕಲಾ ಹಾಗು ಇತರರು ಇದ್ದರು.

ಪುರಸಭೆ ಮಾಜಿ ಅಧ್ಯಕ್ಷ ಅಶೋಕ್ ಆರೋಪ | ಪುರಸಭೆ ತುರ್ತು ಸಾಮಾನ್ಯ ಸಭೆ

ಆಶ್ರಯ ಯೋಜನೆಗೂ ಕೆಲವರಿಂದ ಅಡ್ಡಿ

• ಪ್ರಜೋದಯ ವರದಿ

ಬೇಲೂರು: ಆಶ್ರಯ ನಿವಾಸಿಗಳಿಗಾಗಿ ಮೀಸಲಿಟ್ಟಿರುವ ಜಾಗದಲ್ಲಿ ಯೋಜನೆ ಸಫಲ ವಾಗಬಾರದೆಂಬ ದುರುದ್ದೇಶದಿಂದ ಪುರಸಭೆ ಸದಸ್ಯರೇ ಸ್ಥಳೀಯರಿಂದ ನ್ಯಾಯಾಲಯಕ್ಕೆ ಅರ್ಜಿ ಹಾಕಿಸುತ್ತಿದ್ದಾರೆಂದು ಪುರಸಭೆ ಮಾಜಿ ಅಧ್ಯಕ್ಷ ಎ. ಆರ್.ಅಶೋಕ್ ಅವರು ಆರೋಪಿಸಿದರು.

ಪಟ್ಟಣದ ಪುರಸಭೆ ವೇಲಾಪುರಿ ಸಭಾಂಗಣದಲ್ಲಿ ಪ್ರಭಾರ ಅಧ್ಯಕ್ಷೆ ಉಷಾ ಸತೀಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ತುರ್ತು ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಸರ್ವೆ ನಂ. 158 ಮತ್ತು 19ರಲ್ಲಿ ಆಶ್ರಯ ನಿವಾಸಿಗಳಿಗಾಗಿ ಜಾಗ ನಿಗದಿಪಡಿಸಲಾಗಿದೆ. ಅಧಿಕಾರಿಗಳು ಬಡವರ ಪರ ಕೆಲಸ ಮಾಡಬೇಕು. ಯಾರು ಎಷ್ಟೇ ಪ್ರಭಾವ ಬೀರಿದರೂ ಬಡವರಿಗೆ ಅನ್ಯಾಯವಾಗಬಾರದೆಂದರು.

ಚನ್ನಕೇಶವ ದೇಗುಲ ಐತಿಹಾಸಿಕ ಸ್ಥಳವಾಗಿದ್ದು ಸುತ್ತ 100 ಮೀಟರ್ ವ್ಯಾಪ್ತಿಯಲ್ಲಿ ಕಟ್ಟಡಗಳ ನಿರ್ಮಾಣ, ರಿಪೇರಿ ಕೆಲಸ ಮಾಡಬಾರದೆಂಬ ಆದೇಶವಿದ್ದರೂ ದೇವಸ್ಥಾನ ರಸ್ತೆಯಲ್ಲಿ ಹಳೆಯ ಕಟ್ಟಡ ಅರ್ಧ ಭಾಗದಲ್ಲಿ ಧ್ವಂಸಗೊಂಡು ಪ್ರವಾಸಿಗರಿಗೆ ಕಿರಿಕಿರಿ ಉಂಟು

ಮಾಡುತ್ತಿದೆ. ಪುರಸಭೆಯಿಂದ ಅನುಮತಿ ನೀಡದೆ ಇದ್ದರೂ ಹೇಗೆ ಕಟ್ಟಡ ದುರಸ್ತಿ ಕಾರ್ಯ ನಡೆಯುತ್ತಿದೆ. ಯಾರ ಕುಮ್ಮಕ್ಕಿನಿಂದ ಕೆಲಸ ಮಾಡುತ್ತಿದ್ದೀರಾ ಎಂದು ಮುಖ್ಯಾಧಿಕಾರಿಯನ್ನು ಪ್ರಶ್ನಿಸಿದರು.

ಉಷಾ ಸತೀಶ್ ಅವರು ಮಾತನಾಡಿ, 20 ವರ್ಷಗಳ ಹಳೆಯ ಕಟ್ಟವಾಗಿರುವುದರಿಂದ ಅನಾಹುತ ಸಂಭವಿಸಬಾರದೆಂಬ ಮುನ್ನೆಚ್ಚರಿಕೆಯಿಂದ ಕೆಲಸ ಮಾಡಲಾಗುತ್ತಿದೆ. ಅಭಿವೃದ್ಧಿ ಕಾಮಗಾರಿಗೆ ಯಾರ ಕುಮ್ಮಕ್ಕು ಬೇಕಾಗಿಲ್ಲ. ಸದ್ಯಕ್ಕೆ ಟಾರ್ಪಾಲ್ ಮುಚ್ಚುವ ವ್ಯವಸ್ಥೆ ಮಾಡಲಾಗುವುದೆಂದರು.

ಸದಸ್ಯೆ ತೀರ್ಥಕುಮಾರಿ ವೆಂಕಟೇಶ್ ಅವರು ಮಾತನಾಡಿ, ತುರ್ತು ಸಭೆಯಲ್ಲಿ ನಿಗದಿತ ವಿಚಾರಗಳ ಚರ್ಚೆಯಾಗಬೇಕು ಎಂದಾಗ ಆಕ್ಷೇಪ ವ್ಯಕ್ತಪಡಿಸಿದ ಸದಸ್ಯ ಅಶೋಕ್ ಅವರು, ಎಲ್ಲಾ ವಿಚಾರ ಮಾತನಾಡುವ ಹಕ್ಕು ಪುರಸಭಾ ಸದಸ್ಯರಿಗೆ ಇದೆ. ಊರಿನ ಅಭಿವೃದ್ಧಿ ಬಗ್ಗೆ ಮಾತ್ರ ಚರ್ಚೆ ಮಾಡುತ್ತಿದ್ದೇವೆ ಎಂದರು.

ಪುರಸಭೆ ಮುಖ್ಯಾಧಿಕಾರಿ ಬಸವರಾಜು ಶಿಗ್ಗಾವಿ ಅವರು ಮಾತನಾಡಿ, ಕಳೆದ ಸಾಲಿಗಿಂತ ಈ ಬಾರಿ ಕಡಿಮೆ ಮೊತ್ತಕ್ಕೆ ಸುಂಕ ಬಿಡ್ ಆಗಿರುವುದರಿಂದ ಪುರಸಭೆ ಬೊಕ್ಕಸಕ್ಕೆ ಆದಾಯ ಕುಸಿತ ಉಂಟಾಗಿದೆ. ಅದಕ್ಕೆ ಸದಸ್ಯರ ಅನುಮತಿ ಅಗತ್ಯವಿದೆ ಎಂದು ಪ್ರಸ್ತಾಪಿಸಿದರು. ಸದಸ್ಯ ರಾದ ಅಶೋಕ್, ಶೈಲೇಶ್, ಜಗದೀಶ್, ದಿವ್ಯ ಗಿರೀಶ್, ಪುಟ್ಟಸ್ವಾಮಿ ಅವರು ಮಾತನಾಡಿ, ಹಿಂದಿನ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಿ ಹಣ ಪಾವತಿಸದೇ ತಲೆಮರೆಸಿಕೊಂಡಿದ್ದರಿಂದ ಈ ಬಾರಿ 9 ಲಕ್ಷ 45 ಸಾವಿರ ರೂ.ಗೆ ನಿಂತಿರುವ ಹರಾಜನ್ನು ಅನುಮೋದಿಸಲು ಒಪ್ಪಿಗೆ ಸೂಚಿಸಿದರು.

ಸದಸ್ಯೆ ತೀರ್ಥಕುಮಾರಿ ವೆಂಕಟೇಶ್ ಮಾತನಾಡಿ, ಕಳೆದ ವರ್ಷ 18 ಲಕ್ಷ ರೂ.ಗೆ ಹೋದ ಹರಾಜು ಈ ಬಾರಿ 9 ಲಕ್ಷ ರೂ.ಗೆ ಕುಸಿದಿರುವುದು ಪುರಸಭೆಗೆ ನಷ್ಟಕರವಾಗಿದೆ. ಇದರಿಂದ ಪುರಸಭೆಗೆ ಆರ್ಥಿಕವಾಗಿ ನಷ್ಟ ಉಂಟಾಗುತ್ತದೆ. ನಾವು ಇಲ್ಲಿ ಯಾರ ಪರವೂ ಮಾತನಾಡುತ್ತಿಲ್ಲ. ಪುರಸಭೆಯ ಆದಾಯ ಹೆಚ್ಚಿಸುವುದೇ ನಮ್ಮೆಲ್ಲರ ಆಶಯ ಎಂದು ಅಭಿಪ್ರಾಯಪಟ್ಟರು.

ಸದಸ್ಯ ಜಗದೀಶ್ ಮಾತನಾಡಿ, ಪುರಸಭೆಯ ಪ್ರಮುಖ ಆದಾಯ ಮೂಲ ಮಳಿಗೆಗಳು ಆಗಿದ್ದರೂ, ಅವುಗಳ ಸ್ಥಿತಿ ಹದಗೆಟ್ಟಿದೆ. ಕೆಲವರು ಬಿಡ್ ಮಾಡಿ ಬಾಡಿಗೆ ನೀಡದೆ ಕೋಟ್ಯಾಂತರ ರೂ. ಬಾಕಿ ಉಳಿಸಿಕೊಂಡು ಪ್ರಕರಣ ನ್ಯಾಯಾಲಯ ಮೆಟ್ಟಿಲೇರುವುದು ಒಳ್ಳೆಯ ಬೆಳವಣಿಗೆಯಲ್ಲ ಎಂದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK